ಶುಕ್ರವಾರ, ಅಕ್ಟೋಬರ್ 17, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಗಂಭೀರ ನಡಿಗೆ...

ಎಚ್.ಡಿ.ಕೋಟೆ ತಾಲ್ಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಅಂತರಸಂತೆ ವನ್ಯಜೀವಿ ವಲಯದ ದಮ್ಮನಕಟ್ಟೆ ಸಫಾರಿಯಲ್ಲಿ ಬುಧವಾರ ಕಾಣಿಸಿದ ಹೆಣ್ಣು ಹುಲಿ ಪ್ರವಾಸಿಗರಿಗೆ ಖುಷಿ ನೀಡಿತು

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ



ಈ ದೀಪಾವಳಿಯಲ್ಲಿ ಬೋಳಾಸ್ ನಮ್ಮ ಜೀವನವನ್ನು ಇನ್ನೂ
ಪ್ರಕಾಶಮಾನವಾಗಿಸುವ ಅಪರೂಪದ ಸಂಬಂಧಗಳನ್ನ ಆಚರಿಸುತ್ತಿದೆ.
ಇದು ನಮ್ಮ ಬದುಕನ್ನು ಸುಂದರ ಎನಿಸುವಂತೆ ಮಾಡುವವರಿಗೆ,
ನಮ್ಮ ಮುಖದಲ್ಲಿ ನಗು ಮೂಡಿಸುವವರಿಗೆ ಹಾಗೂ ನಮ್ಮ ದೀಪಾವಳಿಯ
ಬೆಳಕನ್ನು ಇನ್ನಷ್ಟು ಪ್ರಕಾಶಮಾನವಾಗಿಸುವವರಿಗೆ.

HAPPY DEEPAVALI FROM BOLAS



ಪುಷ್ಪಕವಿಮಾನಕ್ಕಾಗಿ ಕಾಯಬೇಡಿ,
ನಿಮ್ಮ ಹತ್ತಿರದ ಬೋಳಾಸ್ ಸ್ಟೋರ್ ಗೆ ಭೇಟಿ ನೀಡಿ

ಶೈಯಾತ್ಮಕ ರಚನೆ. * ಷರತ್ತುಗಳು ಮತ್ತು ನಿಯಮಗಳು ಅನ್ವಯವಾಗುತ್ತವೆ.

UP TO 40% OFF!* FACTORY PRICE ADVANTAGE
*ಸ್ಟೋರ್ ಉತ್ಪನ್ನಗಳ ಮೇಲೆ

DRY FRUITS | NUTS | SWEETS & MORE FACTORY PRICE ADVANTAGE | ಬೋಳಾಸ್ Bolas

ಚೆನ್ನಪಟ್ಟಣ-9483548777 | **ಕನಕಪುರ**-9019963559 | **ತುಮಕೂರು**-9364009426 | **ಬನಶಂಕರಿ**-9364016910 | **ಬಾಣಸವಾಡಿ**-9364016909 | **ಬೆಂಗಳೂರು ಮೀನಾಕ್ಷಿಮಾಲ್**-9606019779 | **ಬೆಂಗಳೂರು ಟಿಸಿ ಪಾಳ್ಯ**-9364016907 | **ಬಸವೇಶ್ವರ ನಗರ**-9364016904 | **ಗಾಂಧಿ ಬಝಾರ್**-9364016908 | **ಹರಳೂರು**-6364863287 | **ಎಚ್.ಎಸ್.ಆರ್**-6364863283 | **ಜಯನಗರ**-6364863281 | **ನೆಲಮಂಗಲ**-9364016903 | **ನ್ಯೂ ತಿಪ್ಪಸಂದ್ರ ಮೈನ್ ರೋಡ್**-6364863285 | **ಆಫ್ ಸರ್ಜಾಪುರ ರೋಡ್**-6364863286 | **ಆರ್ ಟಿ ನಗರ**-6364863284 | **ಸಂಪಿಗೆ ರೋಡ್ ಮಲ್ಲೇಶ್ವರಂ**-9364016905 | **ಉತ್ತರಹಳ್ಳಿ**-9364016911 | **ವಿದ್ಯಾರಣ್ಯಪುರ**-9364016902 | **ವಿಜಯನಗರ ಕ್ವಾರ್ಟ ರೋಡ್**-9364016906 | **ವಿಲ್ಸನ್ ಗಾರ್ಡನ್**-6364863282 | **ಮತ್ತಿಕೆರೆ**-9364016901 | **ಕೆಂಗೇರಿ**-9364016916 | **ಬಿಟಿಎಂ ಲೇಔಟ್**-9364016917 | **ನಾಗರಭಾವಿ**-9972058196 | **ಪಿರಿಯಾಪಟ್ಟಣ**-9035079192 | **ತುಮಕೂರು (ಬಿ. ಹೆಚ್. ರೋಡ್)**-9035079191 | **ಚಿಕ್ಕಬಳ್ಳಾಪುರ**-9035079192 | **ಬಿಇಮ್ ಲ್(ಅರ್. ಅರ್.ನಗರ)**-6366923566 | **ಗಿರಿನಗರ**-9035079198

/bolas.outlet
www.bolas.co.in

ಶುಕ್ರವಾರ, ಅಕ್ಟೋಬರ್ 17, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಓ ಅರಗಿಣಿಯೇ...
ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಮುದ್ದುಗಿಳಿಯೊಂದು ಹೂವನ್ನು ಕಚ್ಚಿ ಹಿಡಿದಿತ್ತು



ಅಭಿಷೇಕ್‌ಗೆ ಗೌರವ
ಭಾರತ ಟಿ20 ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು ಐಸಿಸಿ ‘ಸೆಪ್ಟೆಂಬರ್ ತಿಂಗಳ ಆಟಗಾರ’ ಗೌರವಕ್ಕೆ ಪಾತ್ರರಾಗಿದ್ದಾರೆ

ಪಿಆರ್‌ಆರ್ ಪರಿಹಾರ: ರೈತರಿಗೆ ನಾಲ್ಕು ಆಯ್ಕೆ

ಯೋಜನೆ ಸ್ಥಗಿತ ಇಲ್ಲ • 117 ಕಿ.ಮೀ. ಉದ್ದದ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್‌ಗೆ ಸಚಿವ ಸಂಪುಟದ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್‌ಗೆ (ಪಿಆರ್‌ಆರ್) ಭೂಮಿ ನೀಡುವ ರೈತರಿಗೆ ನಾಲ್ಕು ಆಯ್ಕೆಗಳನ್ನು ನೀಡಲು ಹಾಗೂ ಯೋಜನೆಯನ್ನು ಯಾವುದೇ ಕಾರಣಕ್ಕೂ ನಿಲ್ಲಿಸದಿರಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಸಂಪುಟ ಸಭೆ ಬಳಿಕ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್, 'ಹಿಂದಿನ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿದ್ದ ಪೆರಿಫೆರಲ್ ರಿಂಗ್ ರಸ್ತೆಯನ್ನು 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ಎಂದು ಮರುನಾಮಕರಣ ಮಾಡಿ 117 ಕಿ.ಮೀ ಉದ್ದದ ರಸ್ತೆಗೆ ಅನುಮೋದನೆ ನೀಡಲಾಗಿದೆ. ನಗರದಲ್ಲಿ ಇಷ್ಟು ಪ್ರಮಾಣದ ಹೊಸ ರಸ್ತೆಯನ್ನು ಸೇರಿಸುವ ಮೂಲಕ ರಾಜ್ಯ ಸರ್ಕಾರ ಬೆಂಗಳೂರಿನ ಅಭಿವೃದ್ಧಿಗೆ ಹೊಸ ಅಧ್ಯಾಯ ಬರೆಯುತ್ತಿದೆ' ಎಂದರು.

ತುಮಕೂರು ರಸ್ತೆಯಿಂದ ಯಲಹಂಕ, ಎಲೆಕ್ಟ್ರಾನಿಕ್ ಸಿಟಿ–ಮೈಸೂರು ರಸ್ತೆ ಮೂಲಕ ಬೆಂಗಳೂರು ಎಕ್ಸಿಬಿಷನ್ ಸೆಂಟರ್‌ವರೆಗೂ ಕಾರಿಡಾರ್ ಸಾಗಲಿದೆ. ಈ ರಸ್ತೆಯು ಬೆಂಗಳೂರಿನ ಉತ್ತರ ಭಾಗದಲ್ಲಿ 73 ಕಿ.ಮೀ ಸಾಗಲಿದ್ದು, ಉಳಿದದ್ದು ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಸಾಗಲಿದೆ. ಶೇ 40ರಷ್ಟು ದಟ್ಟಣೆ ಕಡಿಮೆಯಾಗಲಿದ್ದು, ಎಲೆಕ್ಟ್ರಾನಿಕ್ ಸಿಟಿ, ತುಮಕೂರು ರಸ್ತೆ, ನೆಲಮಂಗಲ, ಮೈಸೂರು ರಸ್ತೆ ಕಡೆ ಹೋಗುವ ವಾಹನಗಳು ಈ ರಸ್ತೆಯಲ್ಲಿ ಸಾಗಲಿವೆ ಎಂದು ಮಾಹಿತಿ ನೀಡಿದರು.

'ಈ ಹಿಂದಿನ ಸರ್ಕಾರ ಯೋಜನೆಗೆ ಅಧಿಸೂಚನೆ ಹೊರಡಿಸಿದ್ದು, ಅದನ್ನು ಹಿಂಪಡೆದಿರಲಿಲ್ಲ. ಈಗ ಬೆಂಗಳೂರಿನಲ್ಲಿ ನೈಸ್ ರಸ್ತೆಗೆ ಪರ್ಯಾಯ ರಸ್ತೆ ಅಗತ್ಯವಿದೆ. ಯಾವುದೇ ಕಾರಣಕ್ಕೂ ಡಿನೋಟಿಫಿಕೇಶನ್ ಮಾಡಬಾರದು ಎಂದು ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಯೋಜನೆಗೆ ಸರ್ಕಾರದ ಖಾತರಿಯೊಂದಿಗೆ ಹುಡ್ಕೊ ಮೂಲಕ ₹27 ಸಾವಿರ ಕೋಟಿ ಸಾಲ ಪಡೆಯಲಾಗಿದೆ' ಎಂದರು.

'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್‌ನಲ್ಲಿ 100 ಮೀಟರ್ ಅಗಲ ರಸ್ತೆ ನಿರ್ಮಿಸಲು ಅಧಿಸೂಚಿಸಲಾಗಿತ್ತು. ಅದನ್ನು ಕಡಿತಗೊಳಿಸಿ, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇಯಂತೆ 65 ಮೀಟರ್ ಅಗಲದಲ್ಲಿ ನಿರ್ಮಿಸಲು ತೀರ್ಮಾನಿಸಲಾಗಿದೆ. ರಸ್ತೆಯ ಎರಡೂ ಭಾಗದಲ್ಲಿ ಸರ್ವೀಸ್ ರಸ್ತೆ ಇರಲಿದ್ದು, ಪ್ರಮುಖ ರಸ್ತೆ ಟೋಲ್ ರಸ್ತೆಯಾಗಲಿದೆ. ರಸ್ತೆಯ ಮಧ್ಯೆ ನಮ್ಮ ಮೆಟ್ರೊ ಯೋಜನೆಗೆ 5 ಮೀಟರ್ ಕಲ್ಪಿಸಲಾಗುವುದು. ಉಳಿದ 35 ಮೀ. ಜಾಗವನ್ನು ರೈತರಿಗೆ ಪರಿಹಾರ ರೂಪದಲ್ಲಿ ಮರಳಿ ನೀಡಲು ತೀರ್ಮಾನಿಸಿದ್ದೇವೆ. ಈ ಜಾಗವನ್ನು ಹರಾಜು ಹಾಕಬೇಕು ಎಂಬ ಸಲಹೆಗಳು ಬಂದಿತ್ತಾದರೂ ರೈತರಿಗೆ ನೀಡಲು ನಿರ್ಧರಿಸಿದ್ದೇವೆ. ಇದು ವಾಣಿಜ್ಯ ಉದ್ದೇಶಕ್ಕೆ ನೆರವಾಗಲಿರುವ ಹಿನ್ನೆಲೆಯಲ್ಲಿ ರೈತರ ಮನವಿ ಮೇರೆಗೆ ಜಾಗವನ್ನು ಅವರಿಗೆ ನೀಡುವ ತೀರ್ಮಾನ ಮಾಡಲಾಗಿದೆ' ಎಂದು ತಿಳಿಸಿದರು.

ಪರಿಹಾರ: ಸರ್ಕಾರ ಹಾಗೂ ಬಿಡಿಎ ಮೇಲೆ ಆರ್ಥಿಕ ಹೊರೆ ಕಡಿಮೆ ಮಾಡಲು ಈ ಯೋಜನೆಯಲ್ಲಿ ಭೂಮಿ ಕಳೆದುಕೊಳ್ಳುವ ರೈತರಿಗೆ ನಾಲ್ಕು ರೀತಿಯಲ್ಲಿ ಪರಿಹಾರ ನೀಡಲಾಗುತ್ತದೆ. ಮಾರುಕಟ್ಟೆ ದರದಲ್ಲಿ ನಗರ ಭಾಗದಲ್ಲಿ ಎರಡು ಪಟ್ಟು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮೂರುಪಟ್ಟು ನಗದು ಪರಿಹಾರ ಅಥವಾ ಟಿಡಿಆರ್ ಅಥವಾ ಎಫ್‌ಎಆರ್ ಅಥವಾ ಶೇ 35ರಷ್ಟು ವಾಣಿಜ್ಯ ಭೂಮಿಯನ್ನು ಪಡೆಯಬಹುದು. ಒಂದು ವೇಳೆ ವಾಣಿಜ್ಯ ಭೂಮಿ ಬೇಡ, ವಸತಿ ಪ್ರದೇಶದಲ್ಲಿ ಜಾಗಬೇಕು ಎಂದರೆ ಬಿಡಿಎ ವತಿಯಿಂದ ರೂಪಿಸಲಾಗಿರುವ ನೂತನ ಬಡಾವಣೆಗಳಲ್ಲಿ ಶೇ 40ರಷ್ಟು ಜಾಗ ನೀಡಲಾಗುವುದು. ಬಿಡಿಎ ಕಾಯ್ದೆಯಲ್ಲಿ, ಕೇಂದ್ರದ ಹೊಸ ಕಾಯ್ದೆ ಅನುಸಾರ ಹೆಚ್ಚಿನ ಪರಿಹಾರ ನೀಡಲು ಅವಕಾಶವಿಲ್ಲ. ಆದರೂ ರೈತರಿಗೆ ನೆರವಾಗಲು ಸರ್ಕಾರ ಮಹತ್ವದ ತೀರ್ಮಾನ ಮಾಡಿದೆ ಎಂದರು.

'20 ಗುಂಟೆಗಿಂತ ಒಳಗೆ ಭೂಮಿ ಕಳೆದುಕೊಳ್ಳುವವರಿಗೆ ನಗದು ಪರಿಹಾರ ಮಾತ್ರ ನೀಡಲಾಗುವುದು. ಅದಕ್ಕಿಂತ ಹೆಚ್ಚಿನ ಭೂಮಿ ಕಳೆದುಕೊಳ್ಳುವವರಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಯಾವುದಾದರೂ ಒಂದು ಆಯ್ಕೆ ಆರಿಸಿಕೊಳ್ಳಬಹುದು' ಎಂದು ಸ್ಪಷ್ಟಪಡಿಸಿದರು.

ಪರಿಹಾರಗಳೇನು?

- ನಗದು ಪರಿಹಾರ, ಟಿಡಿಆರ್, ಎಫ್‌ಎಆರ್, ಶೇ 35ರಷ್ಟು ವಾಣಿಜ್ಯ ಅಥವಾ ಶೇ 40ರಷ್ಟು ವಸತಿ ಪ್ರದೇಶದಲ್ಲಿ ಬದಲಿ ಭೂಮಿ
- ಎರಡು ವರ್ಷಗಳಲ್ಲಿ ಯೋಜನೆ ಜಾರಿ, ಶೇ 40 ಸಂಚಾರ ದಟ್ಟಣೆ ನಿಯಂತ್ರಣ
- ಯಾವುದೇ ಕಾರಣಕ್ಕೂ ಡಿನೋಟಿಫಿಕೇಶನ್ ಇಲ್ಲ
- ಪರಿಹಾರ ನಿರಾಕರಿಸಿದರೆ ನ್ಯಾಯಾಲಯದಲ್ಲಿ ಠೇವಣಿ ಕಟ್ಟಿ ಯೋಜನೆ ಮುಂದುವರಿಕೆ

2 ವರ್ಷಗಳಲ್ಲಿ ಯೋಜನೆ ಪೂರ್ಣ

'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ಯೋಜನೆಯನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು. ಒಂದು ವೇಳೆ ಯಾರಾದರೂ ಭೂಮಿ ನೀಡಲು ನಿರಾಕರಿಸಿದರೆ, ಸಹಜ ಸ್ವಾಧೀನ ಪ್ರಕ್ರಿಯೆ ಪರಿಹಾರದ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟು ಯೋಜನೆ ಮುಂದುವರಿಸುತ್ತೇವೆ. ಯಾವುದೇ ಕಾರಣಕ್ಕೂ ಈ ಜಾಗವನ್ನು ಡಿನೋಟಿಫಿಕೇಶನ್ ಮಾಡುವುದಿಲ್ಲ. ಸಂಚಾರ ದಟ್ಟಣೆಯಿಂದ ಬೆಂಗಳೂರಿನಲ್ಲಿ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗುತ್ತಿದ್ದು, ಈ ಯೋಜನೆ ಅಗತ್ಯವಾಗಿದೆ. ಈ ಯೋಜನೆಯಿಂದ 1,900 ಕುಟುಂಬಗಳ ಮೇಲೆ ಪರಿಣಾಮ ಬೀರುತ್ತದೆಯಾದರೂ ಬೆಂಗಳೂರು ನಗರಕ್ಕೆ ದೊಡ್ಡ ಮಟ್ಟದಲ್ಲಿ ಅನುಕೂಲ ಆಗಲಿದೆ' ಎಂದು ಶಿವಕುಮಾರ್ ಹೇಳಿದರು.

'ಟಿಡಿಆರ್ ವಿನಿಮಯ ಪ್ರಾರಂಭಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಪ್ರಕ್ರಿಯೆ ಸುಗಮವಾಗಿ ಆಸ್ತಿಗಳ ವಿನಿಮಯ ಮಾಡಲು ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗುವುದು. ಭೂಮಿ ಕಳೆದುಕೊಳ್ಳುವವರು ನೋಂದಣಿ ಮಾಡಿಕೊಂಡು, ಈ ಟಿಡಿಆರ್ ವಿನಿಮಯ ಮಾಡಿಕೊಳ್ಳಬಹುದಾಗಿದೆ' ಎಂದರು.

₹10 ಸಾವಿರ ಕೋಟಿ ಉಳಿತಾಯ

'ಈ ಹಿಂದೆ ಈ ಯೋಜನೆಗೆ ₹27 ಸಾವಿರ ಕೋಟಿ ಅಂದಾಜು ಮಾಡಲಾಗಿತ್ತು. ಈಗ ರೂಪಿಸಿರುವ ಯೋಜನೆ ಮೂಲಕ ಹೆಚ್ಚಿನ ರೈತರು ಜಮೀನನ್ನೇ ಆಯ್ಕೆ ಮಾಡಿಕೊಳ್ಳು-ವುದರಿಂದ ಸುಮಾರು ₹10 ಸಾವಿರ ಕೋಟಿಗಿಂತ ಕಡಿಮೆ ವೆಚ್ಚವಾಗಲಿದೆ. ಟೋಲ್, ತಾಂತ್ರಿಕ ವಿಚಾರದ ಬಗ್ಗೆ ನಂತರ ಮಾಹಿತಿ ನೀಡುತ್ತೇವೆ. ಟೋಲ್ ಇಲ್ಲದೆ ಯಾವುದೇ ರಸ್ತೆಯನ್ನು ನಿಭಾಯಿಸಲು ಸಾಧ್ಯವಿಲ್ಲ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ರಸ್ತೆ ಅಗೆಯಲು ಜಿಬಿಎ ಅನುಮತಿ ಕಡ್ಡಾಯ: ಎಂ. ಮಹೇಶ್ವರ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ರಸ್ತೆಗಳಲ್ಲಿ ಕೆಲಸ ಕೈಗೊಳ್ಳುವ ಮುನ್ನ ಜಲಮಂಡಳಿ, ಬೆಸ್ಕಾಂ ಸೇರಿದಂತೆ ಯಾವುದೇ ನಿಗಮ, ಇಲಾಖೆಗಳು ಜಿಬಿಎಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದರು.

ರಸ್ತೆ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಹಾಗೂ ಸ್ವಚ್ಛತೆಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಗುರುವಾರ ನಡೆಸಿದ ಸಭೆಯಲ್ಲಿ ಅವರು ಮಾತನಾಡಿದರು.

ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಸ್ತೆಗಳ ದುರಸ್ತಿ ಕಾರ್ಯ ನಡೆಯುತ್ತಿದೆ. ಇದಾದ ಬಳಿಕ ವಿವಿಧ ಸಂಸ್ಥೆಗಳು ರಸ್ತೆ ಅಗೆದು ಹಾಳು ಮಾಡುತ್ತಾರೆ. ಇದನ್ನು ನಿಯಂತ್ರಿಸಲು ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ವಿವರಿಸಿದರು.

'ಹೆಬ್ಬಾಳ ಕ್ಷೇತ್ರದಲ್ಲಿಯೂ ಮತ ಕಳವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಹೆಬ್ಬಾಳ ಕ್ಷೇತ್ರದಲ್ಲಿಯೂ ಮತ ಕಳವು ನಡೆದಿತ್ತು' ಎಂದು ಕ್ಷೇತ್ರದ ಶಾಸಕರೂ ಆಗಿರುವ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಆರೋಪಿಸಿದರು.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮತ ಕಳವು ಮಾಡುತ್ತಿದೆ' ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಸಹಿ ಸಂಗ್ರಹ ಅಭಿಯಾನದಲ್ಲಿ ಅವರು ಈ ಗಂಭೀರ ಆರೋಪ ಮಾಡಿದರು.

'ಹೆಬ್ಬಾಳ ಕ್ಷೇತ್ರದಲ್ಲಿ 20 ಸಾವಿರಕ್ಕೂ ಹೆಚ್ಚು ಮತಗಳ ಕಳವು ಆಗಿದೆ. ಆದರೂ ಕ್ಷೇತ್ರದ ಮತದಾರರು ನನ್ನ ಕೈಬಿಡಲಿಲ್ಲ. 32 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ತಂದುಕೊಟ್ಟರು' ಎಂದರು.

'ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಒಂದು ಮತ ಚಲಾಯಿಸುವ ಹಕ್ಕು ನೀಡಲಾಗಿದೆ. ಆ ಒಂದು ಮತವನ್ನೇ ಕಸಿದುಕೊಳ್ಳುವಂಥ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ. ಆ ಮೂಲಕ, ಪ್ರಜಾಪ್ರಭುತ್ವದ ಹತ್ಯೆ ಮಾಡಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಹೆಬ್ಬಾಳ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸ ಇಲ್ಲದಿದ್ದರೂ ಚುನಾವಣೆ ಸಂದರ್ಭದಲ್ಲಿ ಸಾವಿರಾರು ಜನ ಪ್ರತ್ಯಕ್ಷರಾಗುತ್ತಾರೆ. ಬೆಂಗಳೂರು ಹೊರವಲಯದ ಪಟ್ಟಣಗಳಿಂದ ಇಲ್ಲಿಗೆ ಬಂದು ಮತ ಚಲಾಯಿಸಿ ಹೋಗುತ್ತಾರೆ. ಮತ್ತೆ ಅವರು ಬರುವುದು ಮುಂದಿನ ಚುನಾವಣೆ ವೇಳೆಗೆ' ಎಂದು ಹೇಳಿದ ಅವರು, 'ಗಂಗೇನಹಳ್ಳಿ ವಾರ್ಡ್‌ನ ವಿಳಾಸ ಹೊಂದಿದ ಸಾವಿರಕ್ಕೂ ಹೆಚ್ಚು ಜನರು ಬಂದು ಮತ ಹಾಕುತ್ತಾರೆ. ಇದು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

'ಭೂ ಸ್ವಾಧೀನ ಅಧಿಸೂಚನೆ ರದ್ದು ಪಡಿಸದ ಸರ್ಕಾರ'

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಕೃಷಿ ಭೂಮಿಯನ್ನು ಸ್ವಾಧೀನದಿಂದ ಕೈಬಿಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿ ಮೂರು ತಿಂಗಳಾದರೂ ಅಧಿಕೃತ ಆದೇಶ ಹೊರಬಿದ್ದಿಲ್ಲ.

ಸರ್ಕಾರ ಕೂಡಲೇ ಭೂಸ್ವಾಧೀನ ರದ್ದು ಆದೇಶ ಹೊರಡಿಸದಿದ್ದರೆ ಮತ್ತೆ ಹೋರಾಟ ಆರಂಭಿಸುವುದಾಗಿ ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಸದಸ್ಯರು ಎಚ್ಚರಿಕೆ ನೀಡಿದ್ದಾರೆ.

ಕೈಗಾರಿಕಾ ವಲಯ ಸ್ಥಾಪನೆಗೆ 1,777 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕೆಐಎಡಿಬಿ ಅಧಿಸೂಚನೆ ಹೊರಡಿಸಿತ್ತು. ಅದನ್ನು ವಿರೋಧಿಸಿ ರೈತರು ನಡೆಸಿದ್ದ ಹೋರಾಟಕ್ಕೆ ಮಣಿದ ಸರ್ಕಾರವು ಭೂಸ್ವಾಧೀನಕ್ಕೆ ಕೆಐಎಡಿಬಿ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದು ಪಡಿಸಿತ್ತು.

ಬಿಡಿಎ ಕಾರ್ಯಾಚರಣೆ ₹24.35 ಕೋಟಿ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರಿಸಿದ್ದು, ಗುರುವಾರ ನಡೆದ ಕಾರ್ಯಾ-ಚರಣೆಯಲ್ಲಿ ಜೆ.ಪಿ. ನಗರ 9ನೇ ಹಂತದಲ್ಲಿ ₹20.10 ಕೋಟಿ ಮತ್ತು ಬನಶಂಕರಿ 3ನೇ ಹಂತದಲ್ಲಿ ₹4.25 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಆಲಹಳ್ಳಿ ಗ್ರಾಮದ ಸರ್ವೆ ನಂ. 90/2ರ ವಿವಿಧ ಅಳತೆಯ 10 ನಿವೇಶನಗಳಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಲಾಯಿತು.

ಉತ್ತರಹಳ್ಳಿ ಹೋಬಳಿಯ ಕತ್ರಿಗುಪ್ಪೆ ಗ್ರಾಮದ ಸರ್ವೆ ನಂ. 94/1ರಲ್ಲಿ 2108 ಚದರ ಅಡಿಯ ಪ್ರದೇಶದಲ್ಲಿ ಅನಧಿಕೃತ ನಿರ್ಮಾಣಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡಿತು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಮತ್ತು ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು.



ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು

ಸಮೀಕ್ಷಕರ ಕೈಗೆ ಸಿಗದ ಮುನೀಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಸಾಮಾಜಿಕ–ಶೈಕ್ಷಣಿಕ ಸಮೀಕ್ಷಕರಿಗೆ ಮಾಹಿತಿ ನೀಡದ್ದರಿಂದ, 'ನಕಾರ' ಆಯ್ಕೆಯಿಂದ ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದೆ.

ವಸಂತನಗರದಲ್ಲಿ ವಾಸವಿರುವ ಮುನೀಶ್ ಮೌದ್ಗಿಲ್ ಅವರು ಮಾಹಿತಿ ನೀಡಿಲ್ಲ. ಸಮೀಕ್ಷಕರು ಬೆಲ್ ಮಾಡಿದ್ದಾರೆ. ಯಾರೂ ಬಾಗಿಲು ತೆರೆದಿಲ್ಲ. ಅವರು ಫೋನ್ ಕೂಡ ಸ್ವೀಕರಿಸಿಲ್ಲ. ಮೂರು ಬಾರಿ ಇದೇ ರೀತಿಯಾಗಿದೆ ಎಂದು ಸಮೀಕ್ಷಕರು ತಮ್ಮ ಮೇಲ್ವಿಚಾರಕರಿಗೆ ನಕ್ಷೆ, ಫೋಟೊ, ವಿಡಿಯೊ ಸಹಿತ ಮಾಹಿತಿ ನೀಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಮೇಲ್ವಿಚಾರಕರು, ಆ್ಯಪ್‌ನಲ್ಲಿ 'ನಕಾರ' ಆಯ್ಕೆಯನ್ನು ಬಳಸಿ ಸಮೀಕ್ಷೆ ಮುಗಿಸಿ ಎಂದು ಸಮೀಕ್ಷಕರಿಗೆ ಸೂಚಿಸಿದ್ದಾರೆ. ಈ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

'ಆನ್‌ಲೈನ್‌ನಲ್ಲಿ ಸಮೀಕ್ಷೆ ಮುಗಿಸಿರುವೆ'

'ನಾನು ಬೆಳಿಗ್ಗೆ 9 ಗಂಟೆಗೆ ಮನೆಯಿಂದ ಹೊರಟರೆ, ವಾಪಸ್ ಬರುವುದು ರಾತ್ರಿ 10 ಗಂಟೆಯಾಗುತ್ತದೆ. ಒಂದು ಬಾರಿ ಅವರು ಬಂದಾಗ, ನನ್ನ ಪತ್ನಿ ಮನೆಯಲ್ಲಿ ಇರಲಿಲ್ಲ. ನಾಳೆ ಬರಲು ಹೇಳಿದ್ದೆ ಅಷ್ಟೇ. ಅವರು ಸುಮ್ಮನೆ ಪ್ರಚಾರ ಮಾಡುತ್ತಿದ್ದಾರೆ' ಎಂದು ಜಿಬಿಎ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಗುರುವಾರ ಸಂಜೆ ಆನ್‌ಲೈನ್‌ನಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಿದ್ದೇನೆ. ಸಮೀಕ್ಷೆಗೆ ಗೈರಾಗಿರುವ ಸುಮಾರು ಎರಡು ಸಾವಿರ ಮಂದಿಯ ಮೇಲೆ ಶಿಸ್ತು ಕ್ರಮವಾಗುತ್ತಿದೆ. ಅದು ಆಗಬಾರದು ಎಂದು ಸುಖಾಸುಮ್ಮನೆ ಇಂತಹ ವಿಚಾರಗಳನ್ನು ಪ್ರಚಾರ ಮಾಡುತ್ತಿದ್ದಾರೆ' ಎಂದರು.


ಮುನೀಶ್ ಮೌದ್ಗಿಲ್

ಪತ್ರ ಸೋರಿಕೆ ಆಗಿದ್ದು ಹೇಗೆ: ಎಸ್.ಸುರೇಶ್ ಕುಮಾರ್ ಪ್ರಶ್ನೆ

ಬೆಂಗಳೂರು: 'ಇನ್ಫೊಸಿಸ್‌ನ ನಾರಾಯಣಮೂರ್ತಿ ಮತ್ತು ಸುಧಾ ಮೂರ್ತಿ ಅವರು ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ನೀಡುವುದಿಲ್ಲ ಎಂದು ನಿರಾಕರಿಸಿ ಸ್ವಯಂ ದೃಢೀಕರಿಸಿದ್ದ ಪತ್ರವು ಸೋರಿಕೆಯಾಗಿದ್ದು ಹೇಗೆ' ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಪ್ರಶ್ನಿಸಿದ್ದಾರೆ.

ಗುರುವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಸಮೀಕ್ಷೆಗೆ ವಿರೋಧ ವ್ಯಕ್ತವಾದಾಗ ಮತ್ತು ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸುವಾಗ ರಾಜ್ಯ ಸರ್ಕಾರವು, 'ಸಮೀಕ್ಷೆಯ ವಿವರಗಳನ್ನು ಗೋಪ್ಯವಾಗಿ ಇಡಲಾಗುವುದು' ಎಂದು ಹೇಳಿತ್ತು. ಈಗ ಈ ಪತ್ರ ಸೋರಿಕೆಯಾಗಿದ್ದು ಹೇಗೆ ಎಂಬುದನ್ನು ಸರ್ಕಾರ ವಿವರಿಸಬೇಕು' ಎಂದು ಒತ್ತಾಯಿಸಿದ್ದಾರೆ. 'ಇದು ರಾಜ್ಯದ ಜನರಿಗೆ, ನ್ಯಾಯಾಲಯಕ್ಕೆ ಬಗೆದ ದ್ರೋಹ. ನಾರಾಯಣಮೂರ್ತಿ ಅವರ ಕುಟುಂಬದ ಖಾಸಗಿತನಕ್ಕೆ ಸರ್ಕಾರ ಧಕ್ಕೆ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟೀಕರಣ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಶುಕ್ರವಾರ, ಅಕ್ಟೋಬರ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 287 | ಪುಟ 24

prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಹೂವಾ ರೋಜಾ ಹೂವಾ... ದೆಹಲಿಯ ಸದರ್ ಬಜಾರ್‌ನಲ್ಲಿ ಕೆಂಪು ಗುಲಾಬಿ ಹೂವಿನ ವ್ಯಾಪಾರದಲ್ಲಿ ತೊಡಗಿದ್ದ ಯುವಕ



ಟಿಟ್ಮಸ್ ವಿದಾಯ ಒಲಿಂಪಿಕ್ಸ್‌ನಲ್ಲಿ ನಾಲ್ಕು ಬಾರಿ ಚಾಂಪಿಯನ್ ಆಗಿದ್ದ ಆಸ್ಟ್ರೇಲಿಯಾದ ಈಜು ತಾರೆ ಅರಿಯಾನ್ ಟಿಟ್ಮಸ್ ಅವರು ಗುರುವಾರ ದಿಢೀರ್ ವಿದಾಯ ಘೋಷಿಸಿದ್ದಾರೆ

ಸೆನ್ಸೆಕ್ಸ್ 83,467 | ನಿಫ್ಟಿ 25,585 | $/₹ 87.96 | ಚಿನ್ನ (Std. 10g) ₹1,33,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,06,000 (ಬೆಂಗಳೂರು)

‘ಸಂಘ’ ಚಟುವಟಿಕೆ ನಿರ್ಬಂಧ

ಅನುಮತಿ ಇಲ್ಲದೇ ಕಾರ್ಯಕ್ರಮ ನಡೆಸಿದರೆ ಅತಿಕ್ರಮ ಪ್ರವೇಶ ಎಂದು ಪರಿಗಣನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಶಾಲೆ, ಕಾಲೇಜು, ಆಟದ ಮೈದಾನಗಳು ಮತ್ತು ಸರ್ಕಾರಿ ಸಂಸ್ಥೆಗಳ ಆವರಣಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳನ್ನು ನಿರ್ಬಂಧಿಸಬೇಕು’ ಎಂಬ ಸಚಿವ ಪ್ರಿಯಾಂಕ್ ಖರ್ಗೆ ಅವರ ಪತ್ರ ಆಧರಿಸಿ, ಸರ್ಕಾರಿ ಜಾಗಗಳಲ್ಲಿ ಖಾಸಗಿ ಸಂಘ–ಸಂಸ್ಥೆಗಳ ಕಾರ್ಯಕ್ರಮಗಳಿಗೆ ಅಂಕುಶ ಹಾಕಲು ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯದ ಚರ್ಚೆ ನಡೆದಿದೆ. ನಿರ್ಬಂಧ ವಿಧಿಸುವ ವಿಷಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಹೆಸರನ್ನು ಉಲ್ಲೇಖಿಸುವ ಬಗ್ಗೆ ತೀರ್ಮಾನ ಕೈಗೊಂಡಿಲ್ಲ. ಜಗದೀಶ ಶೆಟ್ಟರ್ ಅವರು ಮುಖ್ಯಮಂತ್ರಿ ಆಗಿದ್ದಾಗ ಸರ್ಕಾರಿ ಶಾಲಾ–ಕಾಲೇಜು ಆವರಣದಲ್ಲಿ ಸಂಘ–ಸಂಸ್ಥೆಗಳ ಚಟುವಟಿಕೆಗೆ ಅನುಮತಿ ಪಡೆಯುವುದನ್ನು ಕಡ್ಡಾಯ ಮಾಡಿದ್ದ ಆದೇಶವನ್ನು ಬಳಸಿಕೊಂಡು ಹೊಸ ನಿಯಮಗಳನ್ನು ರೂಪಿಸಲು ಸಚಿವ ಸಂಪುಟ ನಿರ್ಣಯಿಸಿದೆ. ಇದು ಜಾರಿಯಾದರೆ, ಸರ್ಕಾರದ ಆಸ್ತಿ, ಆಟದ ಮೈದಾನಗಳು, ಸಾರ್ವಜನಿಕ ರಸ್ತೆಗಳಲ್ಲಿ ಆರ್‌ಎಸ್‌ಎಸ್ ಸೇರಿದಂತೆ ಖಾಸಗಿ ಸಂಸ್ಥೆಗಳು ಯಾವುದೇ ಚಟುವಟಿಕೆ ನಡೆಸುವುದಕ್ಕೆ ನಿರ್ಬಂಧ ಬೀಳಲಿದೆ.

5A



ಆರ್‌ಎಸ್‌ಎಸ್ ಗುರಿಯಾಗಿಸಿಕೊಂಡೇ ಖಾಸಗಿ ಸಂಘ–ಸಂಸ್ಥೆಗಳು ಸಾರ್ವಜನಿಕ ಸ್ಥಳಗಳಲ್ಲಿ ಚಟುವಟಿಕೆ ಆಯೋಜಿಸಲು ಅನುಮತಿ ಕಡ್ಡಾಯಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



ನಾನು ಒಬ್ಬ ಸರ್ಕಾರಿ ಸೇವಕ. ನಾನು ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುತ್ತೇನೆ. ಸರ್ಕಾರಕ್ಕೆ ತಾಕತ್ತಿದ್ದರೆ ನನ್ನ ವಿರುದ್ಧ ಕ್ರಮ ಕೈಗೊಳ್ಳಲಿ

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ನಿರ್ಬಂಧಗಳೇನೇನು?

ಖಾಸಗಿ ಸಂಘ–ಸಂಸ್ಥೆಗಳು, ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಚಟುವಟಿಕೆಗಳನ್ನು ಕಾನೂನುಬದ್ಧವಾಗಿ ನಡೆಸಲು ಅನುಮತಿ ನೀಡುವ ಕುರಿತು ಎಚ್‌.ಕೆ.ಪಾಟೀಲ ಮಾಹಿತಿ ನೀಡಿದರು

- ಸರ್ಕಾರ, ಸರ್ಕಾರಿ ಸ್ವಾಮ್ಯದ ನಿಗಮ, ಮಂಡಳಿ, ಶಾಲಾ–ಕಾಲೇಜು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಉದ್ಯಾನಗಳು, ಆಟದ ಮೈದಾನಗಳು, ಸಾರ್ವಜನಿಕ ರಸ್ತೆಗಳು, ತೆರೆದ ಸ್ಥಳಗಳು ಮತ್ತು ಇತರೆ ಆಸ್ತಿ, ಜಾಗಗಳು ನಾಗರಿಕ ಬಳಕೆಗೆ ನಿಗದಿಯಾಗಿವೆ. ಇವುಗಳನ್ನು ಸಾರ್ವಜನಿಕರು ಬಳಸಲು ಯಾವುದೇ ಅಡಚಣೆ, ಬೆದರಿಕೆ ಉದ್ಭವಿಸದಂತೆ ಕ್ರಮ ವಹಿಸುವುದು ಅತ್ಯಗತ್ಯ. ಅದೇ ರೀತಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ, ಸಾರ್ವಜನಿಕ ಸಾರ್ವತ್ರಿಕ ಅಸಮಾಧಾನಗಳನ್ನು ನಿವಾರಿಸುವುದು ಅವಶ್ಯವಾಗಿದೆ
- ಹಲವು ಖಾಸಗಿ ಸಂಸ್ಥೆಗಳು, ಸಂಘಗಳು ತಮ್ಮ ಚಟುವಟಿಕೆ, ಪ್ರಚಾರ, ತರಬೇತಿ, ಉತ್ಸವ, ಮೆರವಣಿಗೆ, ಸದಸ್ಯರ ಮತ್ತು ಬೆಂಬಲಿಗರ ಸಭೆ ನಡೆಸುವ ಉದ್ದೇಶದಿಂದ ಸಾರ್ವಜನಿಕ ಸ್ಥಳಗಳು, ಸರ್ಕಾರದ ಆಸ್ತಿಗಳು, ಜಮೀನುಗಳು, ಆಟದ ಮೈದಾನಗಳು, ಸಾರ್ವಜನಿಕ ರಸ್ತೆಗಳನ್ನು ಸರ್ಕಾರ ಅಥವಾ ಸಂಬಂಧಿತ ಇಲಾಖೆಯಿಂದ ಮುಂಚಿತವಾಗಿ ಅನುಮತಿ ಪಡೆಯದೇ, ಮಾಹಿತಿ ನೀಡದೇ ಬಳಸಿಕೊಳ್ಳುತ್ತಿರುವುದು ಕಂಡುಬಂದಿದೆ. ಇಂತಹ ಚಟುವಟಿಕೆಗಳನ್ನು ಅಕ್ರಮ ಪ್ರವೇಶ ಎಂದು ಪರಿಗಣಿಸಲಾಗುತ್ತದೆ. ಈ ಕಾರಣದಿಂದ ಸರ್ಕಾರದ ಯಾವುದೇ ಆಸ್ತಿ, ಸ್ಥಳದ ಬಳಕೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿಯಂತ್ರಿಸುವ ಸಲುವಾಗಿ ಯಾವುದೇ ಸಂಘಟನೆ, ಸಂಸ್ಥೆ, ಸಂಘವು ಆಯಾ ಸಕ್ಷಮ ಪ್ರಾಧಿಕಾರಗಳಿಂದ ಪೂರ್ವಾನುಮತಿ ಪಡೆಯಬೇಕು
- ಯಾವುದೇ ಚಟುವಟಿಕೆಯಿಂದ ಸಾರ್ವಜನಿಕರಿಗೆ ಅನನುಕೂಲವಾದರೆ ಹಾಗೂ ಸಂಬಂಧಿಸಿದ ಸಂಸ್ಥೆಗಳ ಆವರಣ, ಜಾಗದಲ್ಲಿ ನಡೆಯುವ ಚಟುವಟಿಕೆಗಳಿಂದ ಆ ಸಂಸ್ಥೆಗಳ ಮೂಲ ಧ್ಯೇಯಕ್ಕೆ ಧಕ್ಕೆ ಉಂಟಾಗುವುದಾದರೆ ಅಂತಹ ಚಟುವಟಿಕೆಗಳ ಆಯೋಜನೆಗೆ ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡಬಾರದು

‘ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಅಮಾನತು’



‘ಗ್ರಾಮೀಣಾಭಿವೃದ್ಧಿ ಇಲಾಖೆಯ ಕೆಲವು ಸಿಬ್ಬಂದಿ ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ವರದಿ ಪಡೆದು, ಅಂಥವರನ್ನು ಅಮಾನತು ಮಾಡಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

5A

ಜೆಡಿಎಸ್ ಪ್ರಮುಖರ ಸಮಿತಿ ಪುನರ್‌ರಚನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷ ಸಂಘಟನೆ ಮತ್ತು ಮುಂಬರುವ ವಿವಿಧ ಚುನಾವಣೆಗಳಿಗೆ ಕಾರ್ಯತಂತ್ರ ರೂಪಿಸುವ ಉದ್ದೇಶದಿಂದ ಪಕ್ಷದ ಪ್ರಮುಖ ನಾಯಕರ ಸಮಿತಿಯನ್ನು ಪುನರ್‌ರಚನೆ ಮಾಡಲು ನಿರ್ಧರಿಸಲಾಗಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಅವರು ತಿಳಿಸಿದರು.

ಜೆಡಿಎಸ್ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಗುರುವಾರ ಪಕ್ಷದ ಪ್ರಮುಖ ನಾಯಕರ ಸಭೆ ನಡೆಯಿತು. ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಸುರೇಶ್ ಬಾಬು ಅವರು, ‘ಸಮಿತಿಯನ್ನು ಪುನರ್‌ರಚನೆ ಮಾಡುವ ಅಧಿಕಾರವನ್ನು ಕುಮಾರಸ್ವಾಮಿ ಅವರಿಗೆ ನೀಡಲಾಗಿದೆ’ ಎಂದು ತಿಳಿಸಿದರು.

‘ವಿಧಾನ ಪರಿಷತ್ತಿನ ಹಲವು ಸ್ಥಾನಗಳಿಗೆ 2026ರಲ್ಲಿ ನಡೆಯಲಿರುವ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣಾ ತಂತ್ರ ರೂಪಿಸಲು ಉಸ್ತುವಾರಿ ಸಮಿತಿ ರಚಿಸಲಾಗಿದೆ. ವಿಧಾನ ಪರಿಷತ್ ಸದಸ್ಯರಾದ ಎಸ್‌.ಎಲ್‌.ಬೋಜೇಗೌಡ, ವಿವೇಕಾನಂದ, ಎಸ್‌.ಎನ್‌. ಮಂಜೇಗೌಡ, ಪಕ್ಷದ ಮುಖಂಡ ಎಚ್‌.ಎಸ್‌. ಶಿವಶಂಕರ್ ಸಮಿತಿಯಲ್ಲಿ ಇದ್ದಾರೆ’ ಎಂದು ಮಾಹಿತಿ ನೀಡಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಗ್ನಿವೀರರು...



ಬೆಂಗಳೂರಿನ ಪ್ಯಾರಾಚೂಟ್ ರೆಜಿಮೆಂಟ್ ತರಬೇತಿ ಕೇಂದ್ರದಲ್ಲಿ ಗುರುವಾರ ನಡೆದ ಅಗ್ನಿವೀರರ 6ನೇ ಬ್ಯಾಚ್‌ನ ನಿರ್ಗಮನ ಪಥಸಂಚಲನದ ಸಮಯದಲ್ಲಿ ಅಗ್ನಿವೀರರು ಬೈಕ್‌ಗಳಲ್ಲಿ ಆಕರ್ಷಕ ಕಸರತ್ತು ಪ್ರದರ್ಶಿಸಿದರು

ಗುಜರಾತ್: ಇಂದು ಸಂಪುಟ ಪುನರ್‌ರಚನೆ

ಸಿ.ಎಂ ಹೊರತುಪಡಿಸಿ ಎಲ್ಲ 16 ಸಚಿವರ ರಾಜೀನಾಮೆ

ಗಾಂಧಿನಗರ/ಅಹಮದಾಬಾದ್ (ಪಿಟಿಐ): ಗುಜರಾತ್ ಸಚಿವ ಸಂಪುಟದ ಪುನರ್‌ರಚನೆ ಶುಕ್ರವಾರ ನಡೆಯಲಿದ್ದು, ಅದಕ್ಕೆ ಪೂರಕವಾಗಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರ ಸಂಪುಟದ 16 ಸಚಿವರು ಗುರುವಾರ ರಾಜೀನಾಮೆ ನೀಡಿದ್ದಾರೆ.



ಭೂಪೇಂದ್ರ ಪಟೇಲ್

ಮುಖ್ಯಮಂತ್ರಿ ಅವರನ್ನು ಬಿಟ್ಟು ಉಳಿದ ಎಲ್ಲ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

‘ಭೂಪೇಂದ್ರ ಪಟೇಲ್ ಅವರು ಶುಕ್ರವಾರ ಬೆಳಿಗ್ಗೆ 11.30ಕ್ಕೆ ಸಂಪುಟ ಪುನರ್‌ರಚನೆ ಮಾಡಲಿದ್ದಾರೆ’ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ರಾಜ್ಯ ಸಂಪುಟದಲ್ಲಿ ಮುಖ್ಯಮಂತ್ರಿ ಸೇರಿ 17 ಸಚಿವರಿದ್ದರು. ಇವರಲ್ಲಿ ಎಂಟು ಸಚಿವರಿಗೆ ಸಂಪುಟ ದರ್ಜೆ, ಉಳಿದವರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಲಾಗಿತ್ತು.

ಗುಜರಾತ್ ವಿಧಾನಸಭೆಯು 182 ಸದಸ್ಯ ಬಲವನ್ನು ಹೊಂದಿದ್ದು, ಗರಿಷ್ಠ 27 (ಸದನದ ಸದಸ್ಯ ಬಲದ ಶೇ 15ರಷ್ಟು) ಸಚಿವರನ್ನು ಹೊಂದಲು ಅವಕಾಶವಿದೆ. ಭೂಪೇಂದ್ರ ಪಟೇಲ್ ಅವರು 2022ರ ಡಿಸೆಂಬರ್ 12ರಂದು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

10 ಹೊಸಬರಿಗೆ ಅವಕಾಶ?

ಸಂಪುಟದಲ್ಲಿ 10 ಹೊಸ ಮುಖಗಳಿಗೆ ಅವಕಾಶ ದೊರೆಯಲಿದ್ದು, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದವರ ಪೈಕಿ ಅರ್ಧದಷ್ಟು ಮಂದಿಗೆ ಮತ್ತೆ ಸಚಿವ ಸ್ಥಾನ ದೊರೆಯಲಿದೆ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಮಾಹಿತಿ ನೀಡಿದ್ದಾರೆ.

ಅತ್ಯಾಚಾರ: ಎಂಜಿನಿಯರಿಂಗ್ ವಿದ್ಯಾರ್ಥಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದಕ್ಷಿಣ ಪೊಲೀಸ್ ಉಪ ವಿಭಾಗದ ಕಾಲೇಜೊಂದರಲ್ಲಿ ಪುರುಷರ ಶೌಚಾಲಯಕ್ಕೆ ವಿದ್ಯಾರ್ಥಿನಿಯನ್ನು ಎಳೆದೊಯ್ದು ಅತ್ಯಾಚಾರ ಎಸಗಿದ ಆರೋಪದ ಅಡಿ ವಿದ್ಯಾರ್ಥಿಯನ್ನು ಹನುಮಂತನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಸವನಗುಡಿಯ ಎಂಜಿನಿಯರಿಂಗ್ ಕಾಲೇಜೊಂದರ ಐದನೇ ಸೆಮಿಸ್ಟರ್ ವಿದ್ಯಾರ್ಥಿ ಜೀವನ್ ಗೌಡ (21) ಬಂಧಿತ ಆರೋಪಿ.

ಆರೋಪಿಯನ್ನು ಬುಧವಾರ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿದ್ದು, ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಪರಪ್ಪನ ಅಗ್ರಹಾರ ಜೈಲಿಗೆ ಆರೋಪಿಯನ್ನು ಕಳುಹಿಸಲಾಗಿದೆ. ಏಳನೇ ಸೆಮಿಸ್ಟರ್ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಘಟನೆಯು ಅಕ್ಟೋಬರ್ 10ರಂದು ನಡೆದಿದೆ. ಅಕ್ಟೋಬರ್ 15ರಂದು ನೀಡಿದ ದೂರು ಆಧರಿಸಿ ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 64ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಘಟನೆಯಿಂದ ವಿದ್ಯಾರ್ಥಿನಿ ಆಘಾತಕ್ಕೆ ಒಳಗಾಗಿದ್ದರು. ಚೇತರಿಸಿಕೊಂಡ ಬಳಿಕ ತಮ್ಮ ಪೋಷಕರಿಗೆ ಮಾಹಿತಿ ನೀಡಿದ್ದರು. ಪೋಷಕರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ದೂರಿನಲ್ಲಿ ಏನಿದೆ?: ಘಟನೆ ನಡೆದ ದಿನದಂದು ವಿದ್ಯಾರ್ಥಿನಿ ಬೆಳಿಗ್ಗೆ 8.55ರ ಸುಮಾರಿಗೆ ಕಾಲೇಜಿಗೆ ತೆರಳಿದ್ದರು.

5

ಒ.ಸಿ ವಿನಾಯ್ತಿ ರಾಜ್ಯಕ್ಕೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪುರಸಭೆ ಮತ್ತು ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ 1,200 ಚದರಡಿವರೆಗಿನ ವಿಸ್ತೀರ್ಣದ ನಿವೇಶನಗಳಲ್ಲಿ ನಿರ್ಮಿಸುವ ಮನೆಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒ.ಸಿ) ಪಡೆಯುವುದರಿಂದ ವಿನಾಯಿತಿ ನೀಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು. ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 190 (2–ಎ) ಅಡಿ ಸರ್ಕಾರಕ್ಕಿರುವ ಅಧಿಕಾರದಂತೆ 1,200 ಚದರಡಿವರೆಗಿನ ವಿಸ್ತೀರ್ಣದ ನಿವೇಶನಗಳಲ್ಲಿ ನಕ್ಷೆ ಮಂಜೂರಾತಿ ಪಡೆದು ನಿರ್ಮಿಸಿರುವ ನೆಲ + 2 ಅಂತಸ್ತು ಅಥವಾ ಸ್ಟಿಲ್ಟ್ + ಅಂತಸ್ತಿನವರೆಗಿನ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲು ಒಪ್ಪಿಗೆ ನೀಡಲಾಯಿತು ಎಂದರು.


ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ಕಲಂ 310(3) ರಡಿ ಸರ್ಕಾರಕ್ಕಿರುವ ಅಧಿಕಾರದಂತೆಯೂ ಮೇಲಿನ ವಿಸ್ತೀರ್ಣದ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗುವುದು ಎಂದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗಲಿದೆ.

ರು.ಬಸಪ್ಪಗೆ 'ಕನ್ನಡ ಪರ ಹೋರಾಟ ರತ್ನ ಪ್ರಶಸ್ತಿ'

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಕನ್ನಡ ಪರ ಹೋರಾಟ ರತ್ನ ಪ್ರಶಸ್ತಿ'ಗೆ ಹೋರಾಟಗಾರರೂ ಆದ ಪತ್ರಕರ್ತ ರು.ಬಸಪ್ಪ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 5 ಸಾವಿರ ನಗದು ಒಳಗೊಂಡಿದೆ. ವಿ. ರಾಣಿ ಗೋವಿಂದರಾಜು ಅವರು ಈ ಪ್ರಶಸ್ತಿಗೆ ಸಂಬಂಧಿಸಿದಂತೆ ದತ್ತಿ ಸ್ಥಾಪಿಸಿದ್ದಾರೆ. ನ.4ರಂದು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ನಡೆಯುವ ಸಮಾರಂಭದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ರು. ಬಸಪ್ಪ

'ಕನಕದಾಸರ ಆದರ್ಶ ಪಾಲಿಸಿ'

ಮೂರು ದಿನಗಳ 'ಕನಕ ನಡೆ–ನುಡಿ ಉತ್ಸವ'ಕ್ಕೆ ಸಿ.ಎಂ ಸಿದ್ದರಾಮಯ್ಯ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಕದಾಸರ ಆದರ್ಶಗಳ ಬಗ್ಗೆ ಕೇಳಿ ಮರೆಯದೆ, ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ 'ಕನಕ ಕಾವ್ಯ ದೀವಿಗೆ' ಕನಕ ನಡೆ–ನುಡಿ ಉತ್ಸವಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು.

'16ನೇ ಶತಮಾನದಲ್ಲಿ ಪಾಳೇಗಾರರ ಕುಟುಂಬದಲ್ಲಿ ಜನಿಸಿದ ಕನಕದಾಸರು ಸಂತರಾದರು. ಕವಿ, ದಾರ್ಶನಿಕ, ಸಾಮಾಜಿಕ ಹೋರಾಟಗಾರರೂ ಆಗಿದ್ದರು. ಸಮಾಜದ ಅಸಮಾನತೆ ವಿರುದ್ಧ ಬಂಡಾಯ ಹೂಡಿದರು' ಎಂದರು.

'ಯಾವ ದೇವಸ್ಥಾನಕ್ಕೆ ನಿಮ್ಮನ್ನು ಬಿಡುವುದಿಲ್ಲವೋ ಆ ದೇವಸ್ಥಾನಕ್ಕೆ ಹೋಗಬೇಡಿ. ನಿಮ್ಮದೇ ದೇವರುಗಳಿಗೆ ನಿಮ್ಮದೇ ದೇವಸ್ಥಾನ ಕಟ್ಟಿಸಿ ಎಂದು ನಾರಾಯಣಗುರು ಕರೆ ನೀಡಿದ್ದರು. ನಿಮ್ಮನ್ನು ಯಾವ ದೇವಸ್ಥಾನಕ್ಕೆ ಸೇರಿಸುವುದಿಲ್ಲವೋ ಆ ದೇವಸ್ಥಾನಕ್ಕೆ ಹೋಗಿ ಇಣುಕುವ ಅಗತ್ಯ ಏನಿದೆ? ಹೊರಗೇ ನಿಂತು ಕೈ ಮುಗಿಯುವುದಕ್ಕಿಂತ ನಿಮ್ಮದೇ ಗುಡಿ ನಿರ್ಮಿಸಿ ಎನ್ನುವ ನಾರಾಯಣಗುರು ಅವರ ಆದರ್ಶ ಪಾಲನೆ ಆಗಬೇಕು' ಎಂದರು.

'ಕನಕದಾಸರು 'ಕುಲ ಕುಲ ಕುಲ ಎಂದು ಹೊಡೆದಾಡದಿರಿ' ಎಂದರು. ಬಸವಣ್ಣ ಅವರು 'ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ...' ಎಂದು ಹೇಳಿದರು. ಆದರೆ, ಇವತ್ತಿಗೂ ಕುಲ ಮತ್ತು ಜಾತಿ ತಾರತಮ್ಯ ಆಚರಣೆಯಲ್ಲಿದೆ ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪಕಟ್ಟಿ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಉಪಸ್ಥಿತರಿದ್ದರು.


ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನಕದಾಸರ ತಂಬೂರಿ ನುಡಿಸಿದರು. ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ, ಶಾಸಕ ಕೋನರೆಡ್ಡಿ, ಸಚಿವ ಶಿವರಾಜ ತಂಗಡಗಿ, ಶಾಸಕ ಮುನಿರತ್ನ, ಬಂಜಾರ ಅಕಾಡೆಮಿ ಅಧ್ಯಕ್ಷ ಗೋವಿಂದಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಚ್.ಎಂ. ರೇವಣ್ಣ ಹಾಜರಿದ್ದರು ಪ್ರಜಾವಾಣಿ ಚಿತ್ರ

ಕೊನೆಯ ಮೂರು ದಿನ 'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ಎಂ.ಜಿ. ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ 'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಇನ್ನು ಮೂರು ದಿನ ಮಾತ್ರ ಇರಲಿದೆ. ಗ್ರಾಹಕರು ಈ ಅವಕಾಶವನ್ನು ಬಳಸಿಕೊಳ್ಳಬೇಕು ಎಂದು ಆಯೋಜಕರು ತಿಳಿಸಿದ್ದಾರೆ.

ದೀಪಾವಳಿ ಪ್ರಯುಕ್ತ ಆಯೋಜಿಸಿರುವ ಈ ಪ್ರದರ್ಶನ ಅ.19ರವರೆಗೆ ಇರಲಿದೆ. ಕೈಮಗ್ಗ, ಹಸ್ತಶಿಲ್ಪ ಮತ್ತು ಪರಂಪರಾತ್ಮಕ ಕಲೆಗಳನ್ನು ಈ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗಿದೆ. ದೇಶದ ವಿವಿಧ ಭಾಗಗಳ ಕಲಾವಿದರು ಈ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ. ತಾವು ತಯಾರಿಸಿದ ಕಲಾತ್ಮಕ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ.

ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಆಲಂಕಾರಿಕ ವಸ್ತುಗಳು, ಒಡಿಶಾದ ಡೋಕ್ರಾ ಕಲೆ ಹಾಗೂ ಮರದ ಆಟಿಕೆಗಳು, ವರ್ಣಚಿತ್ರಗಳು, ಆಭರಣಗಳು, ಮನೆ ಆಲಂಕಾರಿಕ ವಸ್ತುಗಳು ಸೇರಿದಂತೆ ಹಲವು ವೈವಿಧ್ಯ ಸಾಂಪ್ರದಾಯಿಕ ಉತ್ಪನ್ನಗಳು ಒಂದೇ ಸೂರಿನಡಿ ಲಭ್ಯವಿವೆ.

ತಮಿಳುನಾಡು, ಮಹಾರಾಷ್ಟ್ರ, ಮಣಿಪುರ, ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಸೇರಿ ದೇಶದ ವಿವಿಧ ರಾಜ್ಯಗಳ ಕಲಾವಿದರು ತಾವು ತಯಾರಿಸಿದ ಉತ್ಪನ್ನಗಳನ್ನು ತಂದಿದ್ದಾರೆ. ವಿವಿಧ ಬಗೆಯ ಸೀರೆಗಳು, ಪಿಠೋಪಕರಣ, ಬ್ಯಾಗ್‌ಗಳು, ಖಾದಿ ಬಟ್ಟೆಗಳೂ ದೊರೆಯುತ್ತವೆ ಎಂದು ಆಯೋಜಕರು ತಿಳಿಸಿದ್ದಾರೆ.


ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ 'ಇಂಡಿಯನ್ ಆರ್ಟಿಸಾನ್ಸ್ ಹಾಟ್' ಪ್ರದರ್ಶನದಲ್ಲಿ ಜನರು ತಮಗಿಷ್ಟವಾದ ವಸ್ತುಗಳನ್ನು ಖರೀದಿಸಿದರು ಪ್ರಜಾವಾಣಿ ಚಿತ್ರ

₹1.31 ಕೋಟಿಯ ಚಿನ್ನ ಕಳವು

ಕೆಜಿಎಫ್: ರಾಬರ್ಟ್‌ಸನ್‌ಪೇಟೆ ಪಿ. ಬಸ್ತಿಮಲ್ ಬೋಹ್ರಾ ಆಭರಣ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ರಾಜಸ್ಥಾನ ಮೂಲದ ಕಾರ್ಮಿಕ ಸುಮಾರು ₹1.31 ಕೋಟಿ ಮೌಲ್ಯದ ಚಿನ್ನಾಭರಣ ಕದ್ದು ಪರಾರಿಯಾಗಿದ್ದಾರೆ ಎಂದು ಆರೋಪಿಸಿ, ಮಾಲೀಕ ನಿತೀಶ್ ಕುಮಾರ್ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಯಶ್ ಮತ್ತು ಸುರೇಂದ್ರ ಎಂಬುವರ ವಿರುದ್ಧ ದೂರು ದಾಖಲಾಗಿದೆ. ರಾಜಸ್ಥಾನದ ಸುರೇಂದ್ರ 2019ರಿಂದ ನಿತೀಶ್ ಮನೆಯಲ್ಲಿ ಕೆಲಸ ಮಾಡುತ್ತಿದ್ದ. ಒಂದು ವರ್ಷದ ಹಿಂದೆ ಕೆಲಸ ಬಿಟ್ಟಿದ್ದ. ಕಳೆದ ವಾರ ರಾಜಸ್ಥಾನದ ಬಿಕನೇರ್‌ನ ಯಶ್‌ಗೆ ಕೆಲಸ ಕೊಡಿಸಿದ್ದ. ಆದರೆ, ಮಾಲೀಕರು ಆತನ ಆಧಾರ್, ಗುರುತಿನ ಚೀಟಿ ಪಡೆದಿರಲಿಲ್ಲ. ಜೊತೆಗೆ ಆರೋಪಿಗೆ ಗೋದಾಮಿನಲ್ಲಿ ಉಳಿಯಲು ವ್ಯವಸ್ಥೆ ಮಾಡಿಕೊಡಲಾಗಿತ್ತು. ಚಿನ್ನದ ಒಡವೆ ಗಳನ್ನು ಶರ್ಟ್ ಮತ್ತು ಪ್ಯಾಂಟ್‌ನಲ್ಲಿ ಇಟ್ಟುಕೊಂಡು ಯಶ್ ಪರಾರಿಯಾಗಿದ್ದ. ಅಂಗಡಿಯಲ್ಲಿ ಸುಮಾರು 1.31 ಕೋಟಿ ಮೌಲ್ಯದ 1.93 ಕೆ.ಜಿ ಚಿನ್ನ ಕಳುವಾಗಿದೆ ಎಂದು ಪರಿಶೀಲನೆಯಿಂದ ಗೊತ್ತಾಗಿದೆ.

ನಗರದಲ್ಲಿ ಇಂದು

ಅಪರ್ಣಾ ವಸ್ತಾರೆ ನೆನಪಿನ ಕನ್ನಡ ನುಡಿ ಗಾರುಡಿ ಕಮ್ಮಟಕ್ಕೆ ಚಾಲನೆ: ನಾಗರಾಜ ವಸ್ತಾರೆ, ಸತ್ಯಪ್ರಸಾದ್, ರಾ.ಸು. ವೆಂಕಟೇಶ್, ಉಪಸ್ಥಿತಿ: ಶ್ರೀರಾಮೇಗೌಡ, ಕಮ್ಮಟದ ಸಂಪನ್ಮೂಲ ವ್ಯಕ್ತಿಗಳು: ಸಂಧ್ಯಾ ಭಟ್, ಕೃಷ್ಣಪ್ರಸಾದ್ ಮಾಯಸಂದ್ರ, ಸಾಗರ್ ನೀನಾಸಂ, ಬಿ.ಎಸ್. ವಿದ್ಯಾರಣ್ಯ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10


ಅಪರ್ಣಾ ವಸ್ತಾರೆ

ಮೆಂಟಲ್ ಹೆಲ್ತ್ ಸಂತೆ–4.0: ಅತಿಥಿ: ಸುದರ್ಶನ್ ಎಚ್., ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

'ಭಾರತ–ಮಾಲ್ಟಾ ಸಂಬಂಧಗಳು' ಉಪನ್ಯಾಸ: ಅತಿಥಿಗಳು: ರೊಬೆನ್ ಗೌಸಿ, ಎಂ.ಎಸ್. ಜಯಕರ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗ, ಸ್ಥಳ: ಪ್ರೊ.ವಿ.ಬಿ. ಕುಟಿನೊ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11.30

'ಕನಕ ಕಾವ್ಯ ದೀವಿಗೆ' ಮೂರು ದಿನಗಳ ಕನಕ ನಡೆ–ನುಡಿ ಉತ್ಸವ: ಕನಕ ಕಾವ್ಯಾಭಿನಯ: ಮಮತಾ ಜಿ. ಸಾಗರ, ಹಾಜೀರ ಖಾನುಂ, ಸಿದ್ದಾರ್ಥ ಎಂ.ಎಸ್., ಚಾಂದ್ ಪಾಷಾ, ದಾದಾಪೀರ್ ಜೈಮನ್, ಅಧ್ಯಕ್ಷತೆ: ಎಂ.ಎಸ್. ಆಶಾದೇವಿ, 'ರಾಮಧಾನ್ಯ' ನಾಟಕ ಪ್ರದರ್ಶನ: ನಿರ್ದೇಶನ: ಕೆ.ಎಸ್.ಡಿ.ಎಲ್. ಚಂದ್ರು, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

'ವಚನ ಚಳವಳಿ ಹಾಗೂ ಅದರ ಉಪ ಉತ್ಪನ್ನಗಳ ಸಾಂಸ್ಕೃತಿಕ ಮಹತ್ವ' ತಿಂಗಳ ಉಪನ್ಯಾಸ: ಎಸ್.ಜಿ. ಸಿದ್ಧರಾಮಯ್ಯ, ಪ್ರಸ್ತಾವಿಕ ನುಡಿ: ನಾರಾಯಣ ಘಟ್ಟ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ, ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5

ಶ್ರೀ ಸರಸ್ವತಿ ವಿದ್ಯಾಮಂದಿರದ (ಎಸ್‌ಎಸ್‌ವಿಎಂ) 75 ವರ್ಷಗಳ ಸಂಭ್ರಮಾಚರಣೆ: ಸ್ವರಾಂಜಲಿ ವೀಣಾ ವಾದನ: ಅತಿಥಿಗಳು: ರೇವತಿ ಕಾಮತ್, ಹರೀಶ್ ನಾಗರಾಜು, ಆಯೋಜನೆ ಮತ್ತು ಸ್ಥಳ: ಎಸ್‌ಎಸ್‌ವಿಎಂ ಕ್ಯಾಂಪಸ್, ವಿ.ವಿ. ಪುರ, ಸಂಜೆ 5ರಿಂದ

ಚಡ್ಡಿ ನಾಗೇಶ್–75 'ನೇಪಥ್ಯದ ನವನೀತ' ಅಭಿನಂದನಾ ಗ್ರಂಥ ಅರ್ಪಣೆ, ರಂಗಾಭಿನಂದನೆ: ಭಾಗವಹಿಸುವವರು: ಉಮಾಶ್ರೀ, 'ಮುಖ್ಯಮಂತ್ರಿ' ಚಂದ್ರು, ಶ್ರೀನಿವಾಸ್ ಜಿ. ಕಪ್ಪಣ್ಣ, ಟಿ.ಎಸ್. ನಾಗಾಭರಣ, ಕೆ.ವಿ. ನಾಗರಾಜಮೂರ್ತಿ, ವಾಸುಕಿ ಎಸ್., ಆಯೋಜನೆ: ಬೆಂಗಳೂರು ರಂಗ ತಂಡಗಳು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5


ಉಮಾಶ್ರೀ

ತೀರ್ಥೋದ್ಭವಕ್ಕೆ ತಲಕಾವೇರಿ ಅಣಿ

ಮಡಿಕೇರಿ: ತಾಲ್ಲೂಕಿನ ತಲಕಾವೇರಿ ಯಲ್ಲಿ ಅ.17ರಂದು ಮಧ್ಯಾಹ್ನ 1.44ಕ್ಕೆ 'ಕಾವೇರಿ ಪವಿತ್ರ ತೀರ್ಥೋದ್ಭವ'ಕ್ಕೆ ಸಕಲ ಸಿದ್ಧತಾ ಕಾರ್ಯಗಳೂ ಪೂರ್ಣ ಗೊಂಡಿವೆ. ಭಗಂಡೇಶ್ವರ–ತಲಕಾವೇರಿ ದೇಗುಲಗಳು ಸಿಂಗಾರ ಗೊಂಡಿವೆ. ಮಧ್ಯಾಹ್ನದ ವೇಳೆ ತೀರ್ಥೋದ್ಭವ ನಡೆಯುವುದರಿಂದ ಸಹಜವಾಗಿಯೇ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆ ಇದೆ. ಅದಕ್ಕಾಗಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಉಚಿತ ನೇತ್ರ ತಪಾಸಣಾ ಶಿಬಿರ ಇಂದಿನಿಂದ

ಬೆಂಗಳೂರು: ಖಿವರಾಜ್ ಮೋಟಾರ್ಸ್, ಅದ್ವಿತೀಯ ಮೋಟಾರ್ಸ್, ವಿಠಲ ಕಣ್ಣಿನ ಚಿಕಿತ್ಸಾಲಯ ಹಾಗೂ ರೋಟರಿ ಬೆಂಗಳೂರು ಮಿಡ್‌ಟೌನ್ ಜಂಟಿಯಾಗಿ ಇದೇ 17 ಮತ್ತು 18ರಂದು ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಯಶವಂತಪುರದ ಖಿವರಾಜ್ ಎಲಿಕ್ಸಿರ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಆಟೊ ಚಾಲಕರಿಗೆ ಎರಡು ದಿನಗಳ ಉಚಿತ ನೇತ್ರ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.

'ಪ್ರಾಜೆಕ್ಟ್ ಸೇಫ್ ವಿಷನ್–2025' ಎಂಬ ಉಪಕ್ರಮವು ನಗರದ ಆಟೊ ಚಾಲಕರಿಗೆ ಉಚಿತ ಕಣ್ಣಿನ ತಪಾಸಣೆ, ಕನ್ನಡಕ ವಿತರಣೆ ಮತ್ತು ಅಗತ್ಯವಿದ್ದರೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡುವ ಉದ್ದೇಶವಿದೆ. ಈ ಯೋಜನೆಯು ರೋಟರಿ ಬೆಂಗಳೂರು ಮಿಡ್‌ಟೌನ್ ಅಧ್ಯಕ್ಷ ರಾಜೇಶ್ ಶಾ, ಯುವ ಸೇವಾ ನಿರ್ದೇಶಕ ವಿನಯ್ ಚೋರಾಡಿಯಾ ಮತ್ತು ರೂಪಮೌಳಿ ಮೈಸೂರು ನೇತೃತ್ವದಲ್ಲಿ ನಡೆಯಲಿದೆ. 300ಕ್ಕೂ ಹೆಚ್ಚು ಆಟೊ ಚಾಲಕರು ಇದರ ಸೌಲಭ್ಯ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 63602 34388

ಗ್ರಾಹಕ ಸಂವಾದ ಸಭೆ

ಬೆಂಗಳೂರು: ಬೆಸ್ಕಾಂನ ಎಲ್ಲ ಉಪ ವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ ಮಧ್ಯಾಹ್ನ 3ರಿಂದ ಸಂಜೆ 5.30ರವರೆಗೆ ಗ್ರಾಹಕ ಸಂವಾದ ಸಭೆ ನಡೆಯಲಿದೆ. ಗ್ರಾಹಕರು ಪಾಲ್ಗೊಂಡು, ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆ ಕುರಿತು ಬೆಸ್ಕಾಂ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.


Pure Since 1925
ಭೀಮ
- ದಿ ಗ್ರೇಟ್ -
ಭೀಮ
ದೀಪಾವಳಿ
ಫೆಸ್ಟಿವಲ್
ಕೊಡುಗೆಗಳು ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 26, 2025 ರವರೆಗೆ ಲಭ್ಯ
ಗೆಲ್ಲಿರಿ ₹3.5 ಕೋಟಿ ಮೌಲ್ಯದ ಆಭರಣ ಲಕ್ಕಿ ಡ್ರಾ ಮೂಲಕ *
ಎಲ್ಲಾ ಆಭರಣಗಳ ಮೇಕಿಂಗ್ ಶುಲ್ಕದ ಮೇಲೆ 60% ವರೆಗೆ ರಿಯಾಯಿತಿ *
ವಿನಿಮಯ
ಪ್ರತಿ ಗ್ರಾಂ ಹಳೆಯ ಚಿನ್ನದೊಂದಿಗೆ
₹100* ಹೆಚ್ಚುವರಿ ಪಡೆಯಿರಿ
+
₹ 5,000* ಪ್ರತಿ ಕ್ಯಾರೆಟ್‌ಗೆ
ಭೀಮ ಡೈಮಂಡ್ಸ್ ವಿನಿಮಯದ ಮೇಲೆ ಹೆಚ್ಚುವರಿಯಾಗಿ
ವಜ್ರ
ಪ್ರತಿ ಕ್ಯಾರೆಟ್ ಗೆ
₹10,000*
ಮೌಲ್ಯದ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಉಚಿತ
*ನಿಯಮ ಮತ್ತು ಷರತ್ತುಗಳು ಅನ್ವಯ.
ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ
ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ | bhimagold.com
FORMERLY BHIMA GOLD • DIAMONDS • SILVER • PLATINUM
ಸ್ಥಳ ತಿಳಿಯಲು, ಸ್ಕ್ಯಾನ್ ಮಾಡಿ
BHIMA


SPORT UTILITY VEHICLES
mahindra Rise
ಸೆಲೆಬ್ರೇಟ್ ಮಾಡಲು ಒಂದು ಕಾರಣ
ಎಂದಿಗೂ ಸಾಕಾಗೋಲ್ಲ.
₹2.56 ಲಕ್ಷದವರೆಗಿನ ಒಟ್ಟಾರೆ ಲಾಭಗಳು*.
THAR ROXX
ಹೊಸ ಎಕ್ಸ್-ಶೋರೂಂ ಬೆಲೆಗಳು ಪ್ರಾರಂಭವಾಗುತ್ತವೆ ₹12.25 ಲಕ್ಷದಿಂದ#
GST ಉಳಿತಾಯ ₹1.33 ಲಕ್ಷದವರೆಗೆ*
ಹೆಚ್ಚುವರಿ ಕೊಡುಗೆಗಳು ₹20 000.00 ಗಳವರೆಗೆ*
XUV 700
ಹೊಸ ಎಕ್ಸ್-ಶೋರೂಂ ಬೆಲೆಗಳು ಪ್ರಾರಂಭವಾಗುತ್ತವೆ ₹13.66 ಲಕ್ಷದಿಂದ#
GST ಉಳಿತಾಯ ₹1.43 ಲಕ್ಷದವರೆಗೆ*
ಹೆಚ್ಚುವರಿ ಕೊಡುಗೆಗಳು ₹81 000.00 ಗಳವರೆಗೆ*
XUV 3XO
XUV 3XO REVX
ಹೊಸ ಎಕ್ಸ್-ಶೋರೂಂ ಬೆಲೆ ಪ್ರಾರಂಭ
₹7.28 ಲಕ್ಷ#
₹8.15 ಲಕ್ಷ#
GST ಉಳಿತಾಯ ₹1.56 ಲಕ್ಷದವರೆಗೆ*
ಹೆಚ್ಚುವರಿ ಕೊಡುಗೆಗಳು ₹90 000.00 ಗಳವರೆಗೆ*
*ಉಲ್ಲೇಖಿಸಲ್ಪಟ್ಟ ಲಾಭಗಳು ಒಂದು ನಿರ್ದಿಷ್ಟ ಮಾಡೆಲ್ ಮತ್ತು ವೇರಿಯಂಟ್‌ಗೆ ಮಾತ್ರ. ಆಯ್ದುಕೊಂಡ ಮಾಡಲ್ ಮತ್ತು ವೇರಿಯಂಟ್‌ಗಳ ಆಧಾರದಲ್ಲಿ ಲಾಭಗಳು ಬದಲಾಗುತ್ತವೆ.
#ಉಲ್ಲೇಖಿಸಲಾದ ಬೆಲೆಗಳು ಆ ನಿರ್ದಿಷ್ಟ ಮಾಡೆಲ್‌ನ, ಬೇಸ್ ವೇರಿಯಂಟ್‌ನ ಎಕ್ಸ್-ಶೋರೂಂ ಬೆಲೆ (ಭಾರತದಾದ್ಯಂತ) ಆಗಿದ್ದು, ಮಾಡೆಲ್ ಮತ್ತು ವೇರಿಯೆಂಟ್ ಅನುಸಾರವಾಗಿ ಬದಲಾಗಬಹುದಾಗಿದೆ. ನಿಖರವಾದ ವಿವರಗಳಿಗಾಗಿ ನಿಮ್ಮ ಹತ್ತಿರದ ಅಧಿಕೃತ ಮಹೀಂದ್ರ ಡೀಲರ್‌ಶಿಪ್ ಅನ್ನು ಸಂಪರ್ಕಿಸಿ.

ಮಾಹಿತಿ ನೀಡಲು ಸುಧಾ–ಮೂರ್ತಿ ನಕಾರ

ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯಿಂದ ಸರ್ಕಾರಕ್ಕೆ ಉಪಯೋಗವಿಲ್ಲ ಎಂದಿರುವ ಇನ್ಫೊಸಿಸ್ ಸಂಸ್ಥಾಪಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ನೀಡುವುದಿಲ್ಲ ಎಂದು ಇನ್ಫೊಸಿಸ್ ಸಹ ಸಂಸ್ಥಾಪಕ ನಾರಾಯಣಮೂರ್ತಿ ಮತ್ತು ಸುಧಾ ಮೂರ್ತಿ ಅವರು ಸ್ವಯಂ ದೃಢೀಕರಣ ಪತ್ರ ನೀಡಿದ್ದಾರೆ.

ಇದೇ 10ರಂದು ಸಮೀಕ್ಷಕರಿಗೆ ಅವರು ನೀಡಿರುವ ಈ ಪತ್ರವು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಸಮೀಕ್ಷೆಗಾಗಿ ವಾರ್ಡ್‌ವಾರು ಗಣ್ಯರ ಮತ್ತು ಅತಿಗಣ್ಯರ ಪಟ್ಟಿಯನ್ನು ಮಾಡಿಕೊಳ್ಳಲಾಗಿತ್ತು. ಈ ಪಟ್ಟಿಯಲ್ಲಿ ಇರುವವರ ಮನೆಯ ಸಮೀಕ್ಷೆಗೆ ಸಮೀಕ್ಷಕರು ಮಾತ್ರವಲ್ಲದೆ ಸಹಾಯಕ ಕಂದಾಯ ಅಧಿಕಾರಿ, ರೆವಿನ್ಯೂ ಇನ್‌ಸ್ಪೆಕ್ಟರ್ ಅವರನ್ನು ಒಳಗೊಂಡ ತಂಡವು ಭೇಟಿ ನೀಡುವಂತೆ ಸೂಚಿಸಲಾಗಿತ್ತು' ಎಂದು ಜಿಬಿಎ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.


'ನಗರದ ಜಯನಗರದ ನಾಲ್ಕನೇ ಬ್ಲಾಕ್‌ನಲ್ಲಿರುವ ಸುಧಾ ಮೂರ್ತಿ ಮತ್ತು ನಾರಾಯಣಮೂರ್ತಿ ಅವರ ಮನೆಯನ್ನು ಈ ವಿಐಪಿ ಪಟ್ಟಿಯಲ್ಲಿ ಗುರುತಿಸಲಾಗಿತ್ತು. ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆ ಆರಂಭವಾದ ಮೊದಲ ದಿನವೇ ಅವರ ಮನೆಗೆ ಭೇಟಿ ನೀಡಲಾಗಿತ್ತು. ಆಗ ಅವರು ತಾವು ಸಮೀಕ್ಷೆಗೆ ಮಾಹಿತಿ ನಿರಾಕರಿಸುತ್ತೇನೆ ಎಂದು ಸ್ವಯಂ ದೃಢೀಕರಣ ಪತ್ರಕ್ಕೆ ಸಹಿ ಹಾಕಿಕೊಟ್ಟರು' ಎಂಬುದನ್ನು ಖಚಿತಪಡಿಸಿದರು.

'ಹಿಂದುಳಿದ ವರ್ಗಗಳ ಆಯೋಗವು, ಮಾಹಿತಿ ನಿರಾಕರಿಸುವವರ ಸ್ವಯಂ ದೃಢೀಕರಣಕ್ಕೆ ನಮೂನೆಯೊಂದನ್ನು ನೀಡಿದೆ. ಯಾವ ಕಾರಣಕ್ಕೆ ಮಾಹಿತಿ ನಿರಾಕರಿಸುತ್ತಿದ್ದೇವೆ ಎಂಬ ಅಂಶವನ್ನು ದಾಖಲಿಸಲು ಆ ಅರ್ಜಿಯಲ್ಲಿ ಅವಕಾಶವಿರಲಿಲ್ಲ. ಆದರೂ ನಾರಾಯಣಮೂರ್ತಿ ಅವರು, ಯಾವ ಕಾರಣಕ್ಕೆ ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಎಂಬುದನ್ನು ವಿವರಿಸಿ ಸಹಿ ಮಾಡಿಕೊಟ್ಟರು' ಎಂದು ಅಧಿಕಾರಿ ವಿವರಿಸಿದರು.

'ನಗರದ ಎಲ್ಲ ವಾರ್ಡ್‌ಗಳಲ್ಲಿ ಇರುವ ನಿವೃತ್ತ ನ್ಯಾಯಮೂರ್ತಿಗಳು, ಉದ್ಯಮಿಗಳು, ಚಿತ್ರನಟರು, ಕಲಾವಿದರು, ಸಾಹಿತಿಗಳನ್ನು ಒಳಗೊಂಡು ಅತಿಗಣ್ಯರ ಮನೆಗಳನ್ನು ಪಟ್ಟಿ ಮಾಡಿ, ಈಗಾಗಲೇ ಭೇಟಿ ನೀಡಲಾಗಿದೆ. ಕೆಲವರು ಸಮೀಕ್ಷೆಯಲ್ಲಿ ಭಾಗವಹಿಸಿ, ಮಾಹಿತಿ ನೀಡಿದ್ದಾರೆ. ಇನ್ನೂ ಕೆಲವರು ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಎಂದು ಸ್ವಯಂ ದೃಢೀಕರಣ ಪತ್ರ ನೀಡಿದ್ದಾರೆ. ಮತ್ತೂ ಕೆಲವರು ಬೇರೆ ಸಮಯದಲ್ಲಿ ಬರುವಂತೆ ತಿಳಿಸಿದ್ದಾರೆ' ಎಂದು ಮಾಹಿತಿ ಹಂಚಿಕೊಂಡರು.

'ಸಮೀಕ್ಷೆಗೆ ಮಾಹಿತಿ ನೀಡಲೇಬೇಕು ಎಂದು ಯಾರನ್ನೂ ಒತ್ತಾಯಿಸುತ್ತಿಲ್ಲ. ಸಮೀಕ್ಷೆಯಲ್ಲಿ ಭಾಗವಹಿಸಿದ ಕೆಲವು ಗಣ್ಯರು, ಸ್ವತಃ ತಾವೇ ವಿಡಿಯೊ ಮಾಡಿ ಇನ್‌ಸ್ಟಾಗ್ರಾಂಗಳಲ್ಲಿ ಪೋಸ್ಟ್ ಮಾಡಿದ್ದಾರೆ. ಇದರಿಂದ ಸಮೀಕ್ಷಕರಿಗೆ ಅನುಕೂಲವಾಗಿದೆ' ಎಂದರು.

'ನಾವು ಹಿಂದುಳಿದ ಜಾತಿಯವರಲ್ಲ...'


ಮಾಹಿತಿ ನೀಡಲು ನಿರಾಕರಣೆ ಸ್ವಯಂ ದೃಢೀಕರಣ ಪತ್ರ

ಶ್ರೀಮತಿ/ಶ್ರೀ .... ಆದ ನಾನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮೂಲಕ ನಡೆಯುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ನನ್ನ ಕೆಲವು ವೈಯಕ್ತಿಕ ಕಾರಣಗಳಿಂದ ಮಾಹಿತಿ ನೀಡಲು ನಿರಾಕರಿಸುತ್ತಿದ್ದೇನೆ.

ನಾನು ಮತ್ತು ನನ್ನ ಕುಟುಂಬ ಈ ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಮತ್ತು ನಮ್ಮ ಮಾಹಿತಿಯನ್ನು ನೀಡಲು ನಿರಾಕರಿಸಿದ್ದೇನೆ ಈ ಮೂಲಕ ದೃಢೀಕರಿಸುತ್ತೇನೆ.

UHID ಸಂಖ್ಯೆ:

ದೂರವಾಣಿ ಸಂಖ್ಯೆ:

ನಿರಾಕರಿಸಿದವರ ಸಹಿ

ದಿನಾಂಕ: 10/10/2025

ಸ್ಥಳ

'ನಾವು ಹಿಂದುಳಿದ ಯಾವುದೇ ಜಾತಿಗೆ ಸೇರಿದವರಲ್ಲ. ಈ ಸಮೀಕ್ಷೆಯಿಂದ ಸರ್ಕಾರಕ್ಕೆ ಏನೂ ಉಪಯೋಗವಿಲ್ಲ. ಆದ್ದರಿಂದ ನಾವು ಇದರಲ್ಲಿ ಭಾಗವಹಿಸುವುದಿಲ್ಲ' ಎಂದು ಸುಧಾ ಮೂರ್ತಿ ಮತ್ತು ನಾರಾಯಣಮೂರ್ತಿ ಅವರು ಸ್ವಯಂ ದೃಢೀಕರಣ ಪತ್ರದಲ್ಲಿ ಬರೆದಿದ್ದಾರೆ. ನಾರಾಯಣಮೂರ್ತಿ ಅವರು ಈ ಪತ್ರಕ್ಕೆ ಸಹಿ ಮಾಡಿದ್ದಾರೆ.


ಸಿದ್ದರಾಮಯ್ಯ ಅವರು ಸಮೀಕ್ಷಕರಿಗೆ ಮಾಹಿತಿ ನೀಡಿದರು

ಸಮೀಕ್ಷೆಗೆ ಮಾಹಿತಿ ನೀಡಿದ ಸಿ.ಎಂ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ಸಂಗ್ರಹಿಸಲು ಸಮೀಕ್ಷಕರು ಮುಖ್ಯಮಂತ್ರಿ ಅವರ ಕಾವೇರಿ ನಿವಾಸಕ್ಕೆ ಗುರುವಾರ ಭೇಟಿ ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವತಃ ಸಮೀಕ್ಷಕರಿಗೆ ಮಾಹಿತಿ ನೀಡಿದರು. ಸುಮಾರು 45 ನಿಮಿಷಗಳವರೆಗೆ ಈ ಪ್ರಕ್ರಿಯೆ ನಡೆಯಿತು. ಸಮೀಕ್ಷಕರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಸಿದ್ದರಾಮಯ್ಯ ಅವರು ಮಾಹಿತಿ ನೀಡಿದರು.

'ಒಂದು ಜಾತಿಗೆ ಸೀಮಿತವಲ್ಲ'

ಇದು ಯಾವುದೇ ಒಂದು ಜಾತಿಗೆ ಸೀಮಿತವಾದ ಸಮೀಕ್ಷೆಯಲ್ಲ, ರಾಜ್ಯದ ಪ್ರತಿಯೊಬ್ಬರ ಜೀವನದ ಮೇಲೆ ಬೆಳಕು ಚೆಲ್ಲುವ ಒಂದು ವೈಜ್ಞಾನಿಕ ಪ್ರಯತ್ನ. ಸಮೀಕ್ಷೆಯಲ್ಲಿ ಮಾಹಿತಿ ನೀಡುವುದರಿಂದ ನಿಮ್ಮ ವೈಯಕ್ತಿಕ ಮಾಹಿತಿ ದುರ್ಬಳಕೆ ಖಂಡಿತಾ ಆಗದು. ಚಿಂತೆ ಬಿಟ್ಟು, ಧೈರ್ಯವಾಗಿ ಸಿಬ್ಬಂದಿಗಳ ಜೊತೆ ಮಾಹಿತಿ ಹಂಚಿಕೊಳ್ಳಿ.

ಅಸಮಾನತೆ, ಬಡತನವನ್ನು ನಿವಾರಣೆ ಮಾಡಿ ಸಮಸಮಾಜ ನಿರ್ಮಾಣ ಮಾಡುವ ಉದ್ದೇಶದೊಂದಿಗೆ ನಮ್ಮ ಸರ್ಕಾರವು ಈ ಸಮೀಕ್ಷೆಯನ್ನು ಕೈಗೊಂಡಿದೆ. ಪ್ರತಿಯೊಬ್ಬರೂ ಈ ಸಮೀಕ್ಷೆಯಲ್ಲಿ ತಪ್ಪದೇ ಪಾಲ್ಗೊಂಡು, ತಮ್ಮ ಮಾಹಿತಿಯನ್ನು ಪ್ರಾಮಾಣಿಕವಾಗಿ ನೀಡಬೇಕು. ಆಗ ಮಾತ್ರ ಸಮಾಜದ ವಾಸ್ತವ ಸ್ಥಿತಿಗತಿಯ ಬಗೆಗೆ ನಿಖರ ಮಾಹಿತಿ ದೊರೆತು, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಜನರನ್ನು ಗುರುತಿಸಿ, ಅವರ ಪ್ರಗತಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯ.

ಸಿದ್ದರಾಮಯ್ಯ, ಮುಖ್ಯಮಂತ್ರಿ (ಸಮೀಕ್ಷಕರಿಗೆ ಮಾಹಿತಿ ನೀಡಿದ ನಂತರ ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್)

ಸಮೀಕ್ಷೆಯಲ್ಲಿ ಯಾರು, ಏನು ಮಾಹಿತಿ ನೀಡಿದ್ದಾರೆ ಎಂಬುದನ್ನು ನಾನು ಹೇಳಲು ಅವಕಾಶವಿಲ್ಲ. ಸಮೀಕ್ಷೆಯ ವಿವರ ಗೋಪ್ಯವಾಗಿ ಇರಬೇಕು
ಎಂ.ಮಹೇಶ್ವರರಾವ್, ಜಿಬಿಎ ಮುಖ್ಯ ಆಯುಕ್ತ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ನೀಡಿ ಎಂದು ಯಾರನ್ನೂ ಬಲವಂತ ಮಾಡಲು ಅವಕಾಶವಿಲ್ಲ. ಮಾಹಿತಿ ನೀಡುವುದು ಅಥವಾ ನಿರಾಕರಿಸುವುದು ಅವರ ಇಚ್ಛೆ
ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಚಿಟಿಕೆ ಸುದ್ದಿ

ಕೃಷಿ ಹೊಂಡಕ್ಕೆ ಬಿದ್ದು ಮೂವರು ಮಕ್ಕಳು ಸಾವು

ವಿಜಯಪುರ: ತಾಲ್ಲೂಕಿನ ಮಿಂಚನಾಳ ತಾಂಡಾದ ಮಾದೇವ ನಗರದಲ್ಲಿ ಗುರುವಾರ ಕೃಷಿ ಹೊಂಡದಲ್ಲಿ ಜಾರಿ ಬಿದ್ದು ಮೂವರು ಮಕ್ಕಳು ಮೃತಪಟ್ಟಿದ್ದಾರೆ.

'ಶಿವಮ್ಮ ರಾಜು ರಾಠೋಡ (8), ಸ್ವಪ್ನಾ ರಾಜು ರಾಠೋಡ (12) ಮತ್ತು ಕಾರ್ತಿಕ ವಿಶ್ವ ರಾಠೋಡ ಮೃತರು. ಕುರಿಗಳ ಜೊತೆ ಆಟವಾಡುತ್ತಿದ್ದ ವೇಳೆ ಮಕ್ಕಳು ಕಾಲು ಕೃಷಿ ಹೊಂಡದಲ್ಲಿ ಜಾರಿ ಬಿದ್ದು ಸಾವಿಗೀಡಾಗಿದ್ದಾರೆ' ಎಂದು ಕುಟುಂಬದವರು ತಿಳಿಸಿದ್ದಾರೆ.

ಸ್ಥಳಕ್ಕೆ ವಿಜಯಪುರ ತಹಶೀಲ್ದಾರ ಚಿನಗೊಂಡ ಹಾಗೂ ವಿಜಯಪುರ ಗ್ರಾಮೀಣ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ಹೆದ್ದಾರಿ ಹೊಂಡಕ್ಕೆ ಸಿಲುಕಿದ ಬಸವರಾಜ ಹೊರಟ್ಟಿ ಕಾರು

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ಯಲ್ಲಾಪುರದ ಮೂಲಕ ಹುಬ್ಬಳ್ಳಿಗೆ ಹೊರಟಿದ್ದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರಯಾಣಿಸುತ್ತಿದ್ದ ಕಾರು ಬುಧವಾರ ರಾತ್ರಿ ಡೊಮಗೇರೆ ಕ್ರಾಸ್ ರಸ್ತೆಯ ಬೃಹತ್ ಹೊಂಡದಲ್ಲಿ ಸಿಲುಕಿ, ಮುಂದಕ್ಕೆ ಸಾಗದೇ ಸ್ಥಗಿತಗೊಂಡಿತು.

'ನಂತರ ಅವರು ಖಾಸಗಿ ಕಾರುವೊಂದರಲ್ಲಿ ಕಲಘಟಗಿವರೆಗೆ ಪ್ರಯಾಣಿಸಿ ಅಲ್ಲಿಂದ ಸರ್ಕಾರಿ ಕಾರಿನಲ್ಲಿ ಪ್ರಯಾಣಿಸಿದರು' ಎಂದು ಮೂಲಗಳು ತಿಳಿಸಿವೆ.

ನಗರಸಭೆ: ಆಡಳಿತಾಧಿಕಾರಿ ನೇಮಕಕ್ಕೆ ತಡೆ

ಬೆಂಗಳೂರು: 'ಚಿತ್ರದುರ್ಗ, ಹೊಸಕೋಟೆ, ಮಂಡ್ಯ ಹಾಗೂ ಗೌರಿಬಿದನೂರು ನಗರಸಭೆಗಳ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಳ್ಳುವ ತನಕ ಈ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಿಸಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಈ ನಾಲ್ಕೂ ನಗರಸಭೆಗಳ ಸ್ಥಳೀಯ ಚುನಾಯಿತ ಸದಸ್ಯರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರತಿವಾದಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಸೇರಿದಂತೆ ಆಯಾ ಜಿಲ್ಲಾಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ.

ನಿರ್ಬಂಧ ಹಿಂಪಡೆಯದಿದ್ದರೆ ವಿಜಯಪುರ ಬಂದ್

ವಿಜಯಪುರ: 'ಸಮಾಜದಲ್ಲಿ ನಡೆದಿರುವ ಘಟನಾವಳಿಗಳನ್ನು ಯಥಾವತ್ತಾಗಿ ವಿವರಿಸಿದ್ದಕ್ಕೆ ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಮಠದ ಸ್ವಾಮೀಜಿಗೆ ವಿಜಯಪುರ ಜಿಲ್ಲೆಗೆ ಬರದಂತೆ ಜಿಲ್ಲಾಡಳಿತ ನಿಷೇಧ ಹೇರಿರುವುದನ್ನು ಹಿಂಪಡೆಯದಿದ್ದರೆ ವಿಜಯಪುರದ ಬಂದ್‌ಗೆ ಕರೆ ನೀಡಬೇಕಾಗುತ್ತದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಎಚ್ಚರಿಕೆ ನೀಡಿದ್ದಾರೆ.


ಯತ್ನಾಳ


'ರಾಜಕೀಯ ಪ್ರಾಬಲ್ಯ ಸಾಧಿಸಲು, ವೋಟ್ ಬ್ಯಾಂಕ್ ರಾಜಕಾರಣವನ್ನು ಧಿಕ್ಕರಿಸಲು ಅವರು ಮಾತನಾಡಿದ ಕಾರಣ, ಅವರ ಮೇಲೆ ಈ ಕ್ರಮ ಜರುಗಿಸಲಾಗಿದೆ' ಎಂದು ಅವರು ಆರೋಪಿಸಿದ್ದಾರೆ.

'ಪ್ರಜೆಗಳ ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಪೊಲೀಸರನ್ನು, ಜಿಲ್ಲಾಡಳಿತವನ್ನು ಉಪಯೋಗಿಸಿಕೊಂಡು ವಾಕ್ ಸ್ವಾತಂತ್ರ್ಯಹರಣ ಮಾಡುತ್ತಿರುವುದು ಹೇಯ ಹಾಗೂ ಖಂಡನೀಯ. ಇದು ಪ್ರಜಾಪ್ರಭುತ್ವದ ಅಣಕ ಎಂದರೆ ತಪ್ಪಾಗಲಾರದು. ಸರ್ಕಾರ ಕೂಡಲೇ ಈ ನಿಷೇಧವನ್ನು ವಾಪಾಸ್ ಪಡೆಯಬೇಕು ಈ ರೀತಿಯಾದ ನಿರಂಕುಶ ಧೋರಣೆಯನ್ನು ಕೂಡಲೇ ಕೈಬಿಡಬೇಕು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡಸಿದ್ದೇಶ್ವರ ಸ್ವಾಮೀಜಿಗೆ ವಿಜಯಪುರ ಜಿಲ್ಲೆ ಪ್ರವೇಶ ನಿರ್ಬಂಧ

ಪ್ರಜಾವಾಣಿ ವಾರ್ತೆ

ವಿಜಯಪುರ: ಮಹಾರಾಷ್ಟ್ರದ ಕೊಲ್ಹಾಪುರ-ಕನೇರಿ ಕಾಡಸಿದ್ದೇಶ್ವರ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಗೆ ಅಕ್ಟೋಬರ್ 16ರಿಂದ ಡಿಸೆಂಬರ್ 16ರವರೆಗೆ ವಿಜಯಪುರ ಜಿಲ್ಲಾ ಪ್ರವೇಶಿಸದಂತೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ.ಆನಂದ.ಕೆ ಆದೇಶ ಹೊರಡಿಸಿದ್ದಾರೆ.


ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ

ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಬೀಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಬಸವ ಸಂಸ್ಕೃತಿ ಉತ್ಸವದಲ್ಲಿ ಪಾಲ್ಗೊಂಡಿದ್ದ ಲಿಂಗಾಯತ ಮಠಾಧೀಶರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿತ್ತು. ಅವರ ವಿರುದ್ಧ ವಿವಿಧ ಜಿಲ್ಲೆಗಳಲ್ಲಿ ಮಠಾಧೀಶರು, ಬಸವ ಭಕ್ತರು ಸೇರಿ ಪ್ರತಿಭಟನೆ ನಡೆಸಿದ್ದರು.

'ಬಸವನ ಬಾಗೇವಾಡಿಯಲ್ಲಿ ಅಕ್ಟೋಬರ್ 16 ಮತ್ತು 17 ಕಾರ್ಯಕ್ರಮ ಇತ್ತು. ಅವರ ಉಪಸ್ಥಿತಿ ಅಥವಾ ಹೇಳಿಕೆಯಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಆಗಬಹುದು' ಎಂದು ಪೊಲೀಸರು ವರದಿ ನೀಡಿದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ವಿಜಯಪುರ ಜಿಲ್ಲೆ ಪ್ರವೇಶ ನಿರ್ಬಂಧ ಪ್ರಶ್ನಿಸಿ ಕಾಡ ಸಿದ್ದೇಶ್ವರ ಸ್ವಾಮೀಜಿ ಅರ್ಜಿ

ಕನೇರಿ ಸ್ವಾಮೀಜಿಗೆ ಆ ಭಾಷೆ ಸಲ್ಲ: ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿ ಬಳಸಿರುವ ನುಡಿಗಳು ಅವರ ಸ್ಥಾನಕ್ಕೆ ಶೋಭೆ ತರುವಂತಹುದಲ್ಲ. ಸ್ವಾಮೀಜಿ ಸಾಮಾನ್ಯರಿಗಿಂತಲೂ ಕೆಳ ಹಂತದ ಭಾಷೆ ಬಳಕೆ ಮಾಡಿದ್ದಾರೆ' ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

ವಿಜಯಪುರ ಜಿಲ್ಲೆಗೆ ಭೇಟಿ ನೀಡುವುದನ್ನು ಪ್ರತಿಬಂಧಿಸಿ ವಿಜಯಪುರ ಜಿಲ್ಲಾಧಿಕಾರಿ ಗುರುವಾರವಷ್ಟೇ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಕಾಡಸಿದ್ದೇಶ್ವರ ಸ್ವಾಮೀಜಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಸ್ವಾಮೀಜಿಯ ಹಿತ ದೃಷ್ಟಿಯಿಂದಲೇ ಅವರ ವಿಜಯಪುರ ಭೇಟಿಯನ್ನು ಪ್ರತಿಬಂಧಿಸಲಾಗಿದೆ. ರಾಜ್ಯ ಗುಪ್ತಚರ ಇಲಾಖೆಯ ಮಾಹಿತಿ, ಜಿಲ್ಲಾ ಎಸ್‌ಪಿಯವರ ವರದಿಗಳನ್ನು ಆಧರಿಸಿಯೇ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ' ಎಂದು ಸ್ಪಷ್ಟಪಡಿಸಿದರು.

'ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗಬಾರದು ಎಂಬ ಕಾರಣಕ್ಕೆ ಜಿಲ್ಲಾಡಳಿತ ಈ ಆದೇಶ ಹೊರಡಿಸಿದೆ. ಕನೇರಿ ಸ್ವಾಮೀಜಿಗಳ ಭಕ್ತರೇ, ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವುದು ಬೇಡ ಎಂದು ಹೇಳುತ್ತಿದ್ದಾರೆ. ಸ್ವಾಮೀಜಿ ಬಸವನಬಾಗೇವಾಡಿಗೆ ತೆರಳುವುದರಿಂದ ಅಲ್ಲಿ ಪ್ರತಿಭಟನೆಗಳು ನಡೆಯುವ ಸಾಧ್ಯತೆಗಳಿವೆ' ಎಂದು ಶಶಿಕಿರಣ ಶೆಟ್ಟಿ ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.

ಇದಕ್ಕೂ ಮುನ್ನ ಅರ್ಜಿದಾರ ಸ್ವಾಮೀಜಿ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, 'ಕಾನೂನು ಸುವ್ಯವಸ್ಥೆ ಕಾಪಾಡುವುದು ಸರ್ಕಾರದ ಕರ್ತವ್ಯ. ಕಾನೂನು ಸುವ್ಯವಸ್ಥೆಯ ನೆಪವೊಡ್ಡಿ ಸ್ವಾಮೀಜಿ ಅವರಿಗೆ ನಿರ್ಬಂಧ ಹೇರಿರುವುದು ಒಪ್ಪುವಂತಹುದಲ್ಲ' ಎಂದು ಆಕ್ಷೇಪಿಸಿದರು.

ಇದಕ್ಕೆ ನ್ಯಾಯಪೀಠ, 'ಸ್ವಾಮೀಜಿ 17ಕ್ಕೇ ಏಕೆ ಅಲ್ಲಿಗೆ ತೆರಳಬೇಕು. ಬೇರೊಂದು ದಿನ ಹೋಗಬಹುದಲ್ಲವೇ' ಎಂದು ಪ್ರಶ್ನಿಸಿ, 'ಈಗಾಗಲೇ ಸಮಾಜದಲ್ಲಿ ಅಶಾಂತಿಯ ವಾತಾವರಣ ತಾಂಡವವಾಡುತ್ತಿದೆ. ಆದಾಗ್ಯೂ, ಸ್ವಾಮೀಜಿಯವರ ವಿಜಯಪುರ ಜಿಲ್ಲೆ ಭೇಟಿಗೆ ವಿಧಿಸಿರುವ ನಿರ್ಬಂಧ ಸಮಾಜಕ್ಕೆ ಕೆಟ್ಟ ಸಂದೇಶ ರವಾನಿಸಲಿದೆ. ಒಂದು ವೇಳೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುತ್ತದೆ ಎಂಬುದು ತಿಳಿದು ಬಂದರೆ ಸ್ವಾಮೀಜಿ ಆದಂಥವರು ಅಂತಹ ಕಡೆ ನಾನು ಬರುವುದೇ ಇಲ್ಲ ಎಂದು ಹೇಳುವಲ್ಲಿ ಮೊದಲಿಗರಾಗಬೇಕು' ಎಂದಿತು.

ಇದಕ್ಕೆ ಪ್ರಸನ್ನ ಕುಮಾರ್, 'ಸ್ವಾಮೀಜಿಯವರ ಬಸವನ ಬಾಗೇವಾಡಿ ಭೇಟಿ ಪೂರ್ವನಿರ್ಧರಿತ. ನಾಳೆ (ಅ.17) ಬಸವನ ಬಾಗೇವಾಡಿಯಲ್ಲಿ ಸಮರ್ಥ ಸದ್ಗುರು ಶ್ರೀ ಸಿದ್ದರಾಮೇಶ್ವರ ಮಹಾರಾಜರ ಪುಣ್ಯತಿಥಿ ಕಾರ್ಯಕ್ರಮವಿದೆ. ಅಲ್ಲಿ ಅವರ ಪ್ರವಚನವಿದೆ. ಮದುವೆ ದಿನ, ಗಂಡಿಗೇ ಮದುವೆಗೆ ಹೋಗಬೇಡ ಎಂದರೆ ಹೇಗೆ?' ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ನಾಳೆ (ಅ.17) ಬೆಳಿಗ್ಗೆ 10:30ಕ್ಕೆ ಮಧ್ಯಂತರ ಆದೇಶ ಪ್ರಕಟಿಸುವುದಾಗಿ ತಿಳಿಸಿತು. ಸ್ವಾಮೀಜಿ ಪರ ಕಲಬುರಗಿಯ ಹೈಕೋರ್ಟ್ ವಕೀಲ ಸಚಿನ್ ಎಂ.ಮಹಾಜನ್ ವಕಾಲತ್ತು ವಹಿಸಿದ್ದಾರೆ.

ರಾಜಕಾಲುವೆ ಬಫರ್ ವಲಯ ಕಡಿತ ಅಂತಿಮ

ಮಾಸ್ಟರ್ ಪ್ಲಾನ್‌ನಲ್ಲಿರುವ ಬಫರ್ ವಲಯ ವ್ಯಾಪ್ತಿ ಬದಲಾಯಿಸಿ ನಿಯಮಗಳಿಗೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಸ್ಥಳೀಯ ಯೋಜನಾ ಪ್ರಾಧಿಕಾರ ಸೇರಿದಂತೆ ಬೆಂಗಳೂರು ಮೆಟ್ರೊ ಪಾಲಿಟನ್ ವಲಯದಲ್ಲಿರುವ ಎಲ್ಲ ಯೋಜನಾ ಪ್ರಾಧಿಕಾರಗಳಲ್ಲಿ ರಾಜಕಾಲುವೆಗಳ ಬಫರ್ ವಲಯವನ್ನು ಅರ್ಧದಷ್ಟು ಕಡಿಮೆ ಮಾಡಿ ನಗರಾಭಿವೃದ್ಧಿ ಇಲಾಖೆ ಗುರುವಾರ ಅಂತಿಮ ಅಧಿಸೂಚನೆ ಹೊರಡಿಸಿದೆ.

ಕೆರೆಗಳು ಹಾಗೂ ರಾಜಕಾಲುವೆಗಳ ಬಫರ್ ವಲಯವನ್ನು ಅಭಿವೃದ್ಧಿ ಕಾರ್ಯಗಳಿಗೆ ಒಪ್ಪಿಗೆ ನೀಡುವಾಗ ಪರಿಗಣಿಸಬೇಕಾಗಿದೆ. ಇದಕ್ಕಾಗಿ, ಮಾಸ್ಟರ್ ಪ್ಲಾನ್‌ನಲ್ಲಿರುವ ಬಫರ್ ವಲಯ ವ್ಯಾಪ್ತಿಯನ್ನು ಬದಲಾಯಿಸಿ ವಲಯ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ ಸೆಕ್ಷನ್ 13–ಇಗೆ ತಿದ್ದುಪಡಿ ತಂದು, ಬೆಂಗಳೂರಿನ ಸ್ಥಳೀಯ ಯೋಜನಾ ಪ್ರಾಧಿಕಾರದ ಪರಿಷ್ಕೃತ ಮಾಸ್ಟರ್ ಪ್ಲಾನ್–2015, ಬೆಂಗಳೂರು - ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನೆ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಹಾಗೂ ಬೆಂಗಳೂರು ಮೆಟ್ರೊಪಾಲಿಟನ್ ವಲಯದ ಎಲ್ಲ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿ ವಲಯ ನಿಯಮಗಳಿಗೆ ತಿದ್ದುಪಡಿ ತರಲಾಗುತ್ತದೆ ಎಂದು ಸೆ.2ರಂದು ಹೊರಡಿಸಿರುವ ಕರಡು ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು.

ರಾಜಕಾಲುವೆ ಬಫರ್ ವಲಯ (ಮೀಟರ್‌ಗಳಲ್ಲಿ)		
ರಾಜಕಾಲುವೆ	2019ರ ಆದೇಶ	2025ರ ಅಧಿಸೂಚನೆ
ಪ್ರಾಥಮಿಕ	30	15
ದ್ವಿತೀಯ	15	10
ತೃತೀಯ	10	5

ಕೆರೆಗಳ ಬಫರ್ ವಲಯವನ್ನು ಕಂದಾಯ ಇಲಾಖೆಯ ದಾಖಲೆಯಂತೆ ನಿರ್ವಹಣೆ ಮಾಡಬೇಕು. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯಲ್ಲಿ ಕೆರೆಗಳ ಬಫರ್ ವಲಯ ನಿಗದಿಯಾಗಿದೆ. ಕೆರೆಗಳ ಬಫರ್ ವಲಯವನ್ನು 'ಮೀಸಲು ಉದ್ಯಾನ'ವನ್ನಾಗಿ ಪರಿಗಣಿಸಿ ನಕ್ಷೆ ಅನುಮೋದನೆ ನೀಡಬಹುದು ಎಂದು ಹೇಳಲಾಗಿದೆ.

ರಾಜಕಾಲುವೆಗಳಿಗೆ ಹೊಸ ವ್ಯಾಖ್ಯಾನ ನೀಡಿ, ಕಂದಾಯ ಇಲಾಖೆಯಲ್ಲಿ ನೈಸರ್ಗಿಕ ಕಾಲುವೆ/ ನಾಲಾಗಳಾಗಿದ್ದು, ಕೆರೆಯಿಂದ ಕೆರೆಗೆ ಅಥವಾ ಕೆರೆಯಿಂದ ನದಿಗೆ ಮಳೆನೀರು ಹರಿಸುವ ಕಾಲುವೆಗಳನ್ನು ಪ್ರಾಥಮಿಕ ರಾಜಕಾಲುವೆ ಎಂದು ಹೆಸರಿಸಲಾಗಿದೆ. ದ್ವಿತೀಯ ರಾಜಕಾಲುವೆ ಎಂದರೆ, ಕಂದಾಯ ಇಲಾಖೆಯಲ್ಲಿ ನೈಸರ್ಗಿಕ ಕಾಲುವೆ/ ನಾಲಾಗಳಾಗಿದ್ದು, ಕೆರೆಗಳಿಗೆ ಅಥವಾ ಪ್ರಾಥಮಿಕ ರಾಜಕಾಲುವೆಗೆ ಮಳೆ ನೀರನ್ನು ಹರಿಸುವ ಕಾಲುವೆಗಳು ಎಂದು ಹೇಳಲಾಗಿದೆ. ಕಂದಾಯ ಇಲಾಖೆಯಲ್ಲಿ ನೈಸರ್ಗಿಕ ಕಾಲುವೆ/ ನಾಲಾಗಳಾಗಿದ್ದು, ದ್ವಿತೀಯ ಹಂತದ ರಾಜಕಾಲುವೆಗೆ ಮಳೆ ನೀರು ಹರಿಸುವ ಕಾಲುವೆಗಳನ್ನು ತೃತೀಯ ರಾಜಕಾಲುವೆಗಳು ಎಂದು ವಿವರಿಸಲಾಗಿದೆ.

ಕೆರೆ ಹಾಗೂ ರಾಜಕಾಲುವೆಗಳ ಬಫರ್ ವಲಯ ಕಡಿಮೆ ಮಾಡಲು ಮುಖ್ಯ ಕಾರ್ಯದರ್ಶಿ ನೇತೃತ್ವದ ಅಧಿಕಾರಿಗಳ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಅದರಂತೆ, ಕೆಟಿಸಿಡಿಎ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ವಿಧಾನ ಮಂಡಲದಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ರಾಜಕಾಲುವೆ ಬಫರ್ ವಲಯ ಕೆಟಿಸಿಡಿಎ ವ್ಯಾಪ್ತಿಗೆ ಬಾರದಿರುವುದರಿಂದ, ಸಮಿತಿಯ ತೀರ್ಮಾನದಂತೆ ಅಧಿಸೂಚನೆ ಹೊರಡಿಸಿ, ಕಡಿತಗೊಳಿಸಲಾಗಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) 2016ರಲ್ಲಿ ಹೊರಡಿಸಿದ ಆದೇಶದಂತೆ, ಪ್ರಾಥಮಿಕ ರಾಜಕಾಲುವೆಗೆ 50 ಮೀಟರ್, ದ್ವಿತೀಯ ರಾಜಕಾಲುವೆಗೆ 35 ಮೀಟರ್, ತೃತೀಯ ರಾಜಕಾಲುವೆಗೆ 25 ಮೀಟರ್ ಬಫರ್ ವಲಯ ನಿಗದಿಯಾಗಿತ್ತು. ಸರ್ಕಾರದ 2019ರ ಆದೇಶದಂತೆ, ರಾಜಕಾಲುವೆಗಳ ಬಫರ್ ವಲಯವನ್ನು ಮತ್ತಷ್ಟು ಕಡಿತಗೊಳಿಸಿ ಜಾರಿಗೊಳಿಸಲಾಗಿತ್ತು.



ಪಿಇಎಸ್ ವಿಶ್ವವಿದ್ಯಾಲಯ ಆಸ್ಪತ್ರೆ, ರೋಟರಿ ಬೆಂಗಳೂರು ಎಚ್‌ಎಸ್‌ಆರ್ ವತಿಯಿಂದ 'ವೆಲ್‌ನೆಸ್ ಆನ್ ವೀಲ್' (ಡಬ್ಲ್ಯುಒಡಬ್ಲ್ಯು) ವಾಹನಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಪಿಇಎಸ್‌ಯು ಐಎಂಎಸ್‌ಆರ್‌ನ ವೈದ್ಯಕೀಯ ನಿರ್ದೇಶಕ ಡಾ. ಸುರೇಶ್ ಕೃಷ್ಣಮೂರ್ತಿ, ರೋಟರಿ ಜಿಲ್ಲೆ 3191 ಇದರ ನಿಕಟಪೂರ್ವ ಗವರ್ನರ್ ಸತೀಶ್ ಮಾಧವನ್, ಜಿಲ್ಲಾ ಗವರ್ನರ್ ಅನಿಲ್ ಗುಪ್ತ ಸೇರಿದಂತೆ ಹಲವರು ಭಾಗವಹಿಸಿದ್ದರು

5,950 ನಕಲಿ ಸಿಗರೇಟ್ ಪ್ಯಾಕ್ ಜಪ್ತಿ

ಬೆಂಗಳೂರು: ಪ್ರತಿಷ್ಠಿತ ಕಂಪನಿಯ ಹೆಸರಿನಲ್ಲಿ ನಕಲಿ ಸಿಗರೇಟ್ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಮಲ್ಲೇಶ್ವರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮುಂಬೈ ಮೂಲದ ಅಕ್ತರ್ ಖಾನ್ ಸೇರಿದಂತೆ ಇಬ್ಬರನ್ನು ಬಂಧಿಸಲಾಗಿದೆ. ಆರೋಪಿಗಳಿಂದ ₹14 ಲಕ್ಷ ಮೌಲ್ಯದ 5,950 ನಕಲಿ ಸಿಗರೇಟ್ ಪ್ಯಾಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೆಹಲಿಯಿಂದ ನಕಲಿ ಸಿಗರೇಟ್ ತರುತ್ತಿದ್ದ ಆರೋಪಿಗಳು, ನಗರದ ಹೋಟೆಲ್‌ಗಳಲ್ಲಿ ವಾಸ್ತವ್ಯ ಮಾಡುತ್ತಿದ್ದರು. ನಗರದ ಕೆಲವು ಅಂಗಡಿಗಳಿಗೆ ನಕಲಿ ಸಿಗರೇಟ್ ಪೂರೈಸಿ ಪರಾರಿ ಆಗುತ್ತಿದ್ದರು.



ಜಪ್ತಿ ಮಾಡಿದ ನಕಲಿ ಸಿಗರೇಟ್‌ಗಳು

ಐಪಿಆರ್ ಸರ್ವೀಸಸ್‌ನ ಉಪ ವ್ಯವಸ್ಥಾಪಕ ನೀಡಿದ ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಯಿತು. ಆರೋಪಿಗಳು ಐಟಿಸಿ ಸಿಗರೇಟ್ ತಯಾರಿಕೆ, ವಿತರಣೆ ಹಾಗೂ ಮಾರಾಟದಲ್ಲಿ ತೊಡಗಿದ್ದರು ಎಂದು ಪೊಲೀಸರು ಹೇಳಿದರು.

ಅತ್ಯಾಚಾರ: ಎಂಜಿನಿಯರಿಂಗ್ ವಿದ್ಯಾರ್ಥಿ ಬಂಧನ

ಒಂದನೇ ಪುಟದಿಂದ...

ಆ ಸಂದರ್ಭದಲ್ಲಿ ಆರೋಪಿ, ವಿದ್ಯಾರ್ಥಿನಿ ಜತೆಗೆ ಮಾತನಾಡಬೇಕು ಎಂದು ಹೇಳಿದ್ದ. ಅದಾದ ಮೇಲೆ ಊಟದ ವಿರಾಮದಲ್ಲಿ ಪದೇ ಪದೇ ವಿಚಾರಿಸಲು ತೆರಳಿದ್ದ ಸಂದರ್ಭದಲ್ಲಿ, ಏಳನೇ ಬ್ಲಾಕ್‌ಗೆ ಬರುವಂತೆ ತಿಳಿಸಿದ್ದ. ಅಲ್ಲಿಗೆ ಹೋದಾಗ ಬಲವಂತದಿಂದ ಚುಂಬಿಸಲು ಪ್ರಯತ್ನಿಸಿದ್ದ. ಆರೋಪಿಯಿಂದ ತಪ್ಪಿಸಿಕೊಂಡು ಲಿಫ್ಟ್ ಹತ್ತಿ ಆರನೇ ಮಹಡಿಗೆ ವಿದ್ಯಾರ್ಥಿನಿ ತೆರಳಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಬಳಿಕ ಪುರುಷರ ಶೌಚಾಲಯಕ್ಕೆ ವಿದ್ಯಾರ್ಥಿನಿಯನ್ನು ಎಳೆದೊಯ್ದು ಅತ್ಯಾಚಾರ ಎಸಗಿದ್ದಾನೆ. ಘಟನೆಯು ಅಂದು ಮಧ್ಯಾಹ್ನ 1.30ರಿಂದ 1.50ರ ನಡುವೆ ನಡೆದಿದೆ. ಘಟನೆ ನಡೆದ ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಲಾಗಿತ್ತೇ ಎಂದುದನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮಹಿಳೆ ಬ್ಯಾಗ್‌ನಲ್ಲಿ 4 ಕೆ.ಜಿ ಹೈಡ್ರೊ ಗಾಂಜಾ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಬುಧವಾರ ತಡರಾತ್ರಿ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮಹಿಳಾ ಪ್ರಯಾಣಿಕರೊಬ್ಬರ ಬಳಿ 4 ಕೆ.ಜಿ ಹೈಡ್ರೊ ಗಾಂಜಾ ಪತ್ತೆಯಾಗಿದೆ. ಇದರ ಮಾರುಕಟ್ಟೆ ಮೌಲ್ಯ ₹4 ಕೋಟಿ ಎಂದು ಅಂದಾಜಿಸಲಾಗಿದೆ.

ಬ್ಯಾಂಕಾಕ್‌ನಿಂದ ಹಾಂಕಾಂಗ್ ಮಾರ್ಗವಾಗಿ ಬಂದ ವಿಮಾನದಲ್ಲಿ ಮಹಿಳಾ ಪ್ರಯಾಣಿಕರೊಬ್ಬರು ಹೈಡ್ರೊ ಗಾಂಜಾ ಕಳ್ಳ ಸಾಗಣೆ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಇತ್ತು. ವೈಮಾನಿಕ ಗುಪ್ತಚರ ದಳ ಸಿಬ್ಬಂದಿ, ಕಸ್ಟಮ್ಸ್ ಅಧಿಕಾರಿಗಳು ಮಹಿಳೆಯ ಬ್ಯಾಗ್, ಸೂಟ್‌ಕೇಸ್ ಪರಿಶೀಲಿಸಿದಾಗ ಹೈಡ್ರೊ ಗಾಂಜಾ ಪತ್ತೆ ಆಗಿದೆ.2 ದಿನದಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಹೈಡ್ರೊ ಗಾಂಜಾ ಪತ್ತೆಯಾದ ಎರಡನೇ ಪ್ರಕರಣ ಇದಾಗಿದೆ.

ಸುಧಾ, ಮಯೂರ ಓದಿರಿ

ಎಚ್‌ಎಎಲ್ ಎಫ್‌ಸಿಗೆ ಜಯ

ಬೆಂಗಳೂರು: ಮೊಹಮ್ಮದ್ ಆಲ್ಬಕ್ಸ್ (19ನೇ ನಿ.) ಹಾಗೂ ಮೊಹಮ್ಮದ್ ಅರ್ಷದ್ (49ನೇ ನಿ.) ಅವರ ಆಟದ ನೆರವಿನಿಂದ ಎಚ್‌ಎಎಲ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಗುರುವಾರ 2–1ರಿಂದ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 2–0ಯಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು ಸೌತ್ ಯುನೈಟೆಡ್ ಎಫ್‌ಸಿ ಹಾಗೂ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ನಡುವಣ ಪಂದ್ಯವು ಗೋಲು ರಹಿತ ಡ್ರಾ ಆಯಿತು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಬೆಂಗಳೂರು: ಮಹದೇವಪುರ ಹಾಗೂ ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಮಹದೇವಪುರದ ಐಟಿಪಿಎಲ್ ರಸ್ತೆಯ ಕಂಟೇನರ್ ಬಳಿ ಗುರುವಾರ ಬೆಳಿಗ್ಗೆ ಸೈಕಲ್‌ನಲ್ಲಿ ತೆರಳುತ್ತಿದ್ದ ಮುಕ್ತಾರ್ ಅಹಮದ್ ಅವರಿಗೆ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು. ಯಲಹಂಕದ ದೊಡ್ಡಬೆಟ್ಟದ ಬಳಿ ಬುಧವಾರ ತಡರಾತ್ರಿ ಬೊಲೆರೊ ಜೀಪು ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಮತ್ತೊಂದು ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ, ಅತ್ತೂರು ನಿವಾಸಿ ರಮೇಶ್ ಮೃತಪಟ್ಟಿದ್ದಾರೆ.

ಚಾಲಕರ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಪ್ರಿಯಾಂಕ್‌ಗೆ ಬೆದರಿಕೆ: ಆರೋಪಿ ಸೆರೆ


ಕಲಬುರಗಿ, ಬೆಂಗಳೂರಿನ ಸದಾಶಿವನಗರ ಠಾಣೆ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಹಾಕಿದ್ದ ಆರೋಪಿಯನ್ನು ಕಲಬುರಗಿ ಹಾಗೂ ಬೆಂಗಳೂರಿನ ಸದಾಶಿವನಗರ ಠಾಣೆಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಮಹಾರಾಷ್ಟ್ರದ ಲಾತೂರ್‌ನಲ್ಲಿ ಬಂಧಿಸಿದ್ದಾರೆ.

ಮಹಾರಾಷ್ಟ್ರದ ಸೊಲ್ಲಾಪುರದ ದಾನಪ್ಪ ಶ್ರೀಶೈಲ ನರೋಣೆ ಅಲಿಯಾಸ್ ದಾನೇಶ್ (40) ಬಂಧಿತ ಆರೋಪಿ.

‘ಆರೋಪಿಯನ್ನು ಲಾತೂರ್‌ನಲ್ಲಿ ಬಂಧಿಸಿ ಬೆಂಗಳೂರಿಗೆ ಕರೆ ತರಲಾಗಿದೆ. ಶುಕ್ರವಾರ ನ್ಯಾಯಾಲಯಕ್ಕೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಳ್ಳಲಾಗುವುದು. ಆರೋಪಿ ಚಾಕೊಲೇಟ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆಯೇ ದಾನಪ್ಪ ಅವರು ತಲೆಮರೆಸಿಕೊಂಡಿದ್ದರು. ಮೊಬೈಲ್ ಲೊಕೇಶನ್ ಆಧರಿಸಿ ಆರೋಪಿಯಿದ್ದ ಸ್ಥಳವನ್ನು ಪತ್ತೆಹಚ್ಚಿ ಬಂಧಿಸಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.



ದಾನಪ್ಪ ನರೋಣೆ

ಸಾರ್ವಜನಿಕ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸುವಂತೆ ಕೋರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಆ ವಿಚಾರವಾಗಿ ದಾನಪ್ಪ ಅವರು ಸಚಿವರಿಗೆ ಕರೆ ಮಾಡಿ ಅವಾಚ್ಯವಾಗಿ ನಿಂದಿಸಿ ಬೆದರಿಕೆ ಹಾಕಿದ್ದರು ಎಂದು ಪೊಲೀಸರು ಹೇಳಿದರು.

ಝಡ್ ಶ್ರೇಣಿ ಭದ್ರತೆ ಒದಗಿಸಿ: ದಲಿತ ಸಂಘರ್ಷ ಸಮಿತಿ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಕರೆಗಳು ಬರುತ್ತಿವೆ. ಹೀಗಾಗಿ ಅವರಿಗೆ ಝಡ್ ಶ್ರೇಣಿಯ ಭದ್ರತೆ ಒದಗಿಸಬೇಕು ಎಂದು ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಚಾಲಕ ಡಿ.ಜಿ. ಸಾಗರ್, ‘ಆರ್‌ಎಸ್‌ಎಸ್ ವಿರುದ್ಧ ಹೋರಾಟ ನಡೆಸುತ್ತಿರುವ ಪ್ರಿಯಾಂಕ್ ಖರ್ಗೆ ಅವರಿಗೆ ರಾಜ್ಯದ ಜನ ಬೆಂಬಲ ನೀಡುತ್ತಿದ್ದಾರೆ. ಆರ್‌ಎಸ್‌ಎಸ್ ಕಾರ್ಯಕರ್ತರು ಹಾಡುಹಗಲೇ ದೊಣ್ಣೆ ಹಿಡಿದು ರಸ್ತೆಯಲ್ಲಿ ಪಥ ಸಂಚಲನ ಮಾಡುವ ಮೂಲಕ ಕಾನೂನು ಸುವ್ಯವಸ್ಥೆಗೆ ಸವಾಲು ಹಾಕುತ್ತಿದ್ದಾರೆ. ಇಷ್ಟಾದರೂ, ಸಂವಿಧಾನದತ್ತವಾಗಿ ಅಧಿಕಾರಕ್ಕೆ ಬಂದಿರುವ ಸರ್ಕಾರ ಮೌನವಾಗಿರುವುದು ಸರಿಯಲ್ಲ’ ಎಂದು ತಿಳಿಸಿದರು.

‘ಆರ್‌ಎಸ್‌ಎಸ್ ವಿರುದ್ಧ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಪ್ರಿಯಾಂಕ್ ಖರ್ಗೆ ಹಾಗೂ ಎಚ್‌.ಸಿ. ಮಹದೇವಪ್ಪ ಹೊರತುಪಡಿಸಿ ದೊಡ್ಡ ಧ್ವನಿಯಲ್ಲಿ ಬೇರೆ ಯಾವೊಬ್ಬ ಕಾಂಗ್ರೆಸ್ ನಾಯಕರೂ ಮಾತನಾಡುತ್ತಿಲ್ಲ. ಇದು ದೊಡ್ಡ ದುರಂತ’ ಎಂದು ಹೇಳಿದರು.


ಆರ್‌ಎಸ್‌ಎಸ್ ಎರಡು ಬಾರಿ ನಿಷೇಧಕ್ಕೆ ಒಳಗಾಗಿರುವ ಸಂಘಟನೆ ಆಗಿದೆ. ಇದು ಜಾತಿ ವ್ಯವಸ್ಥೆ, ಬ್ರಾಹ್ಮಣಶಾಹಿ ಸಿದ್ಧಾಂತಗಳನ್ನು ದೇಶದಲ್ಲಿ ಮರು ಜಾರಿಗೊಳಿಸುವ ಉದ್ದೇಶ ಹೊಂದಿದೆ. ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳನ್ನು ಆರ್‌ಎಸ್‌ಎಸ್ ನಡೆಸುತ್ತಿರುವುದರಿಂದ, ಇದನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಸಮಿತಿಯ ಮುಖಂಡರಾದ ಅಣ್ಣಯ್ಯ, ಮಂಜುನಾಥ್ ಸುದ್ದಿಗೋಷ್ಠಿಯಲ್ಲಿದ್ದರು.

‘ವೈಫಲ್ಯ ಮುಚ್ಚಲು ಆರ್‌ಎಸ್‌ಎಸ್ ಬಳಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರು ಬಳಸಿಕೊಂಡು ಜನರ ದಿಕ್ಕು ತಪ್ಪಿಸುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದ್ದಾರೆ.



ವಿಜಯೇಂದ್ರ

ಈ ಕುರಿತು ‘ಎಕ್ಸ್’ ಮಾಡಿರುವ ಅವರು, ‘ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗುವವರ ಮೇಲೆ ಯಾವ ಕ್ರಮಗಳನ್ನೂ ಜರುಗಿಸಲಿಲ್ಲ. ಪಿಎಫ್‌ಐ, ಕೆಎಫ್‌ಡಿಯಂತಹ ದೇಶವಿರೋಧಿ ಸಂಘಟನೆಗಳನ್ನು ನಿಷೇಧಿಸಿಲ್ಲ. ಅವರ ಚಟುವಟಿಕೆಗಳ ಮೇಲೆ ಕನಿಷ್ಠ ನಿಯಂತ್ರಣ ಸಾಧಿಸುವ ನಿರ್ಧಾರವನ್ನು ಕೈಗೊಳ್ಳಲಿಲ್ಲ’ ಎಂದು ದೂರಿದ್ದಾರೆ.

‘ಸ್ವಾತಂತ್ರ್ಯ ನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಣಾ ಸೇವೆ ಹಾಗೂ ರಾಷ್ಟ್ರಭಕ್ತಿ ಮೂಡಿಸುವ ಚಟುವಟಿಕೆಗಳು ನಿರಂತರವಾಗಿ ಸಾಗುತ್ತಾ ಬಂದಿವೆ. ಇದನ್ನು ಹತ್ತಿಕ್ಕಲು ಅಂದಿನಿಂದಲೂ ಇಂತಹ ಹಲವು ಪ್ರಯತ್ನಗಳು ನಡೆಯುತ್ತಲೇ ಇವೆ. ದೇಶದ ಕೋಟ್ಯಂತರ ಜನರ ಬೆಂಬಲ ಹಾಗೂ ಆಶೀರ್ವಾದ ಪಡೆದಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ ಬೃಹದಾಕಾರವಾಗಿ ಬೆಳೆಯುತ್ತಲೇ ಇದೆ ಎಂದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ‘ಎರಡು-ಮೂರು ರಾಜ್ಯಗಳಲ್ಲಿ ಅಧಿಕಾರ ಇಟ್ಟುಕೊಂಡು ಆರ್‌ಎಸ್‌ಎಸ್ ನಿಷೇಧಿಸಲು ಕಾಂಗ್ರೆಸ್ ಮುಂದಾಗಿದೆ. ಇದು ಮೂರ್ಖತನದ ಕೆಲಸ. 1948ರಲ್ಲಿ ನಿಷೇಧಿಸಿದಾಗ ಏನಾಯಿತು? ತುರ್ತು ಪರಿಸ್ಥಿತಿಯಲ್ಲಿ ಬಿಜೆಪಿ ನಾಯಕರನ್ನು ಬಂಧಿಸಿದ್ದು ಫಲಕೊಟ್ಟಿತಾ’ ಎಂದು ಪ್ರಶ್ನಿಸಿದರು.

‘ನೆಹರೂ, ಇಂದಿರಾ ಗಾಂಧಿ ಅವರಿಗೇ ಹೆದರದ ಆರ್‌ಎಸ್‌ಎಸ್, ಮಲ್ಲಿಕಾರ್ಜುನ ಖರ್ಗೆ ಹೆಸರಿನಲ್ಲಿ ಬದುಕುವ ಪ್ರಿಯಾಂಕ್, ಕುರ್ಚಿಗಾಗಿ ದಿನನಿತ್ಯವೂ ಜಗಳಾಡುವ ಸಿದ್ದರಾಮಯ್ಯ ಅವರಿಗೆ ಹೆದರುತ್ತದೆಯೇ? ಆರ್‌ಎಸ್‌ಎಸ್ ಒಂದು ಹೆಮ್ಮರ. ಇಂಥ ಸರ್ಕಾರಗಳನ್ನು ದೇಶದಲ್ಲಿ ಬಹಳಷ್ಟು ನೋಡಿದೆ’ ಎಂದರು.

ಪ್ರಿಯಾಂಕ್ ಸಿ.ಎಂ ಮಾಡಲು ಸಿದ್ದರಾಮಯ್ಯ ತಂತ್ರ: ಅಶೋಕ

ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಉತ್ತರಾಧಿಕಾರಿ ಎಂದು ಬಿಂಬಿಸಲು ಸಿದ್ದರಾಮಯ್ಯ ಹೊಸ ನಾಟಕ ಆಡಿಸುತ್ತಿರಬಹುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಆರ್‌ಎಸ್‌ಎಸ್ ವಿರುದ್ಧ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದ ಪ್ರಿಯಾಂಕ್, ನಿತ್ಯವೂ ನಿಂದನೆಯ ಹೇಳಿಕೆಗಳನ್ನು ನೀಡುತ್ತಿರುವುದನ್ನು ಗಮನಿಸಿದರೆ ಕಾಂಗ್ರೆಸ್ ಕ್ರಾಂತಿಯ ಪೈಪೋಟಿಯಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಹಿಂದಿಕ್ಕಿ ತಾವೇ ಮುಖ್ಯಮಂತ್ರಿ ಹುದ್ದೆಗೆ ಏರುವ ಕನಸು ಕಾಣುತ್ತಿರುವಂತಿದೆ. ಅತ್ತ ಶಿವಕುಮಾರ್ ಆರ್‌ಎಸ್‌ಎಸ್ ಗೀತೆ ಹಾಡಿ, ಸಂಸ್ಕೃತ ಶ್ಲೋಕ ಹೇಳುತ್ತಾ, ಈಶ ಫೌಂಡೇಷನ್ ಕಾರ್ಯಕ್ರಮ, ಕುಂಭಮೇಳದಲ್ಲಿ ಭಾಗವಹಿಸುತ್ತಾ ಕಾಂಗ್ರೆಸ್ ಹೈಕಮಾಂಡ್‌ಗೆ ಮುಜುಗರ ಉಂಟು ಮಾಡುತ್ತಿದ್ದಾರೆ. ಅದನ್ನೇ ನೆಪವಾಗಿಟ್ಟುಕೊಂಡು ಖರ್ಗೆ ಅವರನ್ನು ಉತ್ತರಾಧಿಕಾರಿ ಎಂದು ಬಿಂಬಿಸಲು ಸಿದ್ದರಾಮಯ್ಯ ತಂತ್ರಗಾರಿಕೆ ರೂಪಿಸಿದ್ದಾರೆ ಎಂದರು.

‘ಆರ್‌ಎಸ್‌ಎಸ್‌ನವರು ಖರ್ಗೆ ಮನೆಗೂ ಬರಬಹುದು’

ಕಲಬುರಗಿ: ‘ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ನಡೆಸುವ ಚಟುವಟಿಕೆಗಳಿಗೂ ನಿಷೇಧ ಹೇರಬೇಕು ಎಂದು ಪತ್ರ ಬರೆದ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಫೋನ್ ಕರೆಗಳು ಬಂದಿರಬಹುದು. ಇದೇ ರೀತಿ ಮಾತು ಮುಂದುವರಿಸಿದರೆ ಆರ್‌ಎಸ್‌ಎಸ್ ಕಾರ್ಯಕರ್ತರು ಅವರ ಮನೆಗೂ ಬರಬಹುದು. ಎಚ್ಚರಿಕೆಯಿಂದ ಇದ್ದು, ಆರ್‌ಎಸ್‌ಎಸ್‌ಗೆ ಕ್ಷಮೆ ಕೇಳಬೇಕು’ ಎಂದು ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಆರ್‌ಎಸ್‌ಎಸ್ ಒಂದು ದೇಶ ಭಕ್ತಿಯ ಕಟ್ಟರ್ ಸಂಘಟನೆ. ನಿಷೇಧ ಮಾಡುವ ನಿರ್ಧಾರ ಕೈಗೊಂಡರೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕೆಡುವ ಪರಿಸ್ಥಿತಿ ಬರಬಹುದು’ ಎಂದು ಹೇಳಿದರು.

ಸರ್ಕಾರಿ ನೌಕರರಿಗೆ ಆರ್‌ಎಸ್‌ಎಸ್ ನಿರ್ಬಂಧ: ಪತ್ರ

ಬೆಂಗಳೂರು: ‘ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಪಾಲ್ಗೊಳ್ಳುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು’ ಎಂದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಚಿವ ಪ್ರಿಯಾಂಕ್ ಖರ್ಗೆ ಮತ್ತೊಂದು ಪತ್ರ ಬರೆದಿದ್ದಾರೆ.

‘ಕರ್ನಾಟಕ ನಾಗರಿಕ ಸೇವಾ ನಿಯಮಗಳು– 2021ರ ನಿಯಮ 5(1) ಪ್ರಕಾರ, ಯಾರೇ ಸರ್ಕಾರಿ ನೌಕರ, ರಾಜಕಾರಣದಲ್ಲಿ ಭಾಗವಹಿಸುವಂಥ ಯಾವುದೇ ಸಂಘ ಸಂಸ್ಥೆಯ ಸದಸ್ಯ ಆಗಿರಬಾರದು ಅಥವಾ ಅವುಗಳೊಂದಿಗೆ ಸಂಬಂಧ ಹೊಂದಿರಬಾರದು ಅಥವಾ ಯಾವುದೇ ರಾಜಕೀಯ ಚಳವಳಿ ಅಥವಾ ಚಟುವಟಿಕೆಯಲ್ಲಿ ಭಾಗವಹಿಸಬಾರದು. ಅದರ ಸಹಾಯಾರ್ಥ ವಂತಿಗೆ ನೀಡುವಂತಿಲ್ಲ ಅಥವಾ ಅದಕ್ಕೆ ಯಾವುದೇ ರೀತಿಯ ನೆರವು ನೀಡುವಂತಿಲ್ಲ ಎಂದು ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದೆ’ ಎಂದು ಪತ್ರದಲ್ಲಿ ಪ್ರಿಯಾಂಕ್ ವಿವರಿಸಿದ್ದಾರೆ. ಇದನ್ನು ಉಲ್ಲಂಘಿಸುವ ಅಧಿಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ಸುತ್ತೋಲೆ ಹೊರಡಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕು’ ಎಂದೂ ಅವರು ಮನವಿ ಮಾಡಿದ್ದಾರೆ.

ಚಿಟಿಕೆ ಸುದ್ದಿ

‘ಆರ್‌ಎಸ್‌ಎಸ್ ಪ್ರಭಾವಿತರಾದವರೇ ಗಾಂಧಿ ಕೊಂದರು’

ಮೈಸೂರು: ‘ಆರ್‌ಎಸ್‌ಎಸ್ ಬಿತ್ತುವ ಸಿದ್ಧಾಂತದಿಂದ ಪ್ರಭಾವಕ್ಕೆ ಒಳಗಾದವರೇ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರನ್ನು ಕೊಂದರು’ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ದೂರಿದರು.

ಇಲ್ಲಿ ಪತ್ರಕರ್ತರೊಂದಿಗೆ ಗುರುವಾರ ಮಾತನಾಡಿ, ‘ಆರ್‌ಎಸ್‌ಎಸ್‌ನವರು ಹಿಂದೂ ಸಂಸ್ಕೃತಿಯ ಉತ್ಕೃಷ್ಟ ಮೌಲ್ಯಗಳನ್ನು ತೋರಿಸುತ್ತೇವೆ ಎಂದು ಹೇಳುತ್ತಾರೆ. ಆದರೆ, ಮಾಡುವುದೆಲ್ಲವೂ ಅನಾಚಾರ; ಮನೆ ಮುಂದೆ ಬೃಂದಾವನ ಎನ್ನುವಂತಾಗಿದೆ’ ಎಂದರು.

‘ಪ್ರಿಯಾಂಕ್ ಖರ್ಗೆ ಪತ್ರ ಸರಿಯಾಗಿದೆ. ಉದ್ಯಾನಗಳಲ್ಲಿ ಪಥಸಂಚಲನಕ್ಕೆ ಅವಕಾಶ ಸಾಧ್ಯವೇ? ಇಡೀ ದೇಶಕ್ಕೆ ಒಂದು ಕಾನೂನು; ಆರ್‌ಎಸ್‌ಎಸ್‌ಗೆ ಒಂದು ಕಾನೂನು ಏಕೆ?’ ಎಂದು ಕೇಳಿದರು.

‘ಅದು ಸಾಂಸ್ಕೃತಿಕ ಸಂಸ್ಥೆಯಲ್ಲ, ರಾಜಕೀಯ ಸಂಸ್ಥೆ. ಅದು ನಿಷೇಧಗೊಂಡಿದ್ದ ಬಗ್ಗೆ ಇತಿಹಾಸವೇ ಇದೆ. ನಿರ್ದಿಷ್ಟ ಸಿದ್ಧಾಂತವನ್ನು ಇಟ್ಟುಕೊಂಡು ಅದನ್ನು ಎಲ್ಲೆಡೆ ಹರಡಲು ಯತ್ನಿಸುತ್ತಿದೆ. ಶಾಲಾ–ಕಾಲೇಜುಗಳಲ್ಲಿ ಕಾರ್ಯಸೂಚಿ ಇಟ್ಟುಕೊಂಡು ಕೆಲಸ ಮಾಡಲು ಅವಕಾಶ ಕೊಡಬಾರದು’ ಎಂದರು.

ಬೆಂಗಳೂರು–ಹುಬ್ಬಳ್ಳಿ ಸೂಪರ್‌ಫಾಸ್ಟ್ ರೈಲು: ಕೇಂದ್ರ ಒಪ್ಪಿಗೆ

ನವದೆಹಲಿ: ಬೆಂಗಳೂರು ಮತ್ತು ಹುಬ್ಬಳ್ಳಿ ಮಧ್ಯೆ ನಿತ್ಯ ಸೂಪರ್ ಫಾಸ್ಟ್ ವಿಶೇಷ ರೈಲು ಸಂಚಾರದ ರೈಲ್ವೆ ಸಚಿವಾಲಯ ಒಪ್ಪಿಗೆ ನೀಡಿದೆ.

ಈ ಹುಬ್ಬಳ್ಳಿ, ಕರ್ಜಗಿ, ಹಾವೇರಿ, ರಾಣೆಬೆನ್ನೂರು, ದಾವಣಗೆರೆ, ಬಿರೂರು, ಅರಸಿಕೆರೆ, ಸಂಪಿಗೆ ರೋಡ್, ತುಮಕೂರು, ಯಶವಂತಪುರ ಮತ್ತು ಕೆಎಸ್‌ಆರ್ ಬೆಂಗಳೂರು ಮಧ್ಯೆ ಡಿಸೆಂಬರ್ 8ರಿಂದ ಸಂಚರಿಸಲಿದೆ. ರೈಲು ಸಂಚಾರ ಆರಂಭಿಸುವಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದರು.

ಮೈಸೂರು–ಜೈಪುರ: 2 ಟ್ರಿಪ್ ವಿಶೇಷ ರೈಲು ಸಂಚಾರ

ಮೈಸೂರು: ದೀಪಾವಳಿ ಹಬ್ಬದ ಪ್ರಯುಕ್ತ ಹೆಚ್ಚುವರಿ ಪ್ರಯಾಣಿಕರ ದಟ್ಟಣೆ ನಿಭಾಯಿಸಲು, ರೈಲ್ವೆ ಮಂಡಳಿಯು ಮೈಸೂರು- ಜೈಪುರ ನಡುವೆ ತಲಾ ಎರಡು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಕಾರ್ಯಾಚರಣೆಗೆ ಅನುಮೋದನೆ ನೀಡಿದೆ.

ರೈಲು ಸಂಖ್ಯೆ 06231 ಮೈಸೂರು–ಜೈಪುರ ಎಕ್ಸ್‌ಪ್ರೆಸ್ ವಿಶೇಷ ರೈಲು ಅ. 18 ಮತ್ತು 5ರಂದು ಮೈಸೂರಿನಿಂದ ರಾತ್ರಿ 11.55ಕ್ಕೆ ಹೊರಡಲಿದೆ ಸೋಮವಾರ ಸಂಜೆ 6.40ಕ್ಕೆ ಜೈಪುರವನ್ನು ತಲುಪಲಿದೆ.

ಅಲ್ಲಿಂದ ರೈಲು ಸಂಖ್ಯೆ 06232 ಜೈಪುರ–ಮೈಸೂರು ಎಕ್ಸ್‌ಪ್ರೆಸ್ ವಿಶೇಷ ರೈಲು ಅ. 21 ಮತ್ತು 28ರಂದು ಜೈಪುರದಿಂದ ಮುಂಜಾನೆ 4ಕ್ಕೆ ಹೊರಟು, ಗುರುವಾರ ಮುಂಜಾನೆ 3.30ಕ್ಕೆ ಮೈಸೂರಿಗೆ ಆಗಮಿಸಲಿದೆ.

ಜೈಪುರದ ಕಡೆಗೆ ಹೋಗುವಾಗ ರೈಲು ಸಂಖ್ಯೆ 06231 ಸಾಬರಮತಿ ಬಿಜಿ ನಿಲುಗಡೆ ಇರುವುದಿಲ್ಲ ಹಾಗೂ ಮೈಸೂರಿನ ಕಡೆಗೆ ಹಿಂದಿರುಗುವ ಪ್ರಯಾಣದಲ್ಲಿ ರೈಲು ಸಂಖ್ಯೆ 06232 ಅಹಮದಾಬಾದ್ ನಿಲ್ದಾಣದಲ್ಲಿ ನಿಲುಗಡೆ ಇರುವುದಿಲ್ಲ.

ಈ ವಿಶೇಷ ರೈಲು ಒಟ್ಟು 18 ಬೋಗಿ ಒಳಗೊಂಡಿದೆ. ಅವುಗಳಲ್ಲಿ 2 ಎಸಿ ಟು-ಟೈರ್, 12 ಎಸಿ ತ್ರಿ-ಟೈರ್, 2 ಸ್ಲೀಪರ್ ಕ್ಲಾಸ್ ಮತ್ತು 2 ಸೆಕೆಂಡ್ ಕ್ಲಾಸ್ ಲಗೇಜ್-ಕಮ್-ಬ್ರೇಕ್ ವ್ಯಾನ್‌ಗಳು ಇರಲಿವೆ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಪ್ರಕಟಣೆ ತಿಳಿಸಿದೆ.


ಸುದ್ದಿ 2 ನಿಮಿಷ

ಆಲಿಯಾ ಭಟ್‌ಗೆ ‘ಮೈಸೂರ ಗಣಪ’

ಮೈಸೂರು: ಬಾಲಿವುಡ್ ತಾರಾ ದಂಪತಿ ಆಲಿಯಾ ಭಟ್ ಹಾಗೂ ರಣಬೀರ್ ಕಪೂರ್ ಅವರ ನೂತನ ಮನೆಗೆ ಮೈಸೂರಿನಲ್ಲಿ ಗಣೇಶನ ಮೂರ್ತಿ ಸಿದ್ಧಗೊಂಡಿದ್ದು, ಶಿಲ್ಪಿ ಅರುಣ್ ಯೋಗಿರಾಜ್ ಮೂರ್ತಿಯ ಕೆತ್ತನೆ ಮಾಡಿದ್ದಾರೆ.

‘ಹೊಸ ಮನೆಯ ಪ್ರವೇಶ ದ್ವಾರದಲ್ಲಿ ಸ್ಥಾಪಿಸಲು ಆಲಿಯಾ ಭಟ್ ಗಣೇಶ ಮೂರ್ತಿಯನ್ನು ಕೆತ್ತಿಕೊಡುವಂತೆ ಕೇಳಿದ್ದರು. ಹೊಯ್ಸಳ ಹಾಗೂ ಮೈಸೂರು ಶೈಲಿಯಲ್ಲಿ ವಿಗ್ರಹವನ್ನು ಕೆತ್ತಲಾಗಿದೆ. ಮೂರು ಅಡಿಯ ಪೀಠವಿದ್ದು, 6 ಅಡಿ ಎತ್ತರವನ್ನು ಹೊಂದಿದೆ’ ಎಂದು ಶಿಲ್ಪಿ ಅರುಣ್ ಯೋಗಿರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅ.17ರಂದು ಆಲಿಯಾ ಭಟ್ ಕುಟುಂಬದವರು ಪೂಜೆ ಸಲ್ಲಿಸಲಿದ್ದಾರೆ. ಏಕಶಿಲಾ ಮೂರ್ತಿಯಾಗಿದ್ದು, 6 ತಿಂಗಳಿಂದ ನಿರಂತರವಾಗಿ ಕೆತ್ತನೆ ಕಾರ್ಯ ನಡೆದಿತ್ತು’ ಎಂದರು.



‘ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಮೂರ್ತಿಯ ಕೆತ್ತನೆ ಗಮನಿಸಿ ಅದೇ ಮಾದರಿಯ ಶಿಲೆಯಲ್ಲಿ ಗಣೇಶ ಮೂರ್ತಿ ಮಾಡಿಕೊಡುವಂತೆ ಕೇಳಿದ್ದರು. ಮುಂಬೈಗೆ ಕರೆಸಿಕೊಂಡು ಚರ್ಚಿಸಿದ್ದರು. ಮೂರ್ತಿ ಸಿದ್ಧವಾಗಿದ್ದು, ಅದನ್ನು ಸಾಗಿಸಲಾಗುತ್ತಿದೆ’ ಎಂದರು.

ದಲಿತ ಯುವಕನ ಮನೆಗೆ ಬೆಂಕಿ; ಜೀವ ಉಳಿಸಿದ ಚಾರ್ಜರ್

ಯಲಬುರ್ಗಾ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಕೋನಸಾಗರ ಗ್ರಾಮದಲ್ಲಿ ದಲಿತ ಯುವಕನ ಮನೆಗೆ ಬೆಂಕಿ ಹಚ್ಚಿದ್ದಾರೆ ಎಂಬ ಆರೋಪದ ಮೇಲೆ ಎಂಟು ಜನರ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.

18 ವರ್ಷದ ಮಣಿಕಂಠಯ್ಯ ಹರಿಜನ ಅವರು ಸ್ವಂತ ಮನೆ ಕಾಮಗಾರಿ ನಡೆಯುತ್ತಿದ್ದ ಕಾರಣ ಬಾಡಿಗೆ ಮನೆ ಪಡೆದು ವಾಸವಾಗಿದ್ದರು. ಹೊಲಕ್ಕೆ ಹೊಂದಿಕೊಂಡು ಮನೆಯಿದ್ದು ಮುಂಭಾಗದಲ್ಲಿ ಚಪ್ಪರವಿದೆ. ಗುರುವಾರ ಬೆಳಗಿನ ಜಾವ ಒಂದು ಗಂಟೆ ಸುಮಾರಿಗೆ ಮೊಬೈಲ್‌ಗೆ ಚಾರ್ಜ್ ಹಾಕಲು ಎದ್ದಿದ್ದಾರೆ. ಆಗ ಬೆಂಕಿ ಹೊತ್ತಿ ಉರಿಯುವುದನ್ನು ಕಂಡು ಕೂಗಾಡಿದಾಗ, ಪಕ್ಕದ ಮನೆಯಲ್ಲಿದ್ದ ಅವರ ಮಾವ ಮೌನೇಶ ಬಂದು ರಕ್ಷಿಸಿದ್ದಾರೆ.

‘ಕೊನಸಾಗರ ಗ್ರಾಮದ ಹನುಮಂತಪ್ಪ ನಾಗಪ್ಪ ಜೂಲಕಟ್ಟಿ, ಭೀಮಪ್ಪ ಹನಮಪ್ಪ ಜೂಲಕಟ್ಟಿ, ನಿಂಗಪ್ಪ ಹನಮಪ್ಪ ಜೂಲಕಟ್ಟಿ, ದೊಡ್ಡಬಸಪ್ಪ ಲಕ್ಕಲಕಟ್ಟಿ, ಮಲ್ಲಪ್ಪ ರಾಮಪ್ಪ ಭಜಂತ್ರಿ, ಚಿಕ್ಕಬನ್ನಿಗೋಳದ ಪ್ರವೀಣ ಪರಸಪ್ಪ ಹಟ್ಟಿ, ಹೊನ್ನಕೇರಪ್ಪ ಬಸಪ್ಪ ಹಟ್ಟಿ, ಬಾಳಪ್ಪ ಪರಸಪ್ಪ ಹಟ್ಟಿ ಅವರು ಈ ಕೃತ್ಯ ಎಸಗಿರುವ ಶಂಕೆಯಿದೆ’ ಎಂದು ಮಣಿಕಂಠ ದೂರಿನಲ್ಲಿ ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ‘ಬೆಂಕಿ ಹಚ್ಚಿದವರು ಯಾರು ಎನ್ನುವುದು ನಿಖರವಾಗಿ ಗೊತ್ತಾಗಿಲ್ಲ. ಕೆಲವರ ಮೇಲೆ ಶಂಕೆ ವ್ಯಕ್ತಪಡಿಸಿ ಮಣಿಕಂಠ ದೂರು ನೀಡಿದ್ದಾರೆ. ಸವರ್ಣೀಯರ ಪಾತ್ರವಿದೆ ಎನ್ನುವ ಬಗ್ಗೆ ದೂರಿನಲ್ಲಿ ಉಲ್ಲೇಖವಿಲ್ಲ’ ಎಂದು ತಿಳಿಸಿದರು.

ಆರ್‌ಎಸ್‌ಎಸ್ ಅಭಿಯಾನ

ಪ್ರಜಾವಾಣಿ ಚಿತ್ರ:



ಮೈಸೂರಿನ ಚೆಲುವಾಂಬ ಉದ್ಯಾನದಲ್ಲಿ ಆರ್‌ಎಸ್‌ಎಸ್ ಅಭಿಮಾನಿಗಳು ಹಾಗೂ ಹಿಂದುತ್ವದ ಹೋರಾಟಗಾರರು ಗುರುವಾರ ಬೆಳಿಗ್ಗೆ ‘ಐ ಲವ್ ಆರ್‌ಎಸ್‌ಎಸ್’ ಅಭಿಯಾನ ನಡೆಸಿದರು

ಅಪಹೃತ ವರ್ತಕನ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಹೊಳಲು ಗ್ರಾಮದ ಹೊರವಲಯದಲ್ಲಿ ಅಕ್ಟೋಬರ್ 10ರಂದು ಅಪಹರಣವಾಗಿದ್ದ ವರ್ತಕ ಮಂಜುನಾಥ ಶೇಜವಾಡಕರ್ (58) ಅವರ ಶವ ಗುರುವಾರ ಹರವಿ ಬಸಾಪುರ ಬಳಿ ತುಂಗಭದ್ರಾ ನದಿ ತೀರದಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

ಪ್ರಕರಣದ ಆರೋಪಿಗಳಾದ ಹೊಳಲು ಗ್ರಾಮದ ಮಲ್ಲಿಕಾರ್ಜುನ ಉಜ್ಜಮ್ಮನವರ (27) ಮತ್ತು ಯೋಗೇಶ ಅಂಗಡಿ (25) ಎಂಬುವರನ್ನು ಮಹಾರಾಷ್ಟ್ರದ ಪುಣೆಯಲ್ಲಿ ವಶಕ್ಕೆ ಪಡೆದ ಪೊಲೀಸರು, ಬುಧವಾರ ರಾತ್ರಿ ಕರೆತಂದು ವಿಚಾರಣೆಗೆ ಒಳಪಡಿಸಿದರು. ಅವರು ನೀಡಿದ ಮಾಹಿತಿ ಮೇರೆಗೆ ಹುಡುಕಾಡಿದಾಗ, ಶವ ದೊರೆತಿದೆ.‘ಮಂಜುನಾಥ ಶೇಜವಾಡಕರ್ ಅವರ ಕೈ ಕಾಲು ಕಟ್ಟಿ, ಬಾಯಿಗೆ ಪ್ಲಾಸ್ಟರ್ ಹಾಕಿ ಕಾರಿನ ಡಿಕ್ಕಿಯಲ್ಲಿ ಇರಿಸಿ ಅಪಹರಣಕಾರರು ಇಡೀ ದಿನ ರಾಣೇಬೆನ್ನೂರು ಸುತ್ತಮುತ್ತ ಸುತ್ತಾಡಿಸಿದ್ದರು. ಇದರಿಂದ ಅವರು ಉಸಿರುಗಟ್ಟಿ ಮೃತಪಟ್ಟಿದ್ದರು. ನಂತರ ಶವವನ್ನು ಶುಕ್ರವಾರ ರಾತ್ರಿ ಹರವಿ ಸೇತುವೆ ಮೇಲಿನಿಂದ ತುಂಗಭದ್ರಾ ನದಿಗೆ ಎಸೆದು ಪರಾರಿಯಾಗಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ವಿವರ: ಅಕ್ಟೋಬರ್ 10ರಂದು ಬೆಳಿಗ್ಗೆ ಮೈಲಾರ ರಸ್ತೆಯಲ್ಲಿ ವಾಯುವಿಹಾರಕ್ಕೆ ತೆರಳಿದ್ದ ಮಂಜುನಾಥ ಶೇಜವಾಡಕರ್ ಅವರನ್ನು ಆರೋಪಿಗಳು ಅಪಹರಿಸಿದ್ದರು. ದಾವಣಗೆರೆಯಲ್ಲಿ ವೈದ್ಯೆಯಾಗಿರುವ ಮಂಜುನಾಥ ಅವರ ಅಕ್ಕ ಡಾ.ಮಂಜುಳಾ ಶೇಜವಾಡಕರ್ ಅವರಿಗೆ ವಾಟ್ಸ್‌ಆ್ಯಪ್ ಕರೆ ಮಾಡಿ ₹5 ಕೋಟಿಗೆ ಬೇಡಿಕೆ ಇರಿಸಿದ್ದರು.

‘ಸಂಘ’ ಚಟುವಟಿಕೆ ನಿರ್ಬಂಧ

ಒಂದನೇ ಪುಟದಿಂದ...

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು, ‘ನಾವು ತರಲು ಬಯಸಿರುವ ನಿಯಮಗಳು ಸಾರ್ವಜನಿಕ ಸ್ಥಳಗಳು, ಸರ್ಕಾರಿ ಶಾಲೆಗಳು, ಕಾಲೇಜುಗಳು, ಸರ್ಕಾರಿ ಸಂಸ್ಥೆಗಳ ಆವರಣಗಳು ಮತ್ತು ಅನುದಾನಿತ ಸಂಸ್ಥೆಗಳಿಗೆ ಸಂಬಂಧಿಸಿವೆ. ಗೃಹ ಇಲಾಖೆ, ಕಾನೂನು ಇಲಾಖೆ ಮತ್ತು ಶಿಕ್ಷಣ ಇಲಾಖೆ ಹೊರಡಿಸಿದ ಹಿಂದಿನ ಆದೇಶಗಳನ್ನು ಒಟ್ಟುಗೂಡಿಸಿ ಹೊಸ ನಿಯಮಗಳನ್ನು ರೂಪಿಸಲಿದ್ದೇವೆ. ಮುಂದಿನ ಎರಡು– ಮೂರು ದಿನಗಳಲ್ಲಿ, ಹೊಸ ನಿಯಮಗಳನ್ನು ಪ್ರಕಟಿಸಲಾಗುವುದು’ ಎಂದು ಹೇಳಿದರು.

‘ಪ್ರಿಯಾಂಕ್ ಖರ್ಗೆ ಬರೆದ ಪತ್ರದ ಆಧಾರದಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆಯೇ’ ಎಂಬ ಪ್ರಶ್ನೆಗೆ, ‘ಅದೂ ಸೇರಿ ಸಾಕಷ್ಟು ದೂರುಗಳು ಬಂದಿವೆ. ಮಾಧ್ಯಮಗಳಲ್ಲೂ ಟೀಕೆಗಳು ಬಂದಿವೆ.

ಈ ಬಗ್ಗೆ ಕಾನೂನಿನ ಸ್ಪಷ್ಟತೆ ಇರಲಿಲ್ಲ. ಆದ್ದರಿಂದ ವಿವರವಾಗಿ ನಿಯಮ ರೂಪಿಸಲು ತೀರ್ಮಾನಿಸಲಾಗಿದೆ. ಸರ್ಕಾರ ಅನುಮತಿ ಇಲ್ಲದೇ ಯಾವುದೇ ಚಟುವಟಿಕೆ ನಡೆಸುವುದನ್ನು ಅತಿಕ್ರಮ ಪ್ರವೇಶ ಎಂದು ಪರಿಗಣಿಸಲಾಗುತ್ತದೆ’ ಎಂದು ಹೇಳಿದರು.

‘ತಮಿಳುನಾಡು ಮಾದರಿ ಅನುಸರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಆ ಮಾದರಿಯನ್ನು ಅನುಸರಿಸಲಾಗಿದೆಯೇ’ ಎಂಬ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಲಿಲ್ಲ.

ಹೀರೊ ಮಾಡುವುದು ಬೇಡ’: ಆರ್‌ಎಸ್‌ಎಸ್ ಚಟುವಟಿಕೆಯನ್ನು ನಿಷೇಧಿಸಲು ಕಠಿಣ ಕಾನೂನನ್ನೇ ರೂಪಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇರಿದ ಒತ್ತಡಕ್ಕೆ ಸಂಪುಟ ಸಭೆಯಲ್ಲಿ ಬಹುಪಾಲು ಸಚಿವರಿಂದ ಬೆಂಬಲ ಸಿಗಲಿಲ್ಲ ಎಂದು ಮೂಲಗಳು ಹೇಳಿವೆ.

‘ಆ ರೀತಿ ಕಾನೂನು ಮಾಡಲು ಸಾಧ್ಯವಿಲ್ಲ. ಇರುವ ನಿಯಮಗಳನ್ನೇ ಪರಿಷ್ಕರಿಸಿ ಸರ್ಕಾರಿ ಆದೇಶ ಹೊರಡಿಸೋಣ. ಈ ಬಗ್ಗೆ ನಿಮ್ಮ ತಂದೆಯವರ ಬಳಿ ಒಮ್ಮೆ ಚರ್ಚಿಸಿ. ಅನಗತ್ಯವಾಗಿ ಆರ್‌ಎಸ್‌ಎಸ್ ಅನ್ನು ಹೀರೊ ಮಾಡುವುದು ಬೇಡ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಹೇಳಿದರೆಂದು ಮೂಲಗಳು ತಿಳಿಸಿವೆ.

‘ಭಾಗವಹಿಸಿದರೆ ಅಮಾನತು’

ಒಂದನೇ ಪುಟದಿಂದ...

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸರ್ಕಾರಿ ನೌಕರರು ಕೆಲಸ ಮಾಡುತ್ತಾರೆ ಅಂದುಕೊಂಡಿದ್ದರೆ, ಅವರು ನಮಗಿಂತಲೂ ಹೆಚ್ಚು ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸರ್ಕಾರಿ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಷಣ ಮಾಡುವುದಲ್ಲದೆ, ಬೇರೆ ರೀತಿಯಲ್ಲೂ ಪಾಲ್ಗೊಂಡಿದ್ದಾರೆ. ಇದರಲ್ಲಿ ನಮ್ಮ ಇಲಾಖೆಯ ಕೆಲವರಿದ್ದಾರೆ’ ಎಂದರು.

‘2013ರಲ್ಲಿ ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದಾಗ ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಕಾರ್ಯಕ್ರಮ ನಡೆಸಬಾರದು ಎಂದು ಸುತ್ತೋಲೆ ಹೊರಡಿಸಲಾಗಿತ್ತು’ ಎಂದರು. ಆ ಆದೇಶದ ಪ್ರತಿಯನ್ನು ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿರುವ ಪ್ರಿಯಾಂಕ್, ‘ಈ ದೇಶದ ಸಂವಿಧಾನ, ಕಾನೂನು, ನೀತಿ ನಿಯಮಗಳಿಗೆ ಆರ್‌ಎಸ್‌ಎಸ್ ಸಂಘಟನೆ ಅತೀತವಾಗಿದೆ ಎಂದು ಬಿಜೆಪಿ ಭಾವಿಸಿದೆಯೇ? ಈ ಆದೇಶ ಜಾರಿಯಲ್ಲಿದ್ದರೂ ಆರ್‌ಎಸ್‌ಎಸ್ ಸಂಘಟನೆಯು ಯಾವುದೇ ಅಂಜಿಕೆ ಇಲ್ಲದೆ, ಶಾಲೆಗಳು ಹೆಡಗೇವಾರ್ ಅವರ ವಂಶಸ್ಥರ ಆಸ್ತಿ ಎಂಬಂಥ ಧೋರಣೆಯಲ್ಲಿ ತನ್ನ ಚಟುವಟಿಕೆ ನಡೆಸುತ್ತಿದೆ. ಕೂಗುಮಾರಿಗಳಂತೆ ಕೂಗುತ್ತಿರುವ ಬಿಜೆಪಿಯವರು ತಮ್ಮ ಸರ್ಕಾರದ ಆದೇಶವನ್ನು ಒಮ್ಮೆ ಅವಲೋಕಿಸಿ, ನಂತರ ತಾವೇನು ಮಾತಾಡಬೇಕು ಎಂದು ನಿರ್ಧರಿಸಲಿ’ ಎಂದಿದ್ದಾರೆ.

ಕ್ರೀಡೆ, ಯೋಗಕ್ಕೂ ಅನುಮತಿ ಕಡ್ಡಾಯ

ಸರ್ಕಾರಿ ಶಾಲಾ, ಕಾಲೇಜುಗಳ ಆವರಣ ಮತ್ತು ಆಟದ ಮೈದಾನದಲ್ಲಿ ಕಬಡ್ಡಿ, ಕ್ರಿಕೆಟ್ ಮತ್ತು ಇತರ ಕ್ರೀಡೆಗಳು, ಯೋಗಾಭ್ಯಾಸ ಹಾಗೂ ಸಾಂಸ್ಕೃತಿಕ ಚಟುವಟಿಕೆ ನಡೆಸಬೇಕಾದರೂ ಇನ್ನು ಮುಂದೆ ಪೂರ್ವಾನುಮತಿ ಕಡ್ಡಾಯ. ರಾಜ್ಯದಲ್ಲಿ ಹಲವು ಕ್ರೀಡಾ ಸಂಸ್ಥೆಗಳು ಕ್ರೀಡಾ ತರಬೇತಿ ಮತ್ತು ಪಂದ್ಯಗಳನ್ನು ನಡೆಸುವುದಕ್ಕೆ ಮುನ್ನ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಾಗುತ್ತದೆ. ಸಾಂಸ್ಕೃತಿಕ ಸಂಘ– ಸಂಸ್ಥೆಗಳೂ ತಮ್ಮ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಅನುಮತಿ ಪಡೆಯಬೇಕಾಗುತ್ತದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಅನುಮತಿಗೆ ಸಕ್ಷಮ ಪ್ರಾಧಿಕಾರಗಳು

- ಸರ್ಕಾರಿ ಶಾಲಾ– ಕಾಲೇಜುಗಳು, ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಆವರಣ; ಉನ್ನತ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
- ಉದ್ಯಾನಗಳು, ಆಟದ ಮೈದಾನಗಳು, ಇತರೆ ತೆರೆದ ಸ್ಥಳಗಳು; ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
- ಸಾರ್ವಜನಿಕ ರಸ್ತೆಗಳು, ಸರ್ಕಾರದ ಇತರೆ ಆಸ್ತಿ/ ಸ್ಥಳಗಳು; ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರು, ಎಸ್‌ಪಿಗಳು (ಮೇಲೆ ನಮೂದಿಸಿದ ಇಲಾಖೆ, ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡುವ ಸಂದರ್ಭದಲ್ಲಿ ಸಂವಿಧಾನ ಬದ್ಧವಾದ ನಾಗರಿಕರ ಹಕ್ಕುಗಳಿಗೆ ಚ್ಯುತಿ ಉಂಟಾಗದಂತೆ ಎಚ್ಚರಿಕೆ ವಹಿಸಲು ಅನುವಾಗುವಂತೆ ಸೂಕ್ತ ಮತ್ತು ವಿವರವಾದ ಮಾರ್ಗಸೂಚಿಯನ್ನು ಆಯಾ ಇಲಾಖೆಗಳೇ ಹೊರಡಿಸುವುದು.)

250 ಕ್ವಿಂಟಲ್ ಜೋಳ, 2 ಕ್ವಿಂಟಲ್ ಹಾಲಿನ ಪುಡಿ ಪತ್ತೆ

ಯಾದಗಿರಿ: ಗುರುಮಠಕಲ್‌ನ ಅಕ್ಕಿ ಮಿಲ್‌ಗಳಲ್ಲಿ ₹1.21 ಕೋಟಿ ಮೌಲ್ಯದ 3,985 ಕ್ವಿಂಟಲ್ ಪಡಿತರ ಅಕ್ಕಿ ಅಕ್ರಮ ದಾಸ್ತಾನು ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಮಾರು 250 ಕ್ವಿಂಟಲ್ ಪಡಿತರ ಜೋಳ ಹಾಗೂ ಕ್ಷೀರ ಭಾಗ್ಯದ 2 ಕ್ವಿಂಟಲ್‌ನಷ್ಟು ಹಾಲಿನ ಪುಡಿ ಪತ್ತೆಯಾಗಿದೆ.

ಪಡಿತರ ಅಕ್ಕಿ ಅಕ್ರಮ ದಾಸ್ತಾನು ಪತ್ತೆಯಾಗಿದ್ದ ಶ್ರೀಲಕ್ಷ್ಮಿ ವೆಂಕಟೇಶ್ವರ ರೈಸ್ ಮಿಲ್ ಹಾಗೂ ಶ್ರೀಲಕ್ಷ್ಮಿ ಬಾಲಾಜಿ ರೈಸ್ ಮಿಲ್‌ಗಳ ಮುಂಭಾಗದ ಲಕ್ಷ್ಮಿ ತಿಮ್ಮಪ್ಪ ಕಾಟನ್ ಮತ್ತು ಜಿನ್ನಿಂಗ್ ಮಿಲ್‌ನ ಗೋದಾಮಿನಲ್ಲೂ ಪಡಿತರ ಅಕ್ಕಿ ಅಕ್ರಮವಾಗಿ ದಾಸ್ತಾನು ಮಾಡಿದ್ದನ್ನು ಸಿಐಡಿ ಅಧಿಕಾರಿಗಳು ಪತ್ತೆ ಮಾಡಿದ್ದರು. ಗೋದಾಮು ಪರಿಶೀಲನೆ ವೇಳೆ ಆಹಾರ ಇಲಾಖೆಯ ಅಧಿಕಾರಿಗಳಿಗೆ ಜೋಳ ಮತ್ತು ಕ್ಷೀರ ಭಾಗ್ಯದ ಹಾಲಿನ ಪುಡಿ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಗೆಜೆಟೆಡ್ ಪ್ರೊಬೆಷನರಿ ಹುದ್ದೆ: ಕನ್ನಡ ವಿಷಯದಲ್ಲಿ ತೇರ್ಗಡೆಯಾಗಲೇಬೇಕು

ಅಂಗನವಾಡಿ ಕಾರ್ಯಕರ್ತೆಯರಿಗೆ ಎರಡು ಸೀರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ತಲಾ ಎರಡು ಸೀರೆಗಳನ್ನು ವಿತರಿಸಲು ತೀರ್ಮಾನಿಸಲಾಗಿದೆ. ಪ್ರತಿ ಸೀರೆಗೆ ₹500 ದರದಂತೆ ಒಟ್ಟು 2,79,688 ಸೀರೆಗಳನ್ನು ಖರೀದಿಸಲಾಗುವುದು ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಅವರು, ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ₹13.98 ಕೋಟಿ. ಕೇಂದ್ರ ಸರ್ಕಾರ ₹7.91 ಕೋಟಿ ಮತ್ತು ರಾಜ್ಯ ಸರ್ಕಾರ ₹6.07 ಕೋಟಿ ಭರಿಸಲಿವೆ ಎಂದರು.

2025–26ನೇ ಸಾಲಿನಲ್ಲಿ ರಾಜ್ಯದ 69,922 ಅಂಗನವಾಡಿ ಕೇಂದ್ರಗಳಿಗೆ ತಲಾ ₹1,500 ವೆಚ್ಚದಲ್ಲಿ ಔಷಧ ಕಿಟ್‌ಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ. ಇದರ ಒಟ್ಟು ವೆಚ್ಚ ₹10.49 ಕೋಟಿ, ಕೇಂದ್ರದ ಪಾಲು ₹5.93 ಕೋಟಿ, ರಾಜ್ಯದ ಪಾಲು ₹4.56 ಕೋಟಿ ಎಂದು ಹೇಳಿದರು.

ಪ್ರಸ್ತಾವ ತಿರಸ್ಕಾರ: ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ನೇಮಕಗೊಳ್ಳುವ ಅಭ್ಯರ್ಥಿಗಳು ನೇಮಕಾತಿ ಪರೀಕ್ಷೆ ಹಂತದಲ್ಲಿಯೇ 150 ಅಂಕಗಳ ಕನ್ನಡ ಭಾಷಾ ಪರೀಕ್ಷೆಯ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರವೇ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗೆ ನೇಮಕಗೊಳ್ಳಲು ಅರ್ಹತೆ ಪಡೆಯುತ್ತಾರೆ. ನೇಮಕಾತಿ ನಂತರ ಅವರಿಗೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಆಗುವುದನ್ನು ಕಡ್ಡಾಯಗೊಳಿಸಿರುವುದನ್ನು ತೆಗೆದುಹಾಕಬೇಕೆಂಬ ಪ್ರಸ್ತಾವವನ್ನು ಸಂಪುಟ ತಿರಸ್ಕರಿಸಿದೆ.

ಪ್ರಮುಖ ತೀರ್ಮಾನಗಳು

- ವಿಜಯಪುರ ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ 100 ಹಾಸಿಗೆಯ ಸೂಪರ್ ಸ್ಪೆಷಾಲಿಟಿ ಆರಂಭಿಸಲು ಅವಶ್ಯವಿರುವ ಉಪಕರಣಗಳನ್ನು ₹54.92 ಕೋಟಿ ವೆಚ್ಚದಲ್ಲಿ ಖರೀದಿಗೆ ಒಪ್ಪಿಗೆ
- ಮೈಸೂರು ಮತ್ತು ಕಲಬುರಗಿ ಜಿಲ್ಲೆಯಲ್ಲಿ ನಿಮ್ಹಾನ್ಸ್ ಮಾದರಿಯ ಸಂಸ್ಥೆಗಳನ್ನು ತಲಾ ₹100 ಕೋಟಿ ಅನುದಾನದಲ್ಲಿ ಸ್ಥಾಪಿಸಲು ಒಪ್ಪಿಗೆ
- ಬೆಂಗಳೂರಿನ ಸಂಜಯಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ನೂತನ ವಾಸ್ಕ್ಯುಲರ್ ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಹಾಗೂ ಮುಖ್ಯ ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ₹16.09 ಕೋಟಿ ವೆಚ್ಚದಲ್ಲಿ ಖರೀದಿಗೆ ಅನುಮತಿ
- ವೃಷಭಾವತಿ ವ್ಯಾಲಿ ಸಂಸ್ಕರಣಾ ಘಟಕದ ಮರು ಬಳಕೆ ನೀರನ್ನು ಗೋಪಾಲಪುರ ಕೆರೆಯಿಂದ (ಯೋಜನೆಯ ಲಿಫ್ಟ್-4) ಎರಡನೇ ಹಂತದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳನ್ನು ತುಂಬಿಸುವ ₹650 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ

ಬೆಳೆ ನಷ್ಟಕ್ಕೆ ಹೆಚ್ಚಿನ ಪರಿಹಾರ

ನೈಋತ್ಯ ಮುಂಗಾರಿನಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ 12.82 ಲಕ್ಷ ಹೆಕ್ಟೇರ್‌ಗಳಷ್ಟು ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿಗೆ ಹೆಚ್ಚಿನ ದರದಲ್ಲಿ ರೈತರಿಗೆ ಪರಿಹಾರ ನೀಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಮಳೆಯಾಶ್ರಿತ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ₹17,000 (2 ಹೆಕ್ಟೇರ್‌ಗೆ ಸೀಮಿತ), ನೀರಾವರಿ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗಳಿಗೆ ₹25,000 (2 ಹೆಕ್ಟೇರ್‌ಗೆ ಸೀಮಿತ), ಬಹುವಾರ್ಷಿಕ ಬೆಳೆಗಳಿಗೆ ₹31,000 (2 ಹೆಕ್ಟೇರ್‌ಗೆ ಸೀಮಿತ) ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಸರ್ಕಾರ ₹1,090 ಕೋಟಿಯನ್ನು ಹೆಚ್ಚುವರಿಯಾಗಿ ಭರಿಸಬೇಕಾಗುತ್ತದೆ ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಮಾನದಂಡ ಪ್ರಕಾರ ಮಳೆಯಾಶ್ರಿತ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗಳಿಗೆ ₹8,500, ನೀರಾವರಿ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ₹17,000 ಮತ್ತು ಬಹುವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ₹22,500 ನೀಡಲಾಗುತ್ತಿತ್ತು.

ಒಪ್ಪಿಗೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ಸೂರ್ಯನಗರ–4 ನೇ ಹಂತದ ಬಡಾವಣೆಯ ಸಮಗ್ರ ಅಭಿವೃದ್ಧಿ ಯೋಜನೆಯಡಿ 75 ಎಕರೆಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾಂಗಣ ಸಂಕೀರ್ಣವನ್ನು ₹2,350 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಸಂಪುಟ ಒಪ್ಪಿಗೆ ನೀಡಿದೆ. ಈ ಕ್ರೀಡಾಂಗಣದಲ್ಲಿ 80 ಸಾವಿರ ಆಸನಗಳು ಇರಲಿವೆ. 24 ವಿವಿಧ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳು ಹಾಗೂ 3,000 ಆಸನಗಳ ಸಮಾವೇಶ ಸಭಾಂಗಣ ಸೇರಿ ವಿಶ್ವ ದರ್ಜೆಯ ಸೌಲಭ್ಯ ಹೊಂದಿರಲಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.75	3,499	2,757
ಹಾರಂಗಿ	2,859	857.53	519	1,000
ಕಬಿನಿ	2,284.00	2,283.27	1,149	1,650
ಹೇಮಾವತಿ	2,922	2,916.95	3,385	5,910
ಲಿಂಗನಮಕ್ಕಿ	1,819	1,815.65	4,733	7,055
ಸೂಪಾ (ಮೀ)	564	558.90	1,161.37	2,535.95
ಮಾಣಿ	595	593.76	367	663
ತುಂಗಭದ್ರಾ	1,633	1,625.98	7,624	10,508
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.76	347	183
ಭದ್ರಾ *	186	184.1	3,024	3,204
ಆಲಮಟ್ಟಿ (ಮೀ)	519.6	519.58	10,256	15,140
ನಾರಾಯಣಪುರ (ಮೀ)	492.25	492.23	14,500	14,743

* ನೆಲಮಟ್ಟದಿಂದ



ಪ್ರೀತಿ ನಿರಾಕರಣೆ: ಕತ್ತು ಕೊಯ್ದು ಕೊಲೆ

ತಲೆಮರೆಸಿಕೊಂಡ ಆರೋಪಿ: ಶ್ರೀರಾಂಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀತಿಸಲು ನಿರಾಕರಿಸಿದ ಕಾರಣಕ್ಕೆ ವಿದ್ಯಾರ್ಥಿನಿಯ ಮುಖಕ್ಕೆ ಖಾರದ ಪುಡಿ ಎರಚಿ ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿರುವ ಘಟನೆ ಶ್ರೀರಾಂಪುರ ಪೊಲೀಸ್ ಠಾಣಾ ವ್ಯಾಪ್ತಿಯ ರೈಲ್ವೆ ಹಳಿಯ ಬಳಿ ಗುರುವಾರ ಸಂಜೆ ನಡೆದಿದೆ.


ಯಾಮಿನಿ ಪ್ರಿಯಾ

ಅಪರಾಧ ಸುದ್ದಿ

ಶ್ರೀರಾಂಪುರ ಸಮೀಪದ ಸ್ವತಂತ್ರಪಾಳ್ಯ ನಿವಾಸಿ ಯಾಮಿನಿ ಪ್ರಿಯಾ (20) ಕೊಲೆಯಾದ ವಿದ್ಯಾರ್ಥಿನಿ.

ಪ್ರಿಯಾ ಅವರ ಮನೆಯ ಪಕ್ಕದಲ್ಲೇ ವಾಸವಾಗಿದ್ದ ವಿಘ್ನೇಶ್ ಎಂಬಾತ ಕೃತ್ಯ ಎಸಗಿದ್ದು ತಲೆಮರೆಸಿಕೊಂಡಿದ್ದಾನೆ. ಆತನ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ. ವಿಘ್ನೇಶ್ ಜಿಮ್ ತರಬೇತುದಾರನಾಗಿ ಕೆಲಸ ಮಾಡುತ್ತಿದ್ದ ಎನ್ನುವ ಮಾಹಿತಿ ಸಿಕ್ಕಿದೆ ಎಂದು ಪೊಲೀಸರು ಹೇಳಿದರು.

ಬಲವಂತವಾಗಿ ತಾಳಿ ಕಟ್ಟಿದ್ದ ಆರೋಪಿ

ಯಾಮಿನಿ ಪ್ರಿಯಾ ಹಿಂದೆ ಬಿದ್ದು ಪ್ರೀತಿ ಮಾಡುವಂತೆ ಒತ್ತಾಯಿಸುತ್ತಿದ್ದ. ಒಮ್ಮೆ ಪ್ರಿಯಾಗೆ ಬಲವಂತವಾಗಿ ತಾಳಿ ಕೂಡ ಕಟ್ಟಿದ್ದ. ಪ್ರಿಯಾ ಅವರು ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಾಗಿತ್ತು ಎಂದು ಪೊಲೀಸರು ಹೇಳಿದರು.

‘ವಿಘ್ನೇಶ್ ಕಳೆದ ಹಲವು ತಿಂಗಳಿನಿಂದ ನನ್ನ ಮಗಳಿಗೆ ಹಿಂಸೆ ಕೊಡುತ್ತಿದ್ದ. ಹಿಂಬಾಲಿಸಿಕೊಂಡು ಬಂದು ಪ್ರೀತಿ ಮಾಡುವಂತೆ ಒತ್ತಾಯಿಸುತ್ತಿದ್ದ. ಈ ಸಂಬಂಧ ನಾವು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೆವು. 6 ತಿಂಗಳ ಹಿಂದೆ ಪೊಲೀಸರು ಆತನನ್ನು ಠಾಣೆಗೆ ಕರೆಸಿ ಮುಚ್ಚಳಿಕೆ ಬರೆಸಿಕೊಂಡಿದ್ದರು’ ಎಂದು ಪ್ರಿಯಾ ತಂದೆ ಗೋಪಾಲ್ ತಿಳಿಸಿದರು.

ಗೋಪಾಲ್ ಅವರ ಪುತ್ರಿ ಪ್ರಿಯಾ ಅವರು ಬನಶಂಕರಿ ಮೂರನೇ ಹಂತದ ಖಾಸಗಿ ಕಾಲೇಜಿನಲ್ಲಿ ಬಿ.ಫಾರ್ಮಾ ಓದುತ್ತಿದ್ದರು. ಮನೆಯ ಪಕ್ಕದ ನಿವಾಸಿ ವಿಘ್ನೇಶ್ ಪರಿಚಯವಾಗಿದ್ದ. ಪ್ರೀತಿಸುವಂತೆ ಆರೋಪಿ ಬಲವಂತ ಮಾಡುತ್ತಿದ್ದ. ಆದರೆ, ಪ್ರಿಯಾ ಅವರು ನಿರಾಕರಿಸಿದ್ದರು ಎಂದು ಮೂಲಗಳು ಹೇಳಿವೆ.

ಪ್ರತಿನಿತ್ಯ ಬಿಎಂಟಿಸಿ ಬಸ್‌ನಲ್ಲಿ ಯಾಮಿನಿ ಪ್ರಿಯಾ ಕಾಲೇಜಿಗೆ ಹೋಗುತ್ತಿದ್ದರು. ಈ ವಿಚಾರ ತಿಳಿದುಕೊಂಡಿದ್ದ ಆರೋಪಿ, ಶ್ರೀರಾಂಪುರ ಬಸ್ ನಿಲ್ದಾಣದ ಬಳಿ ಗುರುವಾರ ಕಾದು ನಿಂತಿದ್ದ. ಮಧ್ಯಾಹ್ನ 2.30ರ ಸುಮಾರಿಗೆ ಬನಶಂಕರಿ ಮೂರನೇ ಹಂತದಿಂದ ಬಿಎಂಟಿಸಿ ಬಸ್‌ನಲ್ಲಿ ಶ್ರೀರಾಂಪುರಕ್ಕೆ ಬಂದಿಳಿದ ಯಾಮಿನಿ, ರೈಲ್ವೆ ಹಳಿಯ ಪಕ್ಕದ ಕಾಲು ದಾರಿಯಲ್ಲಿ ಮನೆಗೆ ನಡೆದು ಹೋಗುತ್ತಿದ್ದರು. ಆಗ ಹಿಂಬಾಲಿಸಿಕೊಂಡು ಬಂದಿದ್ದ ಆರೋಪಿ ನಾಲ್ಕು ಬಾರಿ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾನೆ ಎಂದು ಪೊಲೀಸರು ಹೇಳಿದರು.

ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಸಾವು: ಪ್ರಿಯಾ ಅವರ ಚೀರಾಟ ಕೇಳಿ ಸ್ಥಳೀಯರು ಸ್ಥಳಕ್ಕೆ ಹೋಗುವಷ್ಟರಲ್ಲಿ ಆರೋಪಿ ಪರಾರಿಯಾಗಿದ್ದ. ತೀವ್ರ ರಕ್ತಸ್ರಾವದಿಂದ ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನಕಲಿ ನೇಮಕಾತಿ ಪತ್ರ ನೀಡಿ ಏಳು ಮಂದಿಗೆ ವಂಚಿಸಿದ್ದ ಪ್ರಕರಣ

ಕೊಪ್ಪಳ ನಗರಸಭೆ ಮಾಜಿ ಸದಸ್ಯೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿ ಹೆಸರಿನಲ್ಲಿ ಏಳು ಉದ್ಯೋಗ ಆಕಾಂಕ್ಷಿಗಳಿಗೆ ನಕಲಿ ನೇಮಕಾತಿ ಪತ್ರ ನೀಡಿ ₹49 ಲಕ್ಷ ವಂಚಿಸಿದ್ದ ಆರೋಪದಡಿ ದಾಖಲಾಗಿದ್ದ ಪ್ರಕರಣದ ಸಂಬಂಧ ಮತ್ತೊಬ್ಬ ಆರೋಪಿಯನ್ನು ಸಿಸಿಬಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಕೊಪ್ಪಳ ನಗರಸಭೆ ಮಾಜಿ ಸದಸ್ಯೆ ವಿಜಯಾ ಹಿರೇಮಠ ಬಂಧಿತ ಆರೋಪಿ.

2024ರ ಸೆ.3ರಂದು ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆಗ ವಿಜಯಾ ಹಿರೇಮಠ ಅವರ ಪತಿ ಸಿದ್ದಲಿಂಗಯ್ಯ ಹಿರೇಮಠ ಅವರನ್ನು ಬಂಧಿಸಲಾಗಿತ್ತು. ವಿಜಯಾ ಹಿರೇಮಠ ಅವರು ತಲೆಮರೆಸಿಕೊಂಡಿದ್ದರು. ರಾಮದುರ್ಗದ ಸಂಬಂಧಿಕರ ಮನೆಯಲ್ಲಿದ್ದ ಮಾಹಿತಿ ಆಧರಿಸಿ ಗುರುವಾರ ಕಾರ್ಯಾಚರಣೆ ನಡೆಸಿ, ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಹಣ ಕಳೆದುಕೊಂಡಿದ್ದ ಉದ್ಯೋಗ ಆಕಾಂಕ್ಷಿಗಳು, 3 ದಿನಗಳ ಹಿಂದೆ ಕೊಪ್ಪಳದ ಆರೋಪಿಯ ಮನೆ ಎದುರು ಪ್ರತಿಭಟಿಸಿದ್ದರು. ಇದರ ಬೆನ್ನಲ್ಲೇ ಆರೋಪಿಯನ್ನು ಬಂಧಿಸಲಾಗಿದೆ.

ಆರ್‌.ಟಿ. ನಗರ ಕೌಸರ್ ಬಡಾವಣೆಯ ಅಬ್ದುಲ್ ರಜಾಕ್ ದೂರು ನೀಡಿದ್ದರು. ದೂರು ಆಧರಿಸಿ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

‘ಕೊಪ್ಪಳದ ಸಿದ್ದಲಿಂಗಯ್ಯ ಹಿರೇಮಠ ಅವರು ಸಹಕಾರ ನಗರದಲ್ಲಿ ವಾಸಿಸುತ್ತಿದ್ದರು. ತನಗೆ ನ್ಯಾಯಮೂರ್ತಿಗಳ ಪರಿಚಯವಿದ್ದು, ನೇರ ನೇಮಕಾತಿ ಮೂಲಕ ನ್ಯಾಯಾಲಯದಲ್ಲಿ ಕೆಳ ಹಂತದ ಹುದ್ದೆಗಳನ್ನು ಕೊಡಿಸುವುದಾಗಿ ನಂಬಿಸಿ ಉದ್ಯೋಗ ಆಕಾಂಕ್ಷಿಗಳಿಂದ ಹಂತಹಂತವಾಗಿ ಹಣ ಪಡೆದು ವಂಚಿಸಿದ್ದರು. ಆರೋಪಿಯ ಕೃತ್ಯಕ್ಕೆ ವಿಜಯಾ ಅವರು ಸಹಕಾರ ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಅಬ್ದುಲ್ ರಜಾಕ್ ಅವರು ತನ್ನ ಚಿಕ್ಕಪ್ಪನ ಪುತ್ರ ಜಾವೀದ್ ಅವರಿಗೆ ಕೆಲಸ ಕೊಡಿಸುವಂತೆ ಆರೋಪಿಯೊಂದಿಗೆ ಮಾತುಕತೆ ನಡೆಸಿದ್ದರು. ಎಸ್ಸೆಸ್ಸೆಲ್ಸಿ ವ್ಯಾಸಂಗ ಮಾಡಿದ್ದ ಜಾವೀದ್‌ಗೆ ಸರ್ವರ್ ಹುದ್ದೆ ಕೊಡಿಸುವುದಾಗಿ ಹೇಳಿ ಸಿದ್ದಲಿಂಗಯ್ಯ ಅವರು ಹಂತಹಂತವಾಗಿ ₹7 ಲಕ್ಷ ಪಡೆದುಕೊಂಡಿದ್ದರು. ಹೈಕೋರ್ಟ್ ನ್ಯಾಯಮೂರ್ತಿ ಹೆಸರಿನ ನಕಲಿ ಸಹಿಯುಳ್ಳ ನೇಮಕಾತಿ ಪತ್ರ ನೀಡಿದ್ದರು. ಜಾವೀದ್ ಜತೆಗೆ ಇನ್ನೂ ಆರು ಮಂದಿಗೆ ಇದೇ ರೀತಿಯಲ್ಲಿ ವಂಚಿಸಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

ಇ–ಮೇಲ್‌ನಲ್ಲಿ ಬೆದರಿಕೆ: ಕಾರ್ಯಾಚರಣೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮನೆ, ಕಚೇರಿ, ನಗರದ ಶಾಲಾ–ಕಾಲೇಜುಗಳು, ಹೋಟೆಲ್‌ಗಳು, ರಾಯಭಾರ ಕಚೇರಿಗಳಿಗೆ ನಿರಂತರವಾಗಿ ಬಾಂಬ್ ಬೆದರಿಕೆ ಸಂದೇಶಗಳು ಬರುತ್ತಿದ್ದು, ಈ ಸಂಬಂಧ 8 ರಾಜ್ಯಗಳ ಪೊಲೀಸರು, ಸಿಬಿಐ ಅಧಿಕಾರಿಗಳ ಜತೆಗೆ ಬೆಂಗಳೂರು ಪೊಲೀಸರು ಜಂಟಿ ಕಾರ್ಯಾಚರಣೆ ಆರಂಭಿಸಿದ್ದಾರೆ.

ಪ್ರಾಥಮಿಕ ಮಾಹಿತಿ ಪ್ರಕಾರ ಕಳೆದ ಒಂದು ವರ್ಷದಲ್ಲಿ ಮೂರು ಮಂದಿಯೇ ತಮ್ಮ ಹೆಸರು ಬದಲಾಯಿಸಿಕೊಂಡು ಕರ್ನಾಟಕ ಸೇರಿ ದೇಶದ ವಿವಿಧೆಡೆ ಇ–ಮೇಲ್ ಮೂಲಕ ಬೆದರಿಕೆ ಸಂದೇಶಗಳನ್ನು ಕಳುಹಿಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಆರೋಪಿಗಳ ಪತ್ತೆ ಮಾಡಲು ದೆಹಲಿ, ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಉತ್ತರ ಪ್ರದೇಶ ಸೇರಿ 8 ರಾಜ್ಯಗಳ ಪೊಲೀಸರ ಜತೆ ಸಿಬಿಐ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿ ಇದ್ದಾರೆ.

ಕಳೆದ ವಾರ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರ ನಿವಾಸಕ್ಕೆ ಆರ್‌ಡಿಎಕ್ಸ್, ಐಇಡಿ ಸ್ಫೋಟಕ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ ಸಂದೇಶಗಳು ಬಂದಿದ್ದವು. ಒಂದೇ ಇ–ಮೇಲ್ ವಿಳಾಸದಿಂದಲೇ ಬೆದರಿಕೆ ಸಂದೇಶ ಬಂದಿರುವುದು ಗೊತ್ತಾಗಿದೆ.

ಸಾಲ ಕೊಡಿಸುವುದಾಗಿ ವಂಚನೆ: ಆರೋಪಿ ಬಂಧನ

ಬೆಂಗಳೂರು: ಸಾಲ ಕೊಡಿಸುವುದಾಗಿ ಹೇಳಿ ವಂಚಿಸುತ್ತಿದ್ದ ಆರೋಪಿಯನ್ನು ಕೆ.ಪಿ. ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.


ನಯನಾ

ಡಿ.ಆರ್.ನಯನಾ ಬಂಧಿತೆ. ಸಾರ್ವಜನಿಕರಿಗೆ ₹12.20 ಲಕ್ಷ ವಂಚಿಸಿದ್ದ ಆರೋಪದ ಅಡಿ ಮಹಿಳೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸುಬ್ಬಲಕ್ಷ್ಮಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್ ಮೂಲಕ ಶೇ 1ರ ಬಡ್ಡಿ ದರದಲ್ಲಿ ಸಾಲ ಕೊಡಿಸುವುದಾಗಿ ಆರೋಪಿ ನಂಬಿಸುತ್ತಿದ್ದರು. ₹10 ಲಕ್ಷ ಸಾಲದ ಹಣಕ್ಕೆ ಮುಂಗಡವಾಗಿ ಮೂರು ತಿಂಗಳ ಇಎಂಐ ಅನ್ನು ₹30 ಸಾವಿರದಂತೆ 15 ಮಂದಿಯಿಂದ ಪಡೆದುಕೊಂಡಿದ್ದರು. ಅಲ್ಲದೇ ಸಾಲವನ್ನೂ ನೀಡಿರಲಿಲ್ಲ. ಸಾರ್ವಜನಿಕರಿಂದ ಮುಂಗಡವಾಗಿ ಕಡಿತ ಮಾಡಿಕೊಂಡಿದ್ದ ₹12.22 ಲಕ್ಷವನ್ನೂ ಮರುಪಾವತಿ ಮಾಡದೇ ವಂಚಿಸಿದ್ದರು. ಆರೋಪಿ ವಿರುದ್ಧ ಬಸವೇಶ್ವರನಗರ ಹಾಗೂ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ವಂಚನೆಗೆ ಒಳಗಾದವರು ಬಡ ಹಾಗೂ ಮಧ್ಯಮ ವರ್ಗದ ಕುಟುಂಬವರು. ಈ ರೀತಿ ಆಮಿಷವೊಡ್ಡಿ ವಂಚನೆ ನಡೆಸುವವರ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಅರಿವಳಿಕೆ ನೀಡಿ ವೈದ್ಯ ಪತ್ನಿ ಕೊಲೆ ಪ್ರಕರಣ • ಮಾರತ್‌ಹಳ್ಳಿ ಪೊಲೀಸರಿಂದ ಆರೋಪಿಯ ವಿಚಾರಣೆ

ನೆನಪಿಗಾಗಿ ಆಭರಣ ಕೊಂಡೊಯ್ದಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿ ‘ಸಹಜ ಸಾವು’ ಎಂದು ಬಿಂಬಿಸಿದ್ದ ಆರೋಪಿ ಪತಿಯನ್ನು ಕಸ್ಟಡಿಗೆ ಪಡೆದುಕೊಂಡಿರುವ ಮಾರತ್‌ಹಳ್ಳಿ ಪೊಲೀಸರು, ವಿಚಾರಣೆ ತೀವ್ರಗೊಳಿಸಿದ್ದಾರೆ.

ಮನೇನಕೊಳಲು ಅಯ್ಯಪ್ಪಸ್ವಾಮಿ ಲೇಔಟ್ ನಿವಾಸಿ ಡಾ.ಕೃತಿಕಾ ರೆಡ್ಡಿ (28) ಅವರ ಕೊಲೆ ಪ್ರಕರಣದಲ್ಲಿ ಆರೋಪಿ, ಗುಂಜೂರಿನ ನಿವಾಸಿ ಡಾ.ಜಿ.ಎಸ್.ಮಹೇಂದ್ರ ರೆಡ್ಡಿ (31) ಅವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ನ್ಯಾಯಾಲಯದ ಅನುಮತಿ ಪಡೆದು ಹತ್ತು ದಿನ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ವಿವಿಧ ಆಯಾಮಗಳಲ್ಲಿ ಆರೋಪಿಯ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

‘ಯಾವ ಕಾರಣಕ್ಕೆ ಕೃತಿಕಾ ಅವರನ್ನು ಕೊಲೆ ಮಾಡಲಾಗಿದೆ? ಮಹೇಂದ್ರ ರೆಡ್ಡಿ ಅವರಿಗೆ ಬೇರೆ ಯುವತಿಯ ಜತೆಗೆ ಸ್ನೇಹವಿತ್ತೇ? ಕೊಲೆಗೆ ಪತ್ನಿಯ ಅನಾರೋಗ್ಯ ಕಾರಣವಾಯಿತೇ? ಅನಸ್ತೇಶಿಯಾವನ್ನು ಆರೋಪಿ ಎಲ್ಲಿಂದ ತಂದಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.


ಕೃತಿಕಾ ರೆಡ್ಡಿ ಹಾಗೂ ಮಹೇಂದ್ರ ರೆಡ್ಡಿ

‘ಈವರೆಗೆ ನಡೆದಿರುವ ವಿಚಾರಣೆಯಿಂದ ಐವಿಯ ಮೂಲಕ ಅನಸ್ತೇಶಿಯಾ ನೀಡಿ ಕೊಲೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಪತ್ನಿಯನ್ನು ಕೊಲೆ ಮಾಡಿದ ಬಳಿಕ ಮಾವ ಕೆ.ಮುನಿರೆಡ್ಡಿ ಅವರ ಮನೆಗೆ ಬಂದಿದ್ದ ಆರೋಪಿ, ಪತ್ನಿಯ ನೆನಪು ಕಾಡುತ್ತಿದೆ ಎಂದು ಹೇಳಿ ಮದುವೆಯ ಸಂದರ್ಭದಲ್ಲಿ ನೀಡಿದ್ದ ಆಭರಣಗಳನ್ನು ಕೊಂಡೊಯ್ದಿದ್ದರು. ಪತ್ನಿಯ ನೆನಪಿಗೆ ಆಭರಣಗಳನ್ನು ಇಟ್ಟುಕೊಳ್ಳುತ್ತೇನೆ ಎಂದು ಹೇಳಿದ್ದರು. ಆರೋಪಿಯ ಮಾತು ನಂಬಿದ್ದ ಕೃತಿಕಾ ಕುಟುಂಬಸ್ಥರು ಆಕೆಗೆ ಸಂಬಂಧಿಸಿದ ಎಲ್ಲ ವಸ್ತುಗಳನ್ನೂ ನೀಡಿದ್ದರು’ ಎಂದು ಪೊಲೀಸರು ಹೇಳಿದರು.

ಆಸ್ಪತ್ರೆ ನಿರ್ಮಿಸಿ ಕೊಡುವಂತೆ ಒತ್ತಾಯ

‘ಆಸ್ಪತ್ರೆ ನಿರ್ಮಿಸಿಕೊಡುವಂತೆ ಮಹೇಂದ್ರ ಅವರು ಒತ್ತಾಯ ಮಾಡಿದ್ದರು. ಮದುವೆಯಾದ ನಂತರ, ‘ದೊಡ್ಡದಾದ ಆಸ್ಪತ್ರೆ ನಿರ್ಮಿಸಿಕೊಡಲು ಆಗುವುದಿಲ್ಲ, ಕ್ಲಿನಿಕ್ ಮಾಡಿಕೊಡುತ್ತೇವೆ’ ಎಂದು ಮುನಿರೆಡ್ಡಿ ಹೇಳಿದ್ದರು. ಆಸ್ಪತ್ರೆ ನಿರ್ಮಿಸಿಕೊಟ್ಟಿಲ್ಲ ಎನ್ನುವ ಕಾರಣಕ್ಕೂ ಕೊಲೆ ಮಾಡಿರುವ ಸಾಧ್ಯತೆಯಿದೆ’ ಎಂದು ಮೂಲಗಳು ಹೇಳಿವೆ.

ಪ್ರೇಯಿಸಿಗಾಗಿ ಕೊಲೆ?: ‘ಆರೋಪಿಗೆ ಯುವತಿಯೊಬ್ಬಳ ಜತೆಗೆ ಸಂಪರ್ಕವಿತ್ತು. ಯಾವುದೋ ಹುಡುಗಿಯ ಜತೆಗೆ ಹೆಚ್ಚಿನ ಸಮಯ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದರು. ಕೃತಿಕಾ ರೆಡ್ಡಿ ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಸಣ್ಣಪುಟ್ಟ ವಿಚಾರಕ್ಕೂ ಗಲಾಟೆ ಮಾಡುತ್ತಿದ್ದರು’ ಎಂದು ಮುನಿರೆಡ್ಡಿ ಆರೋಪಿಸಿದ್ದಾರೆ.

‘ಕೃತಿಕಾ ಮೃತಪಟ್ಟ ದಿನವೇ ಅನುಮಾನ ಬಂದಿತ್ತು. ಅಕ್ಕನ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಬೇಕು ಎಂಬುದಾಗಿ ನಾವು ಒತ್ತಾಯಿಸಿದ್ದೆವು. ಆದರೆ, ಮಹೇಂದ್ರ ರೆಡ್ಡಿ ಅವರು ನಾಟಕ ಮಾಡಿ ಮರಣೋತ್ತರ ಪರೀಕ್ಷೆ ಬೇಡ ಎನ್ನುತ್ತಿದ್ದರು. ಆದರೂ ನಮಗೆ ಅನುಮಾನ ಬಂದು ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಿಸಿದ್ದೆವು’ ಎಂದು ಕೊಲೆಯಾದ ಕೃತಿಕಾ ಸಹೋದರಿ ನಿಖಿತಾ ಅವರು ತಿಳಿಸಿದ್ದಾರೆ.

‘ಕೃತಿಕಾ ಕ್ಲಿನಿಕ್ ತೆರೆಯುವ ಆಸೆ ಹೊಂದಿದ್ದರು. ಆದರೆ, ಮಹೇಂದ್ರ ರೆಡ್ಡಿ ಯಾವತ್ತೂ ಬೆಂಬಲ ನೀಡಲಿಲ್ಲ. ಮದುವೆಯ ನೋಂದಣಿ ಮಾಡಿಸಲು ಒಪ್ಪಿರಲಿಲ್ಲ. ಅನವಶ್ಯವಾಗಿ ನನಗೆ ಔಷಧಿ ನೀಡುತ್ತಿದ್ದಾರೆಂದು ಅಕ್ಕ ನನಗೆ ತಿಳಿಸಿದ್ದಳು’ ಎಂದೂ ಹೇಳಿದರು.

ಒಬಿಸಿ, ಇಬಿಸಿಗಳಿಗೆ ಪ್ರಮುಖ ಪಾಲು

ಬಿಹಾರ ವಿಧಾನಸಭಾ ಚುನಾವಣೆ ಜೆಡಿಯು ಟಿಕೆಟ್ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಗೆ 44 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಜೆಡಿಯು ಗುರುವಾರ ಬಿಡುಗಡೆ ಮಾಡಿತು. ಈ ಮೂಲಕ, ಚುನಾವಣೆಯಲ್ಲಿ ಸ್ಪರ್ಧಿಸಲಿರುವ 101 ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಪ್ರಕಟಿಸಿದಂತಾಗಿದೆ.

ಅಭ್ಯರ್ಥಿಗಳ ಪೈಕಿ ಶೇ 50ರಷ್ಟು ಹಿಂದುಳಿದ (ಒಬಿಸಿ) ಹಾಗೂ ಅತಿ ಹಿಂದುಳಿದ ವರ್ಗದವರು (ಇಬಿಸಿ). 37 ಒಬಿಸಿಗಳು ಹಾಗೂ 22 ಇಬಿಸಿ ಅಭ್ಯರ್ಥಿಗಳಿಗೆ ಮಣೆ ಹಾಕಲಾಗಿದೆ. ಪ್ರಬಲ ಜಾತಿಗಳ 22 ಹುರಿಯಾಳುಗಳಿಗೆ ಟಿಕೆಟ್ ಕೊಡಲಾಗಿದೆ. ಪಕ್ಷವು 13 ಮಹಿಳೆಯರಿಗೆ ಟಿಕೆಟ್ ನೀಡಿದೆ. ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 17ರಷ್ಟಿದ್ದರೆ, ಪ್ರಬಲ ಜಾತಿಗಳ ಜನಸಂಖ್ಯೆ ಶೇ 15ರಷ್ಟಿದೆ. ಆದರೆ, ನಾಲ್ಕು ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗಿದೆ.

2020ರ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದಿದ್ದ ಸಚಿವ ಸುಮಿತ್ ಸಿಂಗ್ ಅವರನ್ನು ಈ ಬಾರಿ ಪಕ್ಷವು ಚಕೈ ವಿಧಾನಸಭಾ ಕ್ಷೇತ್ರದಲ್ಲಿ ನಾಮನಿರ್ದೇಶನ ಮಾಡಿದೆ. ಸಚಿವರಾದ ಜಮಾ ಖಾನ್ (ಚೈನ್‌ಪುರ) ಜಯಂತ್ ರಾಜ್ (ಅಮರ್‌ಪುರ) ಮತ್ತು ಲೆಸಿ ಸಿಂಗ್ (ಧಮ್ದಾಹಾ) ಅವರ ಹೆಸರು ಪಟ್ಟಿಯಲ್ಲಿ ಸೇರಿದೆ.

ವಾರದ ಹಿಂದಷ್ಟೇ ಪಕ್ಷಕ್ಕೆ ಸೇರಿದ್ದ ವಿಭಾ ದೇವಿ ಅವರನ್ನು ನವಾಡಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಲಾಗಿದೆ. 2020ರ ಚುನಾವಣೆಯಲ್ಲಿ ಆರ್‌ಜೆಡಿ ಅಭ್ಯರ್ಥಿಯಾಗಿ ಗೆದ್ದಿದ್ದರು. ಆದರೆ, ಶಿಯೋಹರ್‌ನ ಹಾಲಿ ಶಾಸಕ ಚೇತನ್ ಆನಂದ್ ಅವರನ್ನು ನಬೀನಗರದಿಂದ ಕಣಕ್ಕಿಳಿಸಲಾಗಿದೆ.

57 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಲಾಗಿತ್ತು. ಎಲ್‌ಜೆಪಿ (ಪಾಸ್ವಾನ್ ಬಣ) ಮುಖ್ಯಸ್ಥ ಚಿರಾಗ್ ಪಾಸ್ವಾನ್ ಪಟ್ಟು ಹಿಡಿದಿದ್ದ ನಾಲ್ಕು ಕ್ಷೇತ್ರಗಳಿಗೆ ಜೆಡಿಯು ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗಿತ್ತು. ಮೊದಲ ಪಟ್ಟಿಯಲ್ಲಿ ನಿತೀಶ್ ಕುಮಾರ್ ಅವರ ಪಕ್ಷವು ಸೋನ್‌ಬರ್ಸಾ, ಮೋರ್ವಾ, ಏಕ್ಮಾ ಮತ್ತು ರಾಜ್‌ಗಿರ್ ಅಭ್ಯರ್ಥಿಗಳನ್ನು ಘೋಷಿಸಿದ್ದು, ಈ ನಡೆ ಈ ಕ್ಷೇತ್ರಗಳನ್ನು ಬಯಸಿದ್ದ ಚಿರಾಗ್ ಪಾಸ್ವಾನ್ ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಚಿರಾಗ್ ಅವರ ಪಕ್ಷವು 14 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಿದೆ. ಬಿಜೆಪಿಯು ಎಲ್ಲ 101 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿದೆ.

ಮುಖ್ಯಾಂಶಗಳು
- ಜೆಡಿಯುನಿಂದ 44 ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟ
- 13 ಮಹಿಳೆಯರಿಗೆ ಟಿಕೆಟ್ ಘೋಷಣೆ
- ನಾಲ್ಕು ಮುಸ್ಲಿಂ ಅಭ್ಯರ್ಥಿಗಳಿಗೂ ಮನ್ನಣೆ



ಬಿಹಾರ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾರಾಪುರ್ ಕ್ಷೇತ್ರದಿಂದ ಉಪ ಮುಖ್ಯಮಂತ್ರಿ ಸಮ್ರಾಟ್ ಚೌಧರಿ ಗುರುವಾರ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ವೇಳೆ ಬೆಂಬಲಿಗರು ಕಾಣಿಸಿಕೊಂಡಿದ್ದು ಹೀಗೆ–ಪಿಟಿಐ ಚಿತ್ರ

'ಎಸ್‌ಐಆರ್ ಕಾಗುಣಿತ ದೋಷಗಳನ್ನು ಸರಿಪಡಿಸಿ'

ನವದೆಹಲಿ (ಪಿಟಿಐ): ಬಿಹಾರದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ ಪ್ರಕಟಿಸಲಾಗಿರುವ ಮತದಾರರ ಅಂತಿಮ ಪಟ್ಟಿಯಲ್ಲಿ ಇರುವ ಕಾಗುಣಿತ ದೋಷಗಳು ಮತ್ತು ಇತರ ತಪ್ಪುಗಳನ್ನು ಪರಿಶೀಲಿಸಿ, ಸರಿಪಡಿಸಲು ಚುನಾವಣಾ ಆಯೋಗ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ ಎಂದು ನಿರೀಕ್ಷಿಸುವುದಾಗಿ ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು ಈ ಕುರಿತು ವಿಚಾರಣೆ ನಡೆಸಿತು. ಎಸ್‌ಐಆರ್‌ಗೆ ಸಂಬಂಧಿಸಿದ ಕಾನೂನು ಸಮಸ್ಯೆಗಳ ಬಗ್ಗೆ ನವೆಂಬರ್ 4ರಂದು ವಿಚಾರಣೆ ನಡೆಸುವುದಾಗಿ ಪೀಠ ತಿಳಿಸಿತು.

'ಮತದಾರರ ಅಂತಿಮ ಪಟ್ಟಿಯನ್ನು ಸೆಪ್ಟೆಂಬರ್ 30ರಂದು ಪ್ರಕಟಿಸಲಾಗಿದ್ದು, ಅಲ್ಲಿಂದ ಇಲ್ಲಿಯವರೆಗೆ ಯಾವುದೇ ಮತದಾರರು ದೂರು ನೀಡಿಲ್ಲ' ಎಂದು ಆಯೋಗವು ಪೀಠದ ಗಮನಕ್ಕೆ ತಂದಿತು.

'ಕೈ' ಅಭ್ಯರ್ಥಿಗಳ ಘೋಷಣೆ

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಮಹಾಘಟಬಂಧನ್ ಮಿತ್ರ ಪಕ್ಷಗಳೊಂದಿಗೆ ಸೀಟು ಹಂಚಿಕೆ ಅಂತಿಮಗೊಳಿಸುವ ಮುನ್ನವೇ ಬಿಹಾರ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಪ್ರಕಟಿಸಿದೆ.

ಪಕ್ಷದ ಬಿಹಾರ ಘಟಕದ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಅಭ್ಯರ್ಥಿಗಳ ಹೆಸರನ್ನು ಘೋಷಣೆ ಮಾಡಲಾಗಿದ್ದು, ರಾಜ್ಯ ಘಟಕದ ಅಧ್ಯಕ್ಷ ರಾಜೇಶ್ ರಾಮ್ ಅವರು ಕುಟುಂಬ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಪಕ್ಷವು ಅಧಿಕೃತ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡದೆಯೇ 'ಎಕ್ಸ್' ನಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಘೋಷಿಸಲು ಪ್ರಾರಂಭಿಸಿತು. ಪ್ರಕಟಣೆಗಳ ಜೊತೆಗೆ, ಅಭ್ಯರ್ಥಿಗಳಿಗೆ ಬಿ–ಫಾರಂ ಹಸ್ತಾಂತರಿಸುತ್ತಿರುವ ಫೋಟೊಗಳನ್ನು ಪೋಸ್ಟ್ ಮಾಡಿತು.

ಸೀಟು ಹಂಚಿಕೆ ಸಂಬಂಧ ಕಾಂಗ್ರೆಸ್ ನಾಯಕತ್ವವು ಆರ್‌ಜೆಡಿ ಸೇರಿದಂತೆ ತನ್ನ ಮಿತ್ರ ಪಕ್ಷಗಳೊಂದಿಗೆ ಮಾತುಕತೆ ನಡೆಸುತ್ತಿದೆ. ಆದರೆ, ಸೀಟು ಹಂಚಿಕೆ ಅಂತಿಮಗೊಂಡಿಲ್ಲ.

ರಾಘೋಪುರ ಕ್ಷೇತ್ರದಿಂದ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಬುಧವಾರ ನಾಮಪತ್ರ ಸಲ್ಲಿಸಿದ ನಂತರ ಈ ಬೆಳವಣಿಗೆ ನಡೆದಿದೆ.

ಹೊಸ ಪಕ್ಷಕ್ಕೆ ಎರಡು ಕ್ಷೇತ್ರ: ಸಣ್ಣ ಜಾತಿಗಳ ಮತ ಸೆಳೆಯುವ ಉದ್ದೇಶದಿಂದ ಆರು ತಿಂಗಳ ಹಿಂದೆ ರಚನೆಯಾದ ಸಣ್ಣ ಪಕ್ಷಕ್ಕೆ ಎರಡು ಸ್ಥಾನಗಳನ್ನು ಹಂಚಿಕೆ ಮಾಡಲು ಮೈತ್ರಿಕೂಟ ಉತ್ಸುಕವಾಗಿದೆ.

ಕಾಂಗ್ರೆಸ್ ಕೋಟಾದಲ್ಲಿ ಐ.ಪಿ. ಗುಪ್ತ ನೇತೃತ್ವದ ಇಂಡಿಯನ್ ಇನ್‌ಕ್ಲೂಸಿವ್ ಪಾರ್ಟಿಗೆ ಎರಡು ಕ್ಷೇತ್ರಗಳನ್ನು ನೀಡಲಾಗುತ್ತದೆ. ಎಂಜಿನಿಯರ್ ಆಗಿದ್ದ ಗುಪ್ತ ಅವರು ಈ ವರ್ಷದ ಏಪ್ರಿಲ್‌ನಲ್ಲಿ ಪಟ್ನಾದ ಗಾಂಧಿ ಮೈದಾನದಲ್ಲಿ ಬೃಹತ್ ಶಕ್ತಿ ಪ್ರದರ್ಶನ ನಡೆಸುವ ಮೂಲಕ ರಾಜಕೀಯ ಪ್ರವೇಶಿಸಿದ್ದರು.. ತಂತಿ-ತತ್ವಾ ಮತ್ತು ಪ್ಯಾನ್ ಸಮುದಾಯಗಳ ರ್‍ಯಾಲಿ ನಡೆಸಿದ್ದರು.

ಪೋಕ್ಸೊ ಪ್ರಕರಣ ಶೇ 94ರಷ್ಟು ಹೆಚ್ಚಳ

'ಇನ್‌ಟು ದಿ ಲೈಟ್ ಇಂಡೆಕ್ಸ್ 2025'ರ ಸಂಶೋಧನಾ ವರದಿಯಲ್ಲಿ ಬಹಿರಂಗ

ನವದೆಹಲಿ (ಪಿಟಿಐ): ಭಾರತದಲ್ಲಿ 2017 ಹಾಗೂ 2022ರ ನಡುವೆ ಪೋಕ್ಸೊ ಕಾಯ್ದೆಯಡಿ ದಾಖಲಾದ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಅಪರಾಧ ಪ್ರಕರಣಗಳ ಸಂಖ್ಯೆ ಶೇ 94ರಷ್ಟು ಏರಿಕೆಯಾಗಿದೆ ಎಂದು 'ಇನ್‌ಟು ದಿ ಲೈಟ್ ಇಂಡೆಕ್ಸ್ 2025'ರ ಸಂಶೋಧನಾ ವರದಿ ಹೇಳಿದೆ.

ಎಡಿನ್‌ಬರ್ಗ್ ವಿಶ್ವವಿದ್ಯಾಲಯ ಮತ್ತು ನ್ಯೂ ಸೌತ್ ವೇಲ್ಸ್ ವಿಶ್ವವಿದ್ಯಾಲಯವು ಆಯೋಜಿಸಿರುವ, ಚೈಲ್ಡ್‌ಲೈಟ್ ಗ್ಲೋಬಲ್ ಚೈಲ್ಡ್ ಸೇಫ್ಟಿ ಇನ್‌ಸ್ಟಿಟ್ಯೂಟ್ ಈ ವಾರ ಬಿಡುಗಡೆ ಮಾಡಿದ ಸಂಶೋಧನಾ ವರದಿಯಲ್ಲಿ ಈ ವಿವರಗಳು ಬಹಿರಂಗಗೊಂಡಿವೆ.

ಮುಖ್ಯಾಂಶಗಳು
- ಕಾನೂನು ಕ್ರಮ ಜರುಗಿಸುವ ಪ್ರಮಾಣ ಶೇ 90ಕ್ಕಿಂತ ಹೆಚ್ಚು
- ಎಂಟು ಮಕ್ಕಳ ಪೈಕಿ ಒಬ್ಬರ ಮೇಲೆ ಲೈಂಗಿಕ ದೌರ್ಜನ್ಯ

ಈ ವರದಿ ಪ್ರಕಾರ, ಅಪರಾಧ ಪ್ರಕರಣಗಳ ಸಂಖ್ಯೆ 33,210ರಿಂದ 64,469ಕ್ಕೆ ಹೆಚ್ಚಾಗಿದೆ. ಇದರ ಹೊರತಾಗಿಯೂ ಕಾನೂನು ಕ್ರಮ ಜರುಗಿಸುವ ಪ್ರಮಾಣವು ಶೇ 90ಕ್ಕಿಂತ ಹೆಚ್ಚಿದೆ. ಇದು ಕಾಯ್ದೆಯ ಪರಿಣಾಮಕಾರಿ ಜಾರಿ ಮತ್ತು ಪ್ರಕರಣಗಳ ವರದಿ ಮಾಡುವ ಕಾರ್ಯವಿಧಾನಗಳನ್ನು ಸೂಚಿಸುತ್ತದೆ ಎಂದು ಹೇಳಿದೆ.

ಭಾರತದಲ್ಲಿ ಮಕ್ಕಳ ಲೈಂಗಿಕ ಶೋಷಣೆ ಮತ್ತು ನಿಂದನೆ ಕುರಿತು ಹೆಚ್ಚಿನ ದತ್ತಾಂಶ ಲಭ್ಯವಿದೆ. ಅಪರಾಧಗಳ ಅಂಕಿ–ಅಂಶಗಳಲ್ಲಿನ ಪಾರದರ್ಶಕತೆಯು ಹೆಚ್ಚು ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ತ್ವರಿತಗತಿಯ ಕ್ರಮಕ್ಕೆ ಅವಕಾಶ ಮಾಡಿಕೊಡುತ್ತದೆ.

ಎಂಟು ಮಕ್ಕಳ ಪೈಕಿ ಒಬ್ಬರು (ಶೇ 12.5) 18 ವರ್ಷ ತುಂಬುವ ಮೊದಲೇ ಲೈಂಗಿಕ ದೌರ್ಜನ್ಯ ಅಥವಾ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ ಎಂಬುದನ್ನು ಭಾರತ, ನೇಪಾಳ ಮತ್ತು ಶ್ರೀಲಂಕಾದಲ್ಲಿ ನಡೆಸಿದ ಸಮೀಕ್ಷೆಯ ದತ್ತಾಂಶವು ತೋರಿಸುತ್ತದೆ. ಈ ಮೂರು ದೇಶಗಳಲ್ಲಿ ಸುಮಾರು 5.4 ಕೋಟಿ ಮಕ್ಕಳು ಇದ್ದಾರೆ.

'2024ರಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಭಾರತ, ಬಾಂಗ್ಲಾದೇಶ ಮತ್ತು ಪಾಕಿಸ್ತಾನದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ (ಸಿಎಸ್‌ಎಎಂ) ಬಹುಪಾಲು ಪ್ರಕರಣಗಳು ವರದಿಯಾಗಿವೆ. ಆದರೂ, ಭಾರತವು ಅತ್ಯಂತ ಕಡಿಮೆ ಸಿಎಸ್‌ಎಎಂ ಲಭ್ಯತೆಯ ಅನುಪಾತ ಹೊಂದಿದೆ (ಪ್ರತಿ 10 ಸಾವಿರ ಜನರಿಗೆ 15 ವರದಿಗಳು). ಇದು ಪರಿಣಾಮಕಾರಿಯಾದ ಪತ್ತೆ ಕಾರ್ಯ ಮತ್ತು ವರದಿ ಮಾಡುವ ವ್ಯವಸ್ಥೆಗಳನ್ನು ಸೂಚಿಸುತ್ತದೆ' ಎಂದು ವರದಿ ಹೇಳಿದೆ.



ಆಂಧ್ರ ಪ್ರದೇಶದ ನಂದ್ಯಾಲ ಜಿಲ್ಲೆಯಲ್ಲಿರುವ ಶ್ರೀ ಭ್ರಮರಾಂಬಾ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಗುರುವಾರ ಭೇಟಿ ನೀಡಿದರು ಪಿಟಿಐ ಚಿತ್ರ

'2047ರಲ್ಲಿ ವಿಕಸಿತ ಭಾರತ'

ಕರ್ನೂಲ್/ಆಂಧ್ರಪ್ರದೇಶ (ಪಿಟಿಐ): 'ಇಪ್ಪತ್ತೊಂದನೆಯ ಶತಮಾನವು 140 ಕೋಟಿ ಭಾರತೀಯರದ್ದಾಗಿದೆ. 2047ರ ವೇಳೆಗೆ ದೇಶವು 'ವಿಕಸಿತ ಭಾರತ'ವಾಗಿ ಬೆಳಗಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಉದ್ಯಮ, ಇಂಧನ, ರಸ್ತೆ, ರೈಲ್ವೆ, ರಕ್ಷಣಾ ವಲಯ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸೇರಿದಂತೆ ಕರ್ನೂಲ್ ಜಿಲ್ಲೆಯಲ್ಲಿ ಗುರುವಾರ ಆಂಧ್ರಪ್ರದೇಶ ಸರ್ಕಾರದಿಂದ ಹಮ್ಮಿಕೊಳ್ಳಲಾದ ₹13,430 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಮೇಕ್ ಇನ್ ಇಂಡಿಯಾ'ದ ಮೂಲಕ ಸ್ವದೇಶಿ ಶಕ್ತಿಯನ್ನು ನಾವು ಈಗಾಗಲೇ ನೋಡಿದ್ದೇವೆ. ಪಹಲ್ಗಾಮ್ ದಾಳಿಯ ನಂತರ ನಡೆದ ಆಪರೇಷನ್ ಸಿಂಧೂರ ಕಾರ್ಯಾಚರಣೆಯೇ ಇದಕ್ಕೆ ಉತ್ತಮ ಉದಾಹರಣೆ. 21ನೇ ಶತಮಾನವು ಭಾರತದ್ದಾಗಿದೆ. 2047ರಲ್ಲಿ ನಾವು ಸ್ವಾತಂತ್ರ್ಯೋತ್ಸವದ ಶತಮಾನೋತ್ಸವ ಆಚರಿಸಲಿದ್ದೇವೆ. ಆ ವೇಳೆಗೆ ಭಾರತವು ಸಂಪೂರ್ಣ ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮಲಿದೆ' ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರ ದೂರದೃಷ್ಟಿಯ ನಾಯಕತ್ವವನ್ನು ಆಂಧ್ರಪ್ರದೇಶ ಹೊಂದಿದೆ. ಗೂಗಲ್ ಕಂಪನಿ ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ ದತ್ತಾಂಶ ಕೇಂದ್ರ ಹಾಗೂ ಕೃತಕ ಬುದ್ಧಿಮತ್ತೆ (ಎ.ಐ) ಮೂಲಸೌಕರ್ಯ ಹಬ್ ನಿರ್ಮಿಸಲಿದೆ. ಕೇಂದ್ರವು ಸಂಪೂರ್ಣ ಸಹಕಾರ ನೀಡಲಿದೆ' ಎಂದರು.

ವಿದ್ಯುತ್ ಸ್ಪರ್ಶ– ಬಾಲಕ ಸಾವು: ಕರ್ನೂಲ್ ಜಿಲ್ಲೆಯಲ್ಲಿ ಗುರುವಾರ ಪ್ರಧಾನಿ ಮೋದಿ ಅವರ ಸಾರ್ವಜನಿಕ ಕಾರ್ಯಕ್ರಮ ನಿಗದಿಯಾಗಿದ್ದ ಸ್ಥಳದ ಸಮೀಪ, ವಾಹನ ನಿಲುಗಡೆ ಪ್ರದೇಶದಲ್ಲಿ 15 ವರ್ಷದ ಬಾಲಕನೊಬ್ಬ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದ್ದಾನೆ.

30ರಿಂದ ಆರ್‌ಎಸ್‌ಎಸ್ ವಾರ್ಷಿಕ ಸಭೆ

ಭೋಪಾಲ್ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಖಿಲ ಭಾರತೀಯ ಕಾರ್ಯಕಾರಿ ಮಂಡಳಿಯ ಬೈಠಕ್ ಇದೇ 30ರಿಂದ ನವೆಂಬರ್ 1ರವರೆಗೆ ಮೂರು ದಿನಗಳವರೆಗೆ ಮಧ್ಯಪ್ರದೇಶದ ಜಬಲ್ಪುರದಲ್ಲಿ ನಡೆಯಲಿದೆ.

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಈ ವಾರ್ಷಿಕ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಭಾಗವತ್ ಅವರು ವಿಜಯದಶಮಿ ಹಬ್ಬದ ದಿನದಂದು ಪ್ರಸ್ತಾಪಿಸಿದ ಮಹತ್ವದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

'ಯುದ್ಧ ನಿಲ್ಲಿಸಿ': ಅಫ್ಗನ್‌ಗೆ ಒತ್ತಾಯ

ಇಸ್ಲಾಮಾಬಾದ್ (ಎಪಿ): ನಾಗರಿಕರ ರಕ್ಷಣೆಗಾಗಿ ಯುದ್ಧವನ್ನು ಶಾಶ್ವತವಾಗಿ ನಿಲ್ಲಿಸುವಂತೆ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನವನ್ನು ವಿಶ್ವಸಂಸ್ಥೆ ಗುರುವಾರ ಒತ್ತಾಯಿಸಿದೆ. ಕಳೆದ ಕೆಲವು ದಿನಗಳಲ್ಲಿ ನಡೆದ ಸಂಘರ್ಷದಲ್ಲಿ ಎರಡೂ ದೇಶಗಳ ಡಜನ್‌ಗಟ್ಟಲೆ ಜನರು ಮೃತಪಟ್ಟಿದ್ದು, ನೂರಾರು ಜನರು ಗಾಯಗೊಂಡಿದ್ದಾರೆ.

'ಶಸ್ತ್ರಾಸ್ತ್ರ ಪ್ರಚೋದನೆಗಳಿಗೆ ಪ್ರತೀಕಾರ ತೀರಿಸಿಕೊಳ್ಳುತ್ತಿದ್ದೇವೆ' ಎಂದು ಉಭಯ ದೇಶಗಳು ಹೇಳಿಕೊಂಡಿದ್ದು, ಬುಧವಾರ ಕದನ ವಿರಾಮ ಒಪ್ಪಂದ ಮಾಡಿಕೊಂಡಿವೆ. ರಾತ್ರಿಯಿಡೀ ಯಾವುದೇ ದಾಳಿ ನಡೆದಿಲ್ಲ ಎಂದು ವರದಿಯಾಗಿದ್ದು, ಪ್ರಮುಖ ಗಡಿಗಳು ಗುರುವಾರ ಮುಚ್ಚಲ್ಪಟ್ಟಿದ್ದವು.

ಚಿನ್ನ ಕಳವು: ಆರೋಪಿ ವಶಕ್ಕೆ

ತಿರುವನಂತಪುರ (ಪಿಟಿಐ): ಶಬರಿಮಲೆ ದೇವಸ್ಥಾನದ ಸ್ವರ್ಣ ಲೇಪಿತ ತಾಮ್ರದ ದ್ವಾರಪಾಲಕರ ಮೂರ್ತಿಗಳಲ್ಲಿನ ಬಂಗಾರದ ತೂಕದಲ್ಲಿ ಕಡಿಮೆಯಾಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ಅಧಿಕಾರಿಗಳು ಬೆಂಗಳೂರಿನ ಉದ್ಯಮಿ ಉಣ್ಣಿಕೃಷ್ಣನ್ ಪೋಟಿ ಅವರನ್ನು ಅವರ ನಿವಾಸದಲ್ಲಿ ಗುರುವಾರ ವಶಕ್ಕೆ ಪಡೆದರು.

'ಪೋಟಿ ಅವರನ್ನು ವಶಕ್ಕೆ ಪಡೆದ ಬಳಿಕ, ತನಿಖೆಗಾಗಿ ಅವರನ್ನು ಅಜ್ಞಾನ ಸ್ಥಳಕ್ಕೆ ಕೊಂಡೊಯ್ಯಲಾಯಿತು' ಎಂದು ಮೂಲಗಳು ಹೇಳಿವೆ. ಪ್ರಕರಣ ಸಂಬಂಧ ಚಿನ್ನದ ಲೇಪನ ಕಾರ್ಯ ಮಾಡಿದ ಚೆನ್ನೈನ ಸ್ಮಾರ್ಟ್ ಕ್ರಿಯೇಷನ್ಸ್ ಅವರಿಂದಲೂ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದ್ದಾರೆ.

ಪೋಟಿ ಅವರನ್ನು ಈ ಹಿಂದೆ ತಿರುವಾಂಕೂರು ದೇವಸ್ವಂ ಮಂಡಳಿಯವರು (ಟಿಡಿಬಿ) ಎರಡು ದಿನಗಳವರೆಗೆ ವಿಚಾರಣೆ ನಡೆಸಿದ್ದರು. ದೇವಸ್ಥಾನದ ಗರ್ಭಗುಡಿಯ ಬಾಗಿಲಿನ ಚೌಕಟ್ಟಿನಲ್ಲಿದ್ದ ಚಿನ್ನವೂ ಕಾಣೆಯಾದ ಕುರಿತು ಎಸ್‌ಐಟಿ ತನಿಖೆ ನಡೆಸುತ್ತಿದೆ.

'ನಿಮಿಷ ಪ್ರಿಯಾ: ಶಿಕ್ಷೆಗೆ ತಡೆಯಾಗಿದೆ'

ನವದೆಹಲಿ (ಪಿಟಿಐ): 'ಯೆಮನ್‌ನ ಜೈಲಿನಲ್ಲಿರುವ ನರ್ಸ್ ಭಾರತದ ನಿಮಿಷ ಪ್ರಿಯಾ ಅವರ ಮೇಲಿನ ಮರಣದಂಡನೆ ಆದೇಶಕ್ಕೆ ತಡೆಯಾಗಿದೆ' ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಗುರುವಾರ ಮಾಹಿತಿ ನೀಡಿತು.

'ಮರಣದಂಡನೆ ಶಿಕ್ಷೆ ಕಥೆ ಏನಾಯಿತು?' ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಕೇಳಿತು. 'ಮಧ್ಯಸ್ಥಿಕೆ ವಹಿಸಿಕೊಳ್ಳಲು ಹೊಸಬರು ಮುಂದೆ ಬಂದಿದ್ದಾರೆ. ಶಿಕ್ಷೆಯನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ' ಎಂದು ವೆಂಕಟರಮಣಿ ಪ್ರತಿಕ್ರಿಯಿಸಿದರು



ಫಿನಾಯಿಲ್ ಕುಡಿದ 25 ಲಿಂಗತ್ವ ಅಲ್ಪಸಂಖ್ಯಾತರು

ಇಂದೋರ್ (ಪಿಟಿಐ): ಇಂದೋರ್‌ನಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸುಮಾರು 25 ಜನರು ಫಿನಾಯಿಲ್ ಸೇವಿಸಿದ್ದಾಗಿ ಹೇಳಿಕೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಯಾವುದೇ ರೋಗಿಗಳ ಸ್ಥಿತಿ ಗಂಭೀರವಾಗಿಲ್ಲ ಎಂದು ಸರ್ಕಾರಿ ಸ್ವಾಮ್ಯದ ಮಹಾರಾಜ ಯಶವಂತ್ ರಾವ್ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಬಸಂತ್ ಕುಮಾರ್ ನಿಂಗ್ವಾಲ್ ಹೇಳಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸುಮಾರು 25 ಜನರು ನಮ್ಮ ಆಸ್ಪತ್ರೆಗೆ ದಾಖಲಾಗಿದ್ದಾರೆ. ಬುಧವಾರ ರಾತ್ರಿ ತಾವು ಒಟ್ಟಾಗಿ ಫಿನಾಯಿಲ್ ಕುಡಿದಿದ್ದಾಗಿ ಅವರು ಹೇಳಿಕೊಂಡಿದ್ದಾರೆ. ಆದರೆ, ಅದು ಇನ್ನೂ ಖಚಿತವಾಗಿಲ್ಲ' ಎಂದು ಹೇಳಿದ್ದಾರೆ.

ಕಾಂಗ್ರೆಸ್ ವಿರುದ್ಧ ಮಾಯಾವತಿ ಕಿಡಿ

ಲಖನೌ (ಪಿಟಿಐ): 'ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯಗಳ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸಲು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮಾತ್ರ ಬದ್ಧತೆ ಹೊಂದಿದ್ದು, ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ರಾಜಕೀಯ ಪ್ರಾಮಾಣಿಕತೆಯ ಕೊರತೆ ಹೊಂದಿವೆ' ಎಂದು ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಆರೋಪಿಸಿದ್ದಾರೆ.

ಲಖನೌದಲ್ಲಿ ಉತ್ತರಪ್ರದೇಶ ಘಟಕ ಪದಾಧಿಕಾರಿಗಳ ಸಭೆ ಉದ್ದೇಶಿಸಿ ಮಾತನಾಡಿದ ಅವರು, '2027ರ ವಿಧಾನಸಭಾ ಚುನಾವಣೆಗೆ ಪಕ್ಷದ ಕಾರ್ಯಕರ್ತರು ಈಗಿನಿಂದಲೇ ಪೂರ್ಣ ಶಕ್ತಿ ಹಾಗೂ ಸಂಪನ್ಮೂಲಗಳನ್ನು ಬಳಸಿಕೊಂಡು ಸಿದ್ಧತೆ ಮಾಡಿಕೊಳ್ಳಬೇಕು ಎಂಬುದಾಗಿ ಕರೆ ನೀಡಿದರು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಪಿಲ್ ಶರ್ಮಾ ರೆಸ್ಟೋರೆಂಟ್ ಮೇಲೆ ಮತ್ತೆ ದಾಳಿ

ಸರ್ರೆ (ಕೆನಡಾ) (ಪಿಟಿಐ): ಕೆನಡಾದ ಸರ್ರೆಯಲ್ಲಿರುವ ಹಾಸ್ಯನಟ ಕಪಿಲ್ ಶರ್ಮಾ ಅವರ ರೆಸ್ಟೋರೆಂಟ್ ಮೇಲೆ ಗುರುವಾರ ಮತ್ತೆ ಗುಂಡಿನ ದಾಳಿ ನಡೆದಿದೆ.

ಗುರುವಾರ ಬೆಳಗಿನ ಜಾವ 3:45ರ ಸುಮಾರಿಗೆ ದಾಳಿ ನಡೆದಿದೆ. ಈ ಕುರಿತು ಸರ್ರೆ ಪೊಲೀಸ್ ಸೇವೆ (ಎಸ್‌ಪಿಎಸ್) ತನಿಖೆ ನಡೆಸುತ್ತಿದೆ ಎಂದು 'ಸಿಟಿನ್ಯೂಸ್ ವ್ಯಾಂಕೋವರ್' ವರದಿ ಮಾಡಿದೆ.



ಕಪಿಲ್ ಶರ್ಮಾ

ದಾಳಿಯ ವೇಳೆ ಸಿಬ್ಬಂದಿ ಕೆಫೆಯೊಳಗೆ ಇದ್ದರು. ಆದರೆ, ಯಾರಿಗೂ ಗಾಯಗಳಾಗಿಲ್ಲ ಎಂದು ಅದು ತಿಳಿಸಿದೆ.

ರೆಸ್ಟೋರೆಂಟ್ ಜುಲೈನಲ್ಲಿ ಆರಂಭವಾಗಿತ್ತು. ಜುಲೈ 10, ಆಗಸ್ಟ್ 7ರಂದು ಕೂಡ ರೆಸ್ಟೋರೆಂಟ್ ಮೇಲೆ ದಾಳಿಗಳು ನಡೆದಿದ್ದವು. ಈ ತಿಂಗಳ ಆರಂಭದಲ್ಲಿ ಮತ್ತೆ ರೆಸ್ಟೋರೆಂಟ್ ತೆರೆಯಲಾಗಿತ್ತು.

ಸುದ್ದಿ 2 ನಿಮಿಷ

ಹಸೀನಾಗೆ ಗಲ್ಲು ವಿಧಿಸಿ: ಬಾಂಗ್ಲಾ ಪ್ರಾಸಿಕ್ಯೂಟರ್

ಢಾಕಾ (ಪಿಟಿಐ): ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರಿಗೆ ಮರಣದಂಡನೆ ವಿಧಿಸುವಂತೆ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯ ಮುಖ್ಯ ಪ್ರಾಸಿಕ್ಯೂಟರ್ ಗುರುವಾರ ಕೋರಿದ್ದಾರೆ. ದೇಶದಲ್ಲಿ ಕಳೆದ ವರ್ಷ ಸಾಮೂಹಿಕ ಪ್ರತಿಭಟನೆಗಳನ್ನು ನಡೆಸಿದ ಸಂದರ್ಭದಲ್ಲಿ ಮಾಡಿದಂತಹ ಮಾನವೀಯತೆ ವಿರುದ್ಧದ ಅಪರಾಧಗಳ ಹಿಂದಿನ ಮಾಸ್ಟರ್ ಮೈಂಡ್ ಮತ್ತು ಪ್ರಧಾನ ಆರೋಪಿ ಅವರು ಎಂದು ಪ್ರಾಸಿಕ್ಯೂಟರ್ ಆರೋಪಿಸಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ನಡೆದ ವಿದ್ಯಾರ್ಥಿಗಳ ನೇತೃತ್ವದ ಸಾಮೂಹಿಕ ಪ್ರತಿಭಟನೆಯಿಂದಾಗಿ 78 ವರ್ಷದ ಹಸೀನಾ ಪದಚ್ಯುತಗೊಂಡಿದ್ದರು. ಅದರ ನಂತರ ಅವರು ಹಲವಾರು ಪ್ರಕರಣಗಳಲ್ಲಿ ಆರೋಪಿಯಾಗಿದ್ದಾರೆ.

ಹಸೀನಾ ಅವರ ಸರ್ಕಾರ ಪ್ರತಿಭಟನಕಾರರ ಮೇಲೆ ಭದ್ರತಾ ಕ್ರಮ ಕೈಗೊಳ್ಳಲು ಆದೇಶಿಸಿದ್ದರಿಂದ 2024ರ ಜುಲೈ 15ರಿಂದ ಆಗಸ್ಟ್ 15ರವರೆಗೆ 1,400 ಜನರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿಯ ವರದಿ ಹೇಳಿದೆ.



'ಶೇಖ್ ಹಸೀನಾ ಅವರು ಯಾವುದೇ ಪಶ್ಚಾತ್ತಾಪ ಇಲ್ಲದ ಹೃದಯಹೀನ ಅಪರಾಧಿಯಾಗಿದ್ದು, ಗರಿಷ್ಠ ಶಿಕ್ಷೆಗೆ ಅರ್ಹರಾಗಿದ್ದಾರೆ. ಅವರಿಗೆ ಯಾವುದೇ ಕರುಣೆ ತೋರಿಸಬಾರದು' ಎಂದು ಮುಖ್ಯ ಪ್ರಾಸಿಕ್ಯೂಟರ್ ಮುಹಮ್ಮದ್ ತಾಜುಲ್ ಇಸ್ಲಾಂ ಹೇಳಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ಬಿಎಸ್‌ಎಸ್ ವರದಿ ಮಾಡಿದೆ.

ಶೂ ಪ್ರಕರಣ: ನ್ಯಾಯಾಂಗ ನಿಂದನೆ ಮೊಕದ್ದಮೆಗೆ ಅನುಮತಿ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ಹಿರಿಯ ವಕೀಲ ರಾಕೇಶ್ ಕಿಶೋರ್ ಅವರನ್ನು ನ್ಯಾಯಾಂಗ ನಿಂದನೆ ಆರೋಪದಡಿ ವಿಚಾರಣೆಗೆ ಗುರಿಪಡಿಸಲು ಅಟಾರ್ನಿ ಜನರಲ್ ಗುರುವಾರ ಅನುಮತಿ ನೀಡಿದ್ದಾರೆ.

ರಾಕೇಶ್ ಕಿಶೋರ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ನಡೆಸಬೇಕು ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಸುಪ್ರೀಂ ಕೋರ್ಟ್‌ನ ವಕೀಲರ ಸಂಘದ ಮುಖ್ಯಸ್ಥ ವಿಕಾಸ್ ಸಿಂಗ್ ಅವರು ಕೋರಿದರು.

ಅಕ್ಟೋಬರ್ 6ರಂದು ನಡೆದ ಘಟನೆ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ವಿಭಿನ್ನ ರೀತಿಯ ಪ್ರತಿಕ್ರಿಯೆಗಳು ಬರುತ್ತಿವೆ. ಹೀಗಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ವಿಷಯ ಪ್ರಕಟಣೆಗೆ ಪ್ರತಿಬಂಧಕಾಜ್ಞೆ ನೀಡುವಂತೆ ಮೆಹ್ತಾ ಮತ್ತು ಸಿಂಗ್ ಒತ್ತಾಯಿಸಿದರು.

ಮೂಲಭೂತ ಹಕ್ಕಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವು ಇತರರ ಸಮಗ್ರತೆ ಮತ್ತು ಘನತೆಗೆ ಧಕ್ಕೆ ತರುವಂತೆ ಇರಬಾರದು ಎಂದು ಪೀಠ ಇದೇ ವೇಳೆ ತಿಳಿಸಿತು.

ನ್ಯಾಯಾಂಗ ನಿಂದನೆ ಪ್ರಕರಣವನ್ನು ತುರ್ತಾಗಿ ಪಟ್ಟಿ ಮಾಡಲು ನಿರಾಕರಿಸಿದ ಪೀಠವು, 'ವಾರದ ಬಳಿಕ ನೋಡೋಣ' ಎಂದು ಹೇಳಿತು.

ಒಡಿಂಗಾ ಅಂತಿಮದರ್ಶನ; ನೂಕುನುಗ್ಗಲು

ನೈರೋಬಿ, ಕೆನ್ಯಾ(ಎಪಿ): ಭಾರತದಲ್ಲಿ ಬುಧವಾರ ಕೊನೆಯುಸಿರೆಳೆದಿದ್ದ ಕೆನ್ಯಾದ ಮಾಜಿ ಪ್ರಧಾನಿ ಹಾಗೂ ಆಫ್ರಿಕಾದ ಪ್ರಸಿದ್ಧ ರಾಜಕಾರಣಿ ರೈಲಾ ಒಡಿಂಗಾ ಅವರ ಮೃತದೇಹವನ್ನು ಗುರುವಾರ ರಾಜಧಾನಿ ನೈರೋಬಿಗೆ ತರಲಾಗಿದ್ದು, ಲಕ್ಷಾಂತರ ಮಂದಿ ನೆಚ್ಚಿನ ಜನನಾಯಕನಿಗೆ ಕಂಬನಿ ಮಿಡಿದರು.

ಇಲ್ಲಿನ ವಿಮಾನ ನಿಲ್ದಾಣಕ್ಕೆ ಚಾರ್ಟೆಡ್ ವಿಮಾನದಲ್ಲಿ ತಂದ ಮೃತದೇಹಕ್ಕೆ ಜಲಫಿರಂಗಿ ಮೂಲಕ ಗೌರವ ಸಲ್ಲಿಸಲಾಯಿತು. ಅಲ್ಲಿಂದ ಸೀದಾ ಸಂಸತ್ ಭವನಕ್ಕೆ ಕೊಂಡೊಯ್ಯಲಾಯಿತು. ರಸ್ತೆಯುದ್ದಕ್ಕೂ ನಿಂತಿದ್ದ ಲಕ್ಷಾಂತರ ಮಂದಿ ನೆಚ್ಚಿನ ನಾಯಕನಿಗೆ ಗೌರವ ಸಲ್ಲಿಸಿದರು.

ಆಯುರ್ವೇದ ಚಿಕಿತ್ಸೆ ಪಡೆಯಲು ಭಾರತಕ್ಕೆ ಬಂದಿದ್ದ ಒಡಿಂಗಾ ಅವರು ಹೃದಯಸ್ತಂಭನದಿಂದ ಕೇರಳದ ಎರ್ನಾಕುಲಂನ ಕೊತ್ತಾಟ್ಟುಕುಳಂನಲ್ಲಿ ಬುಧವಾರ ಮೃತಪಟ್ಟರು. ಒಡಿಂಗಾ ಅವರಿಗೆ ಪತ್ನಿ ಇಡಾ, ಮೂವರು ಮಕ್ಕಳು ಇದ್ದಾರೆ. ಅವರ ಹಿರಿಯ ಪುತ್ರ ಫಿಡೆಲ್ 2015ರಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರು.



ರೈಲಾ ಒಡಿಂಗಾ ಅವರ ಮೃತದೇಹದ ಅಂತಿಮ ದರ್ಶನ ಪಡೆಯಲು ನೈರೋಬಿಯಲ್ಲಿ ಸೇರಿದ್ದ ಭಾರಿ ಸಂಖ್ಯೆಯ ಅಭಿಮಾನಿಗಳು–ಎಎಫ್‌ಪಿ ಚಿತ್ರ


ಭಾನುವಾರ ಅಂತ್ಯಕ್ರಿಯೆ: ಸರ್ಕಾರಿ ಗೌರವಗಳೊಂದಿಗೆ ಒಡಿಂಗಾ ಅವರ ಅಂತ್ಯಕ್ರಿಯೆಯು ಅವರ ದೇಶದ ಪಶ್ಚಿಮ ಭಾಗ ನಗರ 'ಬೊಂಡೊದಲ್ಲಿ' ಭಾನುವಾರ ನೆರವೇರಲಿದೆ. 72 ಗಂಟೆಗಳ ಒಳಗಾಗಿ ಅವರ ಅಂತ್ಯಕ್ರಿಯೆ ನೆರವೇರಿಸಬೇಕು ಎಂದು ಅವರ ಕುಟುಂಬದ ಸದಸ್ಯರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಶುಕ್ರವಾರ ನೈರೋಬಿಯ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಲು ನಿರ್ಧರಿಸಿದ್ದು, ದೇಶದಾದ್ಯಂತ ರಜೆ ಘೋಷಿಸಲಾಗಿದೆ. ಶನಿವಾರ 'ಕಿಸುಮು' ಪಟ್ಟಣದಲ್ಲಿಯೂ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ.

2018ರಿಂದ 2023ರವರೆಗೆ ಕೆನ್ಯಾದ ಪ್ರಧಾನಿಯಾಗಿದ್ದ ರೈಲಾ ಒಡಿಂಗಾ ಅವರು ದಶಕಗಳ ಕಾಲ ವಿರೋಧ ಪಕ್ಷದ ನಾಯಕರಾಗಿ ಜವಾಬ್ದಾರಿ ನಿರ್ವಹಿಸಿದ್ದರು. 2010ರಲ್ಲಿ ಅಂಗೀಕರಿಸಲ್ಪಟ್ಟ ಸಂವಿಧಾನ ಜಾರಿ ಅಭಿಯಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸುಮಾರು ಐದು ಬಾರಿ ದೇಶದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಸೋಲುಂಡಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,323
ಇಂದಿನ ಅಂತ್ಯ:	25,585
ದಿನದ ಕನಿಷ್ಠ:	25,625
	261

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹575
	12 ಕ್ಕೆ	₹78
ಮೈಸೂರು:	100 ಕ್ಕೆ	₹578

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹285-615
ದ್ವಿತಳಿ (ಬಿ.ವಿ)	₹455-766

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹165

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1600
ಮಧ್ಯಮ	₹500-1000
ಸಣ್ಣ	₹100-500

ರಷ್ಯಾದಿಂದ ಆಮದು ತಕ್ಷಣಕ್ಕೆ ನಿಲ್ಲದು

ಆಮದು ನಿಲ್ಲಿಸುವ ಬಗೆಗಿನ ಟ್ರಂಪ್ ಹೇಳಿಕೆ ವಿಚಾರವಾಗಿ ತಜ್ಞರ ಅನಿಸಿಕೆ



ನವದೆಹಲಿ (ಪಿಟಿಐ): ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದನ್ನು ತಕ್ಷಣಕ್ಕೆ ನಿಲ್ಲಿಸುವುದು ಸಾಧ್ಯವಾಗದ ಕೆಲಸ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕಚ್ಚಾ ತೈಲ ಆಮದು ಬಗ್ಗೆ 4-6 ವಾರಗಳ ಮೊದಲೇ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಹೀಗಾಗಿ, ಕನಿಷ್ಠಪಕ್ಷ ನವೆಂಬರ್ ಅಂತ್ಯದವರೆ ಗಿನ ಆಮದು ಬಗ್ಗೆ ಈಗಾಗಲೇ ಒಪ್ಪಂದ ಆಗಿರುತ್ತದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿರುವುದು ನಿಜ ಎಂದಾದರೆ, ರಷ್ಯಾದಿಂದ ಕಚ್ಚಾ ತೈಲ ಆಮದು ನವೆಂಬರ್ ಮೂರನೆಯ ಅಥವಾ ನಾಲ್ಕನೆಯ ವಾರದಿಂದ ಕೊನೆಗೊಳ್ಳಬಹುದು ಎಂದು ತಜ್ಞರು ಹೇಳಿದ್ದಾರೆ.

'ರಷ್ಯಾದಿಂದ ಕಚ್ಚಾ ತೈಲ ಖರೀದಿ ನಿಲ್ಲಿಸಲು ಭಾರತ ಒಪ್ಪಿದೆ' ಎಂದು ಟ್ರಂಪ್ ಅವರು ಹೇಳಿರುವುದು ರಾಜಕೀಯ ಮಾತಿನಂತೆ ಕಾಣುತ್ತಿದೆ ಎಂದು ವಿಶ್ಲೇಷಣಾ ಸಂಸ್ಥೆ ಕೆಪ್ಲರ್ ಹೇಳಿದೆ. ಆಮದು ನಿಲ್ಲಿಸುವ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತ ಹೇಳಿಕೆ ನೀಡಿಲ್ಲ.

> ದೇಶಿ ತೈಲ ಸಂಸ್ಕರಣಾ ಕಂಪನಿಗಳು ಹಣಕಾಸಿನ ಲೆಕ್ಕಾಚಾರ ಹಾಗೂ ಲಭ್ಯತೆಯನ್ನು ಆಧರಿಸಿ ವಿವಿಧ ಮೂಲಗಳಿಂದ ಖರೀದಿ ಮುಂದುವರಿಸಲಿವೆ
>
> **ಪ್ರಶಾಂತ್ ವಸಿಷ್ಠ,**
> ಐಸಿಆರ್‌ಎ ಸಂಸ್ಥೆಯ ಹಿರಿಯ ಉಪಾಧ್ಯಕ್ಷ

ಅಕ್ಟೋಬರ್‌ನಲ್ಲಿ ಭಾರತವು ರಷ್ಯಾದಿಂದ ದಿನಕ್ಕೆ 18 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿಸಿದೆ ಎಂದು ಕೆಪ್ಲರ್ ಅಂದಾಜು ಮಾಡಿದೆ. ಸೆಪ್ಟೆಂಬರ್‌ನಲ್ಲಿ ಖರೀದಿಸುತ್ತಿದ್ದ ಮಟ್ಟಕ್ಕೆ ಹೋಲಿಸಿದರೆ ಇದು ದಿನಕ್ಕೆ 2.50 ಲಕ್ಷ ಬ್ಯಾರಲ್‌ನಷ್ಟು ಹೆಚ್ಚು.

ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಖರೀದಿಯು ತುಸು ಕಡಿಮೆ ಆಗಿದ್ದಕ್ಕೆ ಕಾರಣ ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿದ ಸುಂಕ ಅಲ್ಲ. ಅದಕ್ಕೆ ಇತರ ಕಾರಣಗಳಿದ್ದವು, ಅದರಲ್ಲೂ ಮುಖ್ಯವಾಗಿ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಘಟಕಗಳಲ್ಲಿ ವಾರ್ಷಿಕ ನಿರ್ವಹಣಾ ಚಟುವಟಿಕೆಗಳು ಕಾರಣವಾಗಿದ್ದವು.

ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವಲ್ಲಿ ಎರಡನೆಯ ಸ್ಥಾನದಲ್ಲಿ ಇರುವ ಭಾರತವು ಆಮದನ್ನು ನಿಲ್ಲಿಸಿದರೆ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 100 ಡಾಲರ್‌ವರೆಗೆ ಹೆಚ್ಚಳವಾಗುವ ಅಪಾಯ ಇದೆ. ಇದರ ಪರಿಣಾಮವಾಗಿ ಹಣದುಬ್ಬರವು ಜಗತ್ತಿನೆಲ್ಲೆಡೆ ಏರಿಕೆ ಕಾಣಬಹುದು ಎಂದು ತಜ್ಞರು ಭೀತಿ ವ್ಯಕ್ತಪಡಿಸಿದ್ದಾರೆ.

ರಷ್ಯಾದ ಕಚ್ಚಾ ತೈಲ ಆಮದು ನಿಲ್ಲಿಸಬೇಕು ಎಂದಾದರೆ ಭಾರತದ ಕಂಪನಿಗಳು ದೊಡ್ಡ ಮಟ್ಟದಲ್ಲಿ ಆರ್ಥಿಕ ಲಾಭವನ್ನು ಬಿಟ್ಟುಕೊಡಬೇಕಾಗುತ್ತದೆ. ಒಂದು ಅಂದಾಜಿನ ಪ್ರಕಾರ ದೇಶದ ವಾರ್ಷಿಕ ಆಮದು ವೆಚ್ಚವು 5 ಬಿಲಿಯನ್ ಡಾಲರ್‌ವರೆಗೆ (ಅಂದಾಜು ₹43 ಸಾವಿರ ಕೋಟಿ) ಹೆಚ್ಚಬಹುದು.

ಇನ್ಫೊಸಿಸ್ ಲಾಭ, ವರಮಾನ ಹೆಚ್ಚಳ

ಷೇರುದಾರರಿಗೆ ₹23 ಮಧ್ಯಂತರ ಲಾಭಾಂಶ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಸೇವಾ ಕಂಪನಿ ಇನ್ಫೊಸಿಸ್ ಸೆಪ್ಟೆಂಬರ್ ತ್ರೈಮಾಸಿಕದ ಹಣಕಾಸು ಫಲಿತಾಂಶವನ್ನು ಗುರುವಾರ ಪ್ರಕಟಿಸಿದ್ದು, ಹಿಂದಿನ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಲಾಭವು ಶೇಕಡ 13.2ರಷ್ಟು ಹೆಚ್ಚಳ ಕಂಡಿದೆ.

ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹6,506 ಕೋಟಿ ಲಾಭ ಗಳಿಸಿತ್ತು. ಈ ಬಾರಿ ಲಾಭವು ₹7,364 ಕೋಟಿಗೆ ಹೆಚ್ಚಳ ಆಗಿದೆ. ಕಂಪನಿಯು ತನ್ನ ಷೇರುದಾರರಿಗೆ ಪ್ರತಿ ಷೇರಿಗೆ ₹23ರಷ್ಟು ಮಧ್ಯಂತರ ಲಾಭಾಂಶ ನೀಡುವುದಾಗಿ ಘೋಷಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿ ₹21ರಷ್ಟು ಲಾಭಾಂಶ ನೀಡಿತ್ತು.

ನಗರದ ಇನ್ಫೊಸಿಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಕಂಪನಿಯ ಸಿಇಒ ಸಲೀಲ್ ಪಾರೇಖ್ ಈ ವಿವರ ನೀಡಿದರು. ಕಂಪನಿಯ ವರಮಾನವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹44,490 ಕೋಟಿ ಆಗಿದೆ. ಹಿಂದಿನ ವರ್ಷದಲ್ಲಿ ಇದು ₹40,986 ಕೋಟಿ ಆಗಿತ್ತು. ವರಮಾನದಲ್ಲಿ ಶೇ 8.6ರಷ್ಟು ಹೆಚ್ಚಳ ಆಗಿದೆ.



> ಇನ್ಫೊಸಿಸ್ ಕೃತಕ ಬುದ್ಧಿಮತ್ತೆ (ಎ.ಐ) ಸಾಮರ್ಥ್ಯವನ್ನು ದೊಡ್ಡ ಮಟ್ಟದಲ್ಲಿ ಹೆಚ್ಚಿಸುತ್ತಿದೆ. ದೊಡ್ಡ ಕಂಪನಿಗಳ ಜೊತೆ ಎ.ಐ ವಿಚಾರವಾಗಿ ಕಂಪನಿಯು ಪಾಲುದಾರಿಕೆ ಹೊಂದಿದೆ
>
> **ಸಲೀಲ್ ಪಾರೇಖ್**
> ಸಿಇಒ, ಇನ್ಫೊಸಿಸ್

ಮುಂಬರುವ ದಿನಗಳಲ್ಲಿ ತನ್ನ ವಹಿವಾಟು ಇನ್ನಷ್ಟು ಸುಧಾರಣೆ ಕಾಣುವ ವಿಶ್ವಾಸವನ್ನು ಕಂಪನಿಯು ವ್ಯಕ್ತಪಡಿಸಿದೆ. ಪ್ರಸಕ್ತ ಹಣಕಾಸು ವರ್ಷಕ್ಕೆ ವರಮಾನ ಹೆಚ್ಚಳವು ಶೇ 2-3ರ ಮಟ್ಟದಲ್ಲಿ ಇರಲಿದೆ ಎಂದು ಕಂಪನಿಯು ಅಂದಾಜು ಮಾಡಿದೆ. ಈ ಹಿಂದೆ ಕಂಪನಿಯು ವರಮಾನ ಹೆಚ್ಚಳದ ಅಂದಾಜನ್ನು ಶೇ 1-3ರ ಮಟ್ಟದಲ್ಲಿ ಇರಿಸಿತ್ತು. ಅಂದರೆ, ಕಂಪನಿಯು ತನ್ನ ವರಮಾನದ ಹೆಚ್ಚಳವು ಜಾಸ್ತಿ ಆಗಬಹುದು ಎಂದು ಅಂದಾಜು ಮಾಡಿದಂತಾಗಿದೆ.

ಅಮೆರಿಕವು ಎಚ್‌1-ಬಿ ವೀಸಾ ಶುಲ್ಕವನ್ನು ಹೆಚ್ಚಿಸಿರುವುದರ ಪರಿಣಾಮ ವಾಗಿ ಕಂಪನಿಯ ಕೆಲಸಗಳ ಮೇಲೆ ಪರಿಣಾಮ ಉಂಟಾಗುವುದೇ ಎಂಬ ಪ್ರಶ್ನೆಗೆ ಅವರು, 'ಯಾವುದೇ ಅಡತಡೆ ಗಳು ಇಲ್ಲದೆ ನಾವು ನಮ್ಮ ಗ್ರಾಹಕರಿಗೆ ಸೇವೆ ಒದಗಿಸುತ್ತಿದ್ದೇವೆ' ಎಂದರು.

ಕಂಪನಿಯು ಹುಬ್ಬಳ್ಳಿಯ ಕ್ಯಾಂಪಸ್‌ನಲ್ಲಿ ಸ್ಥಳೀಯರನ್ನು ನೇಮಕ ಮಾಡಿಕೊಳ್ಳುತ್ತಿದೆ. ಆದರೆ ಸ್ಥಳೀಯರನ್ನು ಎಷ್ಟು ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳ ಲಾಗುತ್ತಿದೆ ಎಂಬುದರ ವಿವರ ನೀಡಲಾಗದು ಎಂದು ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಜಯೇಶ್ ಸಂಘರಾಜ್ಕಾ ಹೇಳಿದರು.

ಹಸಿ ಅಡಿಕೆಗೂ ಭಾರಿ ಬೇಡಿಕೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಈ ವರ್ಷ ಸರಕು ಅಡಿಕೆ ಬೆಲೆಯು ದಾಖಲೆ ಮಟ್ಟಕ್ಕೆ ಏರಿಕೆಯಾಗಿದೆ. ಇಲ್ಲಿನ ಎಪಿಎಂಸಿಯಲ್ಲಿ ಗುರುವಾರ ಸರಕು (ಹಸ) ಅಡಿಕೆ ದರ ಕ್ವಿಂಟಲ್‌ಗೆ ₹99,999, ಬೆಟ್ಟೆ ಕ್ವಿಂಟಲ್‌ಗೆ ₹77,770 ಹಾಗೂ ರಾಶಿ ಅಡಿಕೆ ಕ್ವಿಂಟಲ್‌ಗೆ ₹66,899ಕ್ಕೆ ಮಾರಾಟವಾಗಿದೆ. ಮೇ 13ರಂದು ಸರಕು ಅಡಿಕೆ ಕ್ವಿಂಟಲ್‌ಗೆ ₹98,896 ದಾಖಲೆಯ ಮೊತ್ತಕ್ಕೆ ಮಾರಾಟವಾಗಿತ್ತು.

ಹಸಿ ಅಡಿಕೆಗೂ ಭರ್ಜರಿ ಬೆಲೆ: ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಳದ ಕಾರಣ ಕೇಣಿದಾರರು ಬೆಳೆಗಾರರ ಮನೆ ಬಾಗಿಲಿಗೆ ಬಂದು ಹಸಿ ಅಡಿಕೆ ಖರೀದಿ ಮಾಡುತ್ತಿದ್ದಾರೆ. ಹಸಿ ಅಡಿಕೆ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರಿನಲ್ಲಿ ಕ್ವಿಂಟಲ್‌ಗೆ ₹7,500, ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹8,500 ಹಾಗೂ ದಾವಣಗೆರೆಯಲ್ಲಿ ಕ್ವಿಂಟಲ್‌ಗೆ ₹8,300ಕ್ಕೆ ಮಾರಾಟವಾಗಿದೆ.

'ದೀಪಾವಳಿ ಸಂದರ್ಭದಲ್ಲಿ ಗುಟ್ಕಾ, ಪಾನ್ ಮಸಾಲ ಕಂಪನಿಯವರು ಉತ್ಪಾದನೆ ಹೆಚ್ಚಿಸುತ್ತಾರೆ. ಇದರಿಂದ ಅಡಿಕೆಗೆ ಬೇಡಿಕೆ ಹೆಚ್ಚಾಗಿದೆ. ಈಗ ಬೆಳೆಗಾರರ ಬಳಿ ಹಳೆಯ ಅಡಿಕೆ ದಾಸ್ತಾನು ಇಲ್ಲ. ವಿಪರೀತ ಮಳೆಯಿಂದ ಬಯಲು ಸೀಮೆಯಲ್ಲಿ ಶೇ 30ರಷ್ಟು ಹಾಗೂ ಮಲೆನಾಡಿನಲ್ಲಿ ಶೇ 50ರಷ್ಟು ಇಳುವರಿ ಕಡಿಮೆಯಾಗಿದೆ. ಬೇಡಿಕೆಯಷ್ಟು ಅಡಿಕೆ ಸಿಗದ ಕಾರಣ ಬೆಲೆ ಸಹಜವಾಗಿ ಹೆಚ್ಚಳವಾಗಿದೆ' ಎಂದು ಶಿವಮೊಗ್ಗದ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘದ (ಮ್ಯಾಮ್ಕೋಸ್) ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ್ ಬರುವಾ ಹೇಳುತ್ತಾರೆ.

ಅಡಿಕೆ ಧಾರಣೆ

ಚಿತ್ರದುರ್ಗ		ಕೋಕ	17120-38699		
ಆಪಿ	64419-64829	ಕೆಂಪುಗೋಟು	23399-42399	ತಟ್ಟಿಬೆಟ್ಟೆ	33000-58699
ಬೆಟ್ಟೆ	39659-40089	ರಾಶಿ	42299-67870	**ಶಿರಸಿ**	
ಕೆಂಪುಗೋಟು	34609-35010	ಸಿಪ್ಪೆಗೋಟು	10022-23388	ಬೆಟ್ಟೆ	40199-54099
ರಾಶಿ	63939-64369	**ಶಿವಮೊಗ್ಗ**		ಬಿಳಿಗೋಟು	29009-39301
ಕುಮಟಾ		ಬೆಟ್ಟೆ	60010-75009	ಚಾಲಿ	42599-48099
ಚಾಲಿ	38699-46539	ಗೊರಬಲು	19001-46315	ಕೆಂಪುಗೋಟು	34099-37709
ಚಿಪ್ಪು	24177-35769	ಹೊಸತು	62009-66809	ರಾಶಿ	52618-61499
ಕೋಕ	6000-30199	ರಾಶಿ	52559-66889	**ಯಲ್ಲಾಪುರ**	
ಹಳೆಚಾಲಿ	37399-37399	ಸರಕು	62700-96510	ಆಪಿ	74699-74699
ಪುತ್ತೂರು		**ಸಿದ್ದಾಪುರ**		ಬಿಳಿಗೋಟು	17109-38694
ಕೋಕ	20000-30500	ಬಿಳಿಗೋಟು	25899-35700	ಚಾಲಿ	38039-47805
ಹೊಸತು	26000-36000	ಚಾಲಿ	41099-46099	ಕೋಕ	12009-28799
ಸಾಗರ		ಕೋಕ	22619-32319	ಕೆಂಪುಗೋಟು	20089-35499
ಬಿಳಿಗೋಟು	15099-34570	ಕೆಂಪುಗೋಟು	24000-37000	ರಾಶಿ	53290-65619
ಚಾಲಿ	28999-43470	ರಾಶಿ	53000-61599	ತಟ್ಟಿಬೆಟ್ಟೆ	39919-50160

ಚಿಟಿಕೆ ಸುದ್ದಿ

ಬೆಳ್ಳಿ ಧಾರಣೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರದ ವಹಿವಾಟಿನಲ್ಲಿ ಚಿನ್ನದ ದರ ಇಳಿಕೆ-ಯಾಗಿದ್ದರೆ, ಬೆಳ್ಳಿ ದರ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹200ರಷ್ಟು ಇಳಿಕೆಯಾಗಿ, ₹1,31,600ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ, ₹1.31 ಲಕ್ಷ ಆಗಿದೆ. ಆದರೆ, ಬೆಳ್ಳಿ ಧಾರಣೆ ಕೆ.ಜಿಗೆ ₹2 ಸಾವಿರ ಏರಿಕೆಯಾಗಿ, ₹1.84 ಲಕ್ಷ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಲಾಭದ ಗಳಿಕೆಗಾಗಿ ವರ್ತಕರು ಚಿನ್ನ ಮಾರಾಟಕ್ಕೆ ಮುಂದಾಗಿದ್ದರಿಂದ ಚಿನ್ನದ ದರ ಇಳಿಕೆಯಾಗಿದೆ ಎಂದು ತಿಳಿಸಿದೆ.

ವಿಪ್ರೊಗೆ ₹3,246 ಕೋಟಿ ಲಾಭ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಮಾಹಿತಿ ತಂತ್ರಜ್ಞಾನ ಸೇವಾ ಕಂಪನಿ ವಿಪ್ರೊ ₹3,246 ಕೋಟಿ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿ ₹3,208 ಕೋಟಿ ನಿವ್ವಳ ಲಾಭ ಗಳಿಸಿತ್ತು. ವರಮಾನ ಶೇ 1.7ರಷ್ಟು ಹೆಚ್ಚಳವಾಗಿ, ₹22,697 ಕೋಟಿ ಗಳಿಸಿದೆ ಎಂದು ಕಂಪನಿ ಗುರುವಾರ ಷೇರುಪೇಟೆಗೆ ತಿಳಿಸಿದೆ.

ಬ್ಯಾಟರಿ ಇಂಧನ ಸಂಗ್ರಹಣಾ ಮಾರುಕಟ್ಟೆಗೆ ಓಲಾ

ಬೆಂಗಳೂರು: ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ತಯಾರಿಕಾ ಕಂಪನಿ ಓಲಾ ಎಲೆಕ್ಟ್ರಿಕ್, ಬ್ಯಾಟರಿ ಇಂಧನ ಸಂಗ್ರಹಣಾ ಮಾರುಕಟ್ಟೆಯನ್ನು ಪ್ರವೇಶಿಸಿದೆ.

ಈಗ ಈ ಮಾರುಕಟ್ಟೆಯ ಗಾತ್ರವು ₹1 ಲಕ್ಷ ಕೋಟಿ ಎಂದು ಅಂದಾಜಿಸಲಾಗಿದೆ. ಇದು ಮುಂದಿನ ಐದು ವರ್ಷಗಳಲ್ಲಿ ₹3 ಲಕ್ಷ ಕೋಟಿಗೆ ಹೆಚ್ಚಾಗುವ ನಿರೀಕ್ಷೆ ಇದೆ.

ಓಲಾ ಎಲೆಕ್ಟ್ರಿಕ್ ಕಂಪನಿಯು ತಾನು ಆರಂಭಿಸಿರುವ ಬ್ಯಾಟರಿ ಇಂಧನ ಸಂಗ್ರಹಣಾ ವ್ಯವಸ್ಥೆಗೆ 'ಓಲಾ ಶಕ್ತಿ' ಎಂಬ ಹೆಸರಿಟ್ಟಿದೆ. 'ಭಾರತದಲ್ಲಿ ಇಂಧನದ ಕೊರತೆ ಇಲ್ಲ. ಇಂಧನದ ಸಂಗ್ರಹಣಾ ವ್ಯವಸ್ಥೆಯು ಇಲ್ಲಿ ಸಮರ್ಪಕವಾಗಿ ಇಲ್ಲ. ಓಲಾ ಶಕ್ತಿ ಮೂಲಕ ನಾವು ಅವಕಾಶವನ್ನು ಇಂಧನ ಸ್ವಾತಂತ್ರ್ಯವನ್ನಾಗಿ ಪರಿವರ್ತಿ-ಸುತ್ತಿದ್ದೇವೆ' ಎಂದು ಓಲಾ ಎಲೆಕ್ಟ್ರಿಕ್ ಅಧ್ಯಕ್ಷ ಹಾಗೂ ಎಂ.ಡಿ. ಭವೀಶ್ ಅಗರ್ವಾಲ್ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

16-10-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1410)
ಒಂದು ವಾರದ ಡೆಲಿವರಿ	1410 (1405)
ಪಾಮ್ ವಾರದ ಡೆಲಿವರಿ	1283 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1415)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,27,500 (1,26,500)
ಬೆಳ್ಳಿ ಕೆ.ಜಿಗೆ	1,73,800 (1,78,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1405 (1400)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1475 (1475)
ಪಾಮೋಲಿನ್	₹1285 (1285)

ಟಾರ್ಪಿಡೋಸ್‌ಗೆ ಐದನೇ ಜಯ

ಹೈದರಾಬಾದ್ (ಪಿಟಿಐ): ತೀವ್ರ ಸವಾಲು ಎದುರಿಸಿದ ಬೆಂಗಳೂರು ಟಾರ್ಪಿಡೋಸ್ ತಂಡ, ಬುಧವಾರ ರಾತ್ರಿ ನಡೆದ ಪ್ರೈಮ್ ವಾಲಿಬಾಲ್ ಲೀಗ್ ಪಂದ್ಯದಲ್ಲಿ ಕ್ಯಾಲಿಕಟ್ ಹೀರೋಸ್ ತಂಡವನ್ನು 20–18, 20–18, 7–15, 11–15, 15–12 ರಿಂದ ಸೋಲಿಸುವಲ್ಲಿ ಯಶಸ್ವಿ ಆಯಿತು.

ಇದು ಬೆಂಗಳೂರಿನ ತಂಡಕ್ಕೆ ಐದನೇ ಜಯ.

ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ರಕ್ಷಣಾ ಆಟದಲ್ಲಿ ಅಮೋಘ ಆಟದ ಪ್ರದರ್ಶನ ನೀಡಿದ ಕ್ಯಾಲಿಕಟ್ ತಂಡದ ಶಮೀಮುದ್ದೀನ್ 'ಪಂದ್ಯದ ಆಟಗಾರ' ಗೌರವಕ್ಕೆ ಪಾತ್ರರಾದರು. ಬ್ಯಾಡ್ಮಿಂಟನ್ ತಾರೆ ಎಚ್‌.ಎಸ್.ಪ್ರಣಯ್ ಅವರು ಪ್ರೇಕ್ಷಕರ ಸಾಲಿನಲ್ಲಿದ್ದರು.

ಸೆಮಿಗೆ ಅಲಿಸಾ ಹೀಲಿ ಬಳಗ

ವಿಶಾಖಪಟ್ಟಣ (ಪಿಟಿಐ): ನಾಯಕಿ ಅಲಿಸಾ ಹೀಲಿ ಅವರ ಅಜೇಯ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ ಬಾಂಗ್ಲಾದೇಶ ಎದುರು ಸುಲಭ ಜಯ ಸಾಧಿಸಿತು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

ಎಸಿಎ-ವಿಡಿಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ 199 ರನ್‌ಗಳ ಗೆಲುವಿನ ಗುರಿಯನ್ನು ಆಸ್ಟ್ರೇಲಿಯಾ 24.5 ಓವರ್‌ಗಳಲ್ಲಿ ತಲುಪಿತು. 10 ವಿಕೆಟ್‌ಗಳ ಜಯ ಸಾಧಿಸಿತು. ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವು 5 ಪಂದ್ಯಗಳಲ್ಲಿ 4ರಲ್ಲಿ ಜಯಿಸಿದೆ. ಒಂದು ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಒಟ್ಟು 9 ಅಂಕ ಗಳಿಸಿರುವ ತಂಡವು ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿತು. ಬಾಂಗ್ಲಾ ತಂಡವು ಸತತ ನಾಲ್ಕನೇ ಪಂದ್ಯದಲ್ಲಿ ಸೋಲುಂಡಿತು.

ಟಾಸ್ ಗೆದ್ದ ಬಾಂಗ್ಲಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಶೋಭನಾ ಮೊಸ್ತಾರಿ (ಔಟಾಗದೆ 66; 80ಎ, 4X9) ಅವರ ಏಕಾಂಗಿ ಹೋರಾಟದಿಂದ 50 ಓವರ್‌ಗಳಲ್ಲಿ 9ಕ್ಕೆ 198 ರನ್ ಗಳಿಸಿದರು. ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡದ ನಾಯಕಿ ಅಲಿಸಾ (ಔಟಾಗದೆ 113; 77ಎ, 4X20) ವಿಶ್ವಕಪ್ ಇತಿಹಾಸದಲ್ಲಿಯೇ ಎರಡನೇ ಅತಿ ವೇಗದ ಶತಕ ದಾಖಲಿಸಿದರು. ಅವರಿಗೆ ಫೋಬಿ ಲಿಚ್‌ಫೀಲ್ಡ್ (ಔಟಾಗದೆ 84; 72ಎ, 4X12, 6X1) ಉತ್ತಮ ಜೊತೆ ನೀಡಿದರು. ಇದರಿಂದಾಗಿ ತಂಡವು 24.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 202 ರನ್ ಗಳಿಸಿತು.

ಅಲಿಸಾ ಅವರಿಗೆ ಇದು ಸತತ ಎರಡನೇ ಶತಕ. ಕಳೆದ ಪಂದ್ಯದಲ್ಲಿ ಭಾರತದ ಎದುರಿನ ಪಂದ್ಯದಲ್ಲಿ ಅಪೂರ್ವದ ಶತಕ ದಾಖಲಿಸಿದ್ದರು. ಅಲಿಸಾ ಮತ್ತು ಲಿಚ್‌ಫೀಲ್ಡ್ ಅವರನ್ನು ಕಟ್ಟಿಹಾಕುವ ಬಾಂಗ್ಲಾ ಬೌಲರ್‌ಗಳ ಪ್ರಯತ್ನಗಳು ಫಲ ಕೊಡಲಿಲ್ಲ. ಇಬ್ಬರೂ ಬ್ಯಾಟರ್‌ಗಳು ನಿರಾಯಾಸವಾಗಿ ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 9ಕ್ಕೆ198 (ರುಬಿಯಾ ಹೈದರ್ 44, ಶರ್ಮಿನ್ ಅಕ್ತರ್ 19, ಶೋಭನಾ ಮೊಸ್ತಾರಿ ಔಟಾಗದೆ 66, ಅನಾಬೆಲ್ ಸದರ್ಲೆಂಡ್ 41ಕ್ಕೆ2, ಅಲನಾ ಕಿಂಗ್ 18ಕ್ಕೆ2, ಜಾರ್ಜಿಯಾ ವೇರ್‌ಹಾಮ್ 22ಕ್ಕೆ2) **ಆಸ್ಟ್ರೇಲಿಯಾ:** 24.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 202 (ಅಲಿಸಾ ಹೀಲಿ ಔಟಾಗದೆ 113, ಫೋಬಿ ಲಿಚ್‌ಫೀಲ್ಡ್ ಔಟಾಗದೆ 84) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 10 ವಿಕೆಟ್‌ಗಳ ಜಯ.

ಪಂದ್ಯಶ್ರೇಷ್ಠ: ಅಲನಾ ಕಿಂಗ್.


ಆಸ್ಟ್ರೇಲಿಯಾ ತಂಡದ ನಾಯಕಿ ಅಲಿಸಾ ಹೀಲಿ ಬ್ಯಾಟಿಂಗ್ ಎಪಿ ಚಿತ್ರ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಇಂದಿನ ಪಂದ್ಯ
ಶ್ರೀಲಂಕಾ-ದಕ್ಷಿಣ ಆಫ್ರಿಕಾ
ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್

ಶ್ರೇಯಸ್ ಆಲ್‌ರೌಂಡ್ ಆಟ

ರಣಜಿ: ರಾಜ್‌ಕೋಟ್‌ನಲ್ಲಿ ಸ್ಪಿನ್ನರ್‌ಗಳದ್ದೇ ಆಟ • ಧರ್ಮೇಂದ್ರಸಿಂಹಗೆ 7 ವಿಕೆಟ್

ರಾಜ್‌ಕೋಟ್: ಸ್ಪಿನ್ ಬೌಲರ್‌ಗಳ ಆಪ್ತಮಿತ್ರನಂತೆ ಇರುವ ಇಲ್ಲಿಯ ಪಿಚ್‌ನಲ್ಲಿ ಕರ್ನಾಟಕದ ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ ತಮ್ಮ ಕೈಚಳಕದ ರುಚಿಯನ್ನು ಸೌರಾಷ್ಟ್ರಕ್ಕೆ ತೋರಿಸಿದ್ದಾರೆ. ಇದಕ್ಕೂ ಮುನ್ನ ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದ ಅವರು ಅರ್ಧಶತಕ ದಾಖಲಿಸಿದರು.


ಧರ್ಮೇಂದ್ರಸಿಂಹ ಜಡೇಜ

ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಲೀಟ್ ಬಿ ಗುಂಪಿನ ಪಂದ್ಯದ ಎರಡನೇ ದಿನವಾದ ಗುರುವಾರ ಸ್ಪಿನ್ನರ್‌ಗಳದ್ದೇ ಆಟ. ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕವನ್ನು 372 ರನ್‌ಗಳಿಗೆ ನಿಯಂತ್ರಿಸುವಲ್ಲಿ ಆತಿಥೇಯ ತಂಡದ ಸ್ಪಿನ್ನರ್ ಧರ್ಮೇಂದ್ರಸಿಂಹ ಜಡೇಜ (124ಕ್ಕೆ7) ಸಫಲರಾದರು. ಇದಕ್ಕೆ ಪ್ರತಿಕ್ರಿಯೆಯಾಗಿ ಬ್ಯಾಟಿಂಗ್ ಮಾಡಿದ ಸೌರಾಷ್ಟ್ರಕ್ಕೆ ಅಮೋಘ ಆರಂಭ ದೊರೆಯಿತು. ಹಾರ್ವಿಕ್ ದೇಸಾಯಿ (41; 104ಎ) ಮತ್ತು ಚಿರಾಗ್ ಜಾನಿ (90; 148ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 135 ರನ್ ಸೇರಿಸಿದರು. ಕರ್ನಾಟಕದ ಯುವ ಸ್ಪಿನ್ನರ್ ಮೊಹಸಿನ್ ಖಾನ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ದೇಸಾಯಿ ಬಿದ್ದರು.

ಇನ್ನೊಂದೆಡೆ ಶತಕದತ್ತ ಸಾಗಿದ್ದ ಚಿರಾಗ್ (90; 148ಎ) ಅವರ ವಿಕೆಟ್ ಕಬಳಿಸುವಲ್ಲಿ ಶ್ರೇಯಸ್ ಯಶಸ್ವಿಯಾದರು. ಕೆಲವೇ ನಿಮಿಷಗಳ ನಂತರ ಜೈ ಗೋಹಿಲ್ (3 ರನ್) ಅವರ ಕ್ಯಾಚ್ ಅನ್ನು ತಮ್ಮದೇ ಬೌಲಿಂಗ್‌ನಲ್ಲಿ ಪಡೆದ ಶ್ರೇಯಸ್ ಮಿಂಚಿದರು. ಅಂಶ್ ಗೋಸಾಯಿ (19; 22ಎ) ಅವರಿಗೂ ಶ್ರೇಯಸ್ ಪೆವಿಲಿಯನ್ ಹಾದಿ ತೋರಿದರು.

ಅರ್ಪಿತ್ ವಸವದಾ (ಬ್ಯಾಟಿಂಗ್ 12) ಮತ್ತು ಪ್ರೇರಕ್ ಮಂಕಡ್ (ಬ್ಯಾಟಿಂಗ್ 20) ಅವರು ವಿಕೆಟ್ ಪತನಕ್ಕೆ ತಡೆಯೊಡ್ಡಿದರು. ಇದರಿಂದಾಗಿ ದಿನದಾಟದ ಮುಕ್ತಾಯಕ್ಕೆ ಸೌರಾಷ್ಟ್ರ ತಂಡವು 60 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 200 ರನ್ ಗಳಿಸಿತು. ಮೊದಲ ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು ಆತಿಥೇಯ ಬಳಗಕ್ಕೆ 172 ರನ್‌ಗಳು ಬೇಕು.

ಶ್ರೇಯಸ್ ಅರ್ಧಶತಕ: ಬೌಲಿಂಗ್‌ನಲ್ಲಿ ಮಿಂಚುವ ಮುನ್ನ ಶ್ರೇಯಸ್ (56; 95ಎ, 4X4, 6X3) ಬ್ಯಾಟಿಂಗ್‌ನಲ್ಲಿಯೂ ಮಿಂಚಿದರು. ಅರ್ಧಶತಕ ಗಳಿಸಿ ತಂಡದ ಮೊತ್ತವು ಹೆಚ್ಚುವಂತೆ ನೋಡಿಕೊಂಡರು. ಅಲ್ಲದೇ ಅವರು ಆರ್. ಸ್ಮರಣ್ (77; 143ಎ) ಅವರೊಂದಿಗೆ ಆರನೇ ವಿಕೆಟ್ ಜತೆಯಾಟದಲ್ಲಿ 110 ರನ್ ಸೇರಿಸಿದರು.

ಮೊದಲ ದಿನದಾಟದಲ್ಲಿ ಕರ್ನಾಟಕ ತಂಡವು 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 295 ರನ್ ಗಳಿಸಿತ್ತು. 66 ರನ್ ಗಳಿಸಿದ್ದ ಸ್ಮರಣ್ ಹಾಗೂ 38 ರನ್ ಹೊಡೆದಿದ್ದ ಶ್ರೇಯಸ್ ಕ್ರೀಸ್‌ನಲ್ಲಿದ್ದರು. ಎರಡನೇ ದಿನದಾಟದ ಬೆಳಿಗ್ಗೆ ತಾಳ್ಮೆ ಮತ್ತು ಏಕಾಗ್ರತೆಯಿಂದ ಆಡಿದ ಇಬ್ಬರೂ ಬ್ಯಾಟರ್‌ಗಳು ಬೌಲರ್‌ಗಳಿಗೆ ಸುಲಭದ ತುತ್ತಾಗಲಿಲ್ಲ. ದಿನದ ಎಂಟನೇ ಓವರ್‌ನಲ್ಲಿ ಸ್ಮರಣ್ ಅವರ ವಿಕೆಟ್ ಗಳಿಸುವಲ್ಲಿ ಜಡೇಜ ಯಶಸ್ವಿಯಾದರು.


ಅರ್ಧಶತಕ ಗಳಿಸಿದ ಕರ್ನಾಟಕದ ಶ್ರೇಯಸ್ ಗೋಪಾಲ್ ಬ್ಯಾಟಿಂಗ್ ವೈಖರಿ. ಬೌಲಿಂಗ್‌ನಲ್ಲಿಯೂ ಮಿಂಚಿದ ಅವರು ಮೂರು ವಿಕೆಟ್ ಪಡೆದರು ಪಿಟಿಐ ಚಿತ್ರ

ಶ್ರೇಯಸ್ ತಮ್ಮ ಅರ್ಧಶತಕ ಪೂರ್ಣಗೊಳಿಸಿಕೊಂಡರು. ತುಸು ವೇಗವಾಗಿ ರನ್ ಗಳಿಸಲು ಆರಂಭಿಸಿದ್ದ ಅವರಿಗೆ ಉನದ್ಕತ್ ಕಡಿವಾಣ ಹಾಕಿದರು.

ಗಮನ ಸೆಳೆದ ಶಿಖರ್: ಪದಾರ್ಪಣೆ ಪಂದ್ಯ ಆಡುತ್ತಿರುವ ಶಿಖರ್ ಶೆಟ್ಟಿ ಗಮನ ಸೆಳೆಯುವ ಆಟವಾಡಿದರು. 3 ಸಿಕ್ಸರ್ ಮತ್ತು 4 ಬೌಂಡರಿಗಳಿದ್ದ 41 ರನ್‌ಗಳನ್ನು 57 ಎಸೆತಗಳಲ್ಲಿ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 117.3 ಓವರ್‌ಗಳಲ್ಲಿ 372(ಆರ್.ಸ್ಮರಣ್ 77, ಶ್ರೇಯಸ್ ಗೋಪಾಲ್ 56, ಎಂ.ವೆಂಕಟೇಶ್ 0, ಶಿಖರ್ ಶೆಟ್ಟಿ 41, ಮೊಹಸಿನ್ ಖಾನ್ 1, ಅಭಿಲಾಷ್ ಔಟಾಗದೇ 2, ಜಯದೇವ್ ಉನದ್ಕತ್ 55ಕ್ಕೆ1, ಧರ್ಮೇಂದ್ರಸಿಂಹ ಜಡೇಜ 124ಕ್ಕೆ7, ಗಜರ್ ಸಮರ್ 49ಕ್ಕೆ1) ಸೌರಾಷ್ಟ್ರ: 60 ಓವರ್‌ಗಳಲ್ಲಿ 4ಕ್ಕೆ200(ಹಾರ್ವಿಕ್ ದೇಸಾಯಿ 41, ಚಿರಾಗ್ ಜಾನಿ 90, ಜೈ ಗೊಹಿಲ್ 3, ವಾಸವದಾ ಔಟಾಗದೇ 12, ಅಂಶ್ ಗೊಸಾಯಿ 19, ಪ್ರೇರಕ್ ಔಟಾಗದೇ 20, ಶ್ರೇಯಸ್ ಗೋಪಾಲ್ 51ಕ್ಕೆ3, ಮೊಹಸಿನ್ ಖಾನ್ 38ಕ್ಕೆ1)

ಸಿಂಚನಾಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಎಂ.ಎಸ್. ಸಿಂಚನಾ ಅವರು ತೆಲಂಗಾಣದ ಹನುಮಕೊಂಡದಲ್ಲಿ ಗುರುವಾರ ಆರಂಭಗೊಂಡ ಇಂಡಿಯಾ ಓಪನ್ 23 ವರ್ಷದೊಳಗಿನವರ ಅಥ್ಲೆಟಿಕ್ ಕೂಟದ ಮಹಿಳೆಯರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.

ಲಕ್ಷದ್ವೀಪದ ಮುಬಸ್ಸಿನಾ ಮೊಹಮ್ಮದ್ ಅವರು 6.36 ಮೀ. ಉದ್ದ ಜಿಗಿಯುವುದರೊಂದಿಗೆ ಸ್ವರ್ಣ ಜಯಿಸಿದರೆ, ಸಿಂಚನಾ (6.22 ಮೀ.) ಅವರು ರಜತ ಪದಕ ತಮ್ಮದಾಗಿಸಿಕೊಂಡರು. ಕೇರಳದ ಅಭಿರಾಮಿ ವಿ.ಎಂ. (5.98 ಮೀ) ಕಂಚು ಗೆದ್ದರು.

ಪುರುಷರ 10 ಸಾವಿರ ಮೀ. ಓಟದಲ್ಲಿ ರಾಜ್ಯದ ಶಿವಾಜಿ ಕಾಶುರಾಮ್ ಅವರು ಕಂಚು ಜಯಿಸಿದರು.

ರಿಲೇ ತಂಡಕ್ಕೆ ಪೂವಮ್ಮ ಆಯ್ಕೆ: ಕರ್ನಾಟಕದ ಎಂ.ಆರ್.ಪೂವಮ್ಮ ಹಾಗೂ ಪ್ರಿಯಾ ಮೋಹನ್ ಅವರು ದಕ್ಷಿಣ ಏಷ್ಯಾ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿರುವ ಭಾರತ 4x400ಮೀ. ರಿಲೇ ತಂಡಕ್ಕೆ ಆಯ್ಕೆಯಾಗಿದ್ದಾರೆ.

ರಾಜ್ಯದ ಕೃಷಿಕ್ ಎಂ. (ಪುರುಷರ 110ಮೀ. ಹರ್ಡಲ್ಸ್), ಸುಪ್ರಿಯ ಎಸ್.ಬಿ. (ಮಹಿಳೆಯರ ಹೈಜಂಪ್) ಹಾಗೂ ಕರಿಷ್ಮಾ ಎಸ್.(ಮಹಿಳೆಯರ ಜಾವೆಲಿನ್) ಅವರೂ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಕೂಟವು ರಾಂಚಿಯಲ್ಲಿ ಇದೇ 24ರಂದು ಆರಂಭಗೊಳ್ಳಲಿದೆ.


ಪ್ರಶಸ್ತಿಯೊಂದಿಗೆ ಎಂ.ಎಸ್. ಸಿಂಚನಾ

ಕ್ವಾರ್ಟರ್‌ಫೈನಲ್‌ಗೆ ಲಕ್ಷ್ಯ

ಒಡೆನ್ಸ್, ಡೆನ್ಮಾರ್ಕ್(ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಿಶ್ವದ ಎರಡನೇ ರ‍್ಯಾಂಕ್ ಆಟಗಾರ ಆ್ಯಂಡರ್ಸ್ ಅಂಟಾನಸೆನ್ ವಿರುದ್ಧ ಗೆದ್ದರು. ಇದರೊಂದಿಗೆ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ಲಕ್ಷ್ಯ ಅವರು 21–13, 21–14ರಿಂದ ಆತಿಥೇಯ ದೇಶದ ಆ್ಯಂಡರ್ಸ್ ವಿರುದ್ಧ ಜಯಿಸಿದರು. 53 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ ಲಕ್ಷ್ಯ ಪಾರಮ್ಯ ಮೆರೆದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ 21–19, 21–17ರಿಂದ ತೈವಾನ್‌ನ ಜೆಹುಯ್ ಮತ್ತು ಯಂಗ್ ಪೊಸುವಾನ್ ವಿರುದ್ಧ ಗೆದ್ದು ಎಂಟರ ಘಟ್ಟ ತಲುಪಿದರು.

'ಐಎಎಫ್‌ಎಫ್‌ನಿಂದ ನಂಬಿಕೆ ದ್ರೋಹ'

ನವದೆಹಲಿ (ಪಿಟಿಐ): ಹೊಸದಾಗಿ ವಾಣಿಜ್ಯ ಪಾಲುದಾರನ ಆಯ್ಕೆಗೆ ಟೆಂಡರ್ ಪ್ರಕ್ರಿಯೆ ಪೂರೈಸುವಲ್ಲಿ ವಿಳಂಬ ಮಾಡುವ ಮೂಲಕ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ 'ನಂಬಿಕೆ ದ್ರೋಹ' ಎಸಗಿದೆ ಎಂದು ಐಎಸ್‌ಎಲ್‌ನ ಹತ್ತು ಕ್ಲಬ್‌ಗಳು ಆಕ್ರೋಶ ವ್ಯಕ್ತಪಡಿಸಿವೆ.

ಈ ವಿಷಯಕ್ಕೆ ಸಂಬಂಧಿಸಿ ಫೆಡರೇಷನ್ ತಕ್ಷಣವೇ ಸ್ಪಷ್ಟನೆ ನೀಡಬೇಕು ಎಂದು ಕ್ಲಬ್‌ಗಳು ಪತ್ರಮುಖೇನ ಆಗ್ರಹಿಸಿವೆ.

ಆಗಸ್ಟ್ 28ರಂದು ಎಐಎಫ್‌ಎಫ್ ನಿಯಮಾವಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ವಿಚಾರಣೆ ನಡೆದಿತ್ತು. ಆ ಸಂದರ್ಭದಲ್ಲಿ, ಐಎಸ್‌ಎಲ್ ಆಯೋಜನೆಗೆ ಹೊಸ ಪಾಲುದಾರರ ಆಯ್ಕೆಗೆ ಮುಕ್ತ, ಸ್ಪರ್ಧಾತ್ಮಕ ಮತ್ತು ಪಾರದರ್ಶಕ ರೀತಿಯಲ್ಲಿ ಟೆಂಡರ್ ಕರೆಯುವುದಕ್ಕೆ ಫೆಡರೇಷನ್ ಮತ್ತು ಐಎಸ್‌ಎಲ್ ಆಯೋಜಕರಾದ ಎಫ್‌ಎಸ್‌ಡಿಎಲ್ (ರಿಲಯನ್ಸ್ ಒಡೆತನ) ನಿರ್ಣಯಿಸಿ ಸಮ್ಮತಿ ಸೂಚಿಸಿದ್ದವು.

ಇದರಂತೆ, ಡಿಸೆಂಬರ್‌ನಲ್ಲಿ ಹೊಸ ಲೀಗ್ ಋತು ಆರಂಭಿಸಲು ಅನುಕೂಲವಾಗುವಂತೆ ಐಎಫ್‌ಎಫ್ ಅ. 15ರೊಳಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕಾಗಿತ್ತು. ಆದರೆ ಗಡುವಿನೊಳಗೆ ಪ್ರಕ್ರಿಯೆ ಮುಗಿದಿಲ್ಲ.

ಎಐಎಫ್‌ಎಫ್‌ನ ಉತ್ತರದಾಯಿತ್ವ ಹಾಗೂ ಪಾರದರ್ಶಕತೆ ಕೊರತೆಯು 10 ಕ್ಲಬ್‌ಗಳ (ಚೆನ್ನೈಯಿನ್ ಎಫ್‌ಸಿ, ಪಂಜಾಬ್ ಎಫ್‌ಸಿ, ಹೈದರಾಬಾದ್ ಎಫ್‌ಸಿ, ಬೆಂಗಳೂರು ಎಫ್‌ಸಿ, ಎಫ್‌ಸಿ ಗೋವಾ, ನಾರ್ತ್ ಈಸ್ಟ್ ಯುನೈಟೆಡ್, ಕೇರಳ ಬ್ಲಾಸ್ಟರ್ಸ್, ಒಡಿಶಾ ಎಫ್‌ಸಿ, ಜಮ್ಷೆಡಪುರ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ) ಆಕ್ರೋಶಕ್ಕೆ ಕಾರಣವಾಗಿದೆ.

ನೆಟ್ಸ್‌ನಲ್ಲಿ ವಿರಾಟ್, ರೋಹಿತ್ ತಾಲೀಮು

ಪರ್ತ್ (ಪಿಟಿಐ): ಅನುಭವಿ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಗುರುವಾರ ಅಭ್ಯಾಸ ಆರಂಭಿಸಿದರು.

ನವದೆಹಲಿಯಿಂದ ನಾಯಕ ಶುಭಮನ್ ಗಿಲ್ ಮತ್ತಿತರರೊಂದಿಗೆ ಬುಧವಾರ ಬೆಳಿಗ್ಗೆ ಪ್ರಯಾಣಿಸಿದ್ದ ಇಬ್ಬರೂ ಆಟಗಾರರು ಪರ್ತ್ ತಲುಪಿದ ಕೆಲವು ಗಂಟೆಗಳ ನಂತರ ನೆಟ್ಸ್ ಅಭ್ಯಾಸಕ್ಕೆ ತೆರಳಿದರು. ಹೋದ ಫೆಬ್ರುವರಿಯಲ್ಲಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ನಂತರ ಇಬ್ಬರೂ ಆಟಗಾರರು ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ ಆಡಿಲ್ಲ. ಅವರಿಬ್ಬರೂ ಈಗಾಗಲೇ ಟೆಸ್ಟ್ ಮತ್ತು ಟಿ20 ಮಾದರಿಗಳಿಗೆ ನಿವೃತ್ತಿ ಘೋಷಿಸಿದ್ದಾರೆ.

ಇದೇ 19ರಿಂದ ಆಸ್ಟ್ರೇಲಿಯಾ ಎದುರು ಆರಂಭವಾಗಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಕೊಹ್ಲಿ ಮತ್ತು ರೋಹಿತ್ ಆಡಲಿದ್ದಾರೆ. ಈ ಸರಣಿಯಲ್ಲಿ ಮೂರು ಪಂದ್ಯಗಳು ನಡೆಯಲಿವೆ.

ನೆಟ್ಸ್‌ನಲ್ಲಿ ಇಬ್ಬರೂ ಸುಮಾರು ಅರ್ಧ ಗಂಟೆ ಬ್ಯಾಟಿಂಗ್ ಅಭ್ಯಾಸ ಮಾಡಿದರು. ವೇಗದ ಎಸೆತಗಳನ್ನು ಎದುರಿಸುವ ತಾಲೀಮು ನಡೆಸಿದರು. ತುಸು ಹೊತ್ತು ವ್ಯಾಯಾಮ ಕೂಡ ಮಾಡಿದರು. ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಅವರೊಂದಿಗೆ ಸ್ವಲ್ಪ ಹೊತ್ತು ಮಾತುಕತೆ ನಡೆಸಿದರು. ನಂತರ ಎಡಗೈ ವೇಗಿ ಅರ್ಷದೀಪ್ ಸಿಂಗ್ ಜೊತೆಗೆ ಒಂದಿಷ್ಟು ತಮಾಷೆ ಮಾಡಿಕೊಂಡು ಓಡಾಡಿದರು.

ಶುಕ್ರವಾರ ಮತ್ತು ಶನಿವಾರ ಪೂರ್ಣಪ್ರಮಾಣದಲ್ಲಿ ತಂಡವು ಅಭ್ಯಾಸ ನಡೆಸಲಿದೆ.



ವಿರಾಟ್ ಕೊಹ್ಲಿ (ಎಡ) ಹಾಗೂ ರೋಹಿತ್ ಶರ್ಮಾ ಅವರು ಪರ್ತ್ ಕ್ರೀಡಾಂಗಣದಲ್ಲಿ ಗುರುವಾರ ಅಭ್ಯಾಸ ನಡೆಸಿದರು 'ಎಕ್ಸ್' ಚಿತ್ರ

ರಾಜ್ಯ ಬ್ಯಾಡ್ಮಿಂಟನ್: ಗೌತಮ್‌ಗೆ ಆಘಾತ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಆರನೇ ಶ್ರೇಯಾಂಕದ ಆಟಗಾರ ಗೌತಮ್ ಎಸ್.ನಾಯರ್ ಹಾಗೂ ಎಂಟನೇ ಶ್ರೇಯಾಂಕಿತ ಆದಿತ್ಯ ಜೋಶಿ ಅವರು15 ಮತ್ತು 17 ವರ್ಷದೊಳಗಿನವರ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಆಘಾತ ಅನುಭವಿಸಿದರು.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಹಾಗೂ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಯ (ಡಿಡಿಬಿಎ) ಆಶ್ರಯದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ 16ರ ಘಟ್ಟದ ಹಣಾಹಣಿಯಲ್ಲಿ ಗೌತಮ್ 22–20, 18–21, 7–21ರಿಂದ ಬೆಂಗಳೂರಿನ ವಿಶಾಲ್ ಡಿ.ಆನಂದ್ ವಿರುದ್ಧ ಪರಾಭವಗೊಂಡರು.

ತೀವ್ರ ಪೈಪೋಟಿ ಕಂಡ ಮೊದಲ ಗೇಮ್‌ನಲ್ಲಿ ಗೌತಮ್ ಪ್ರಯಾಸದಿಂದಲೇ ಗೆದ್ದರು. ಎರಡನೇ ಗೇಮ್‌ನಲ್ಲಿ ತಿರುಗೇಟು ನೀಡಿದ ವಿಶಾಲ್ 1–1ರಿಂದ ಸಮಬಲ ಸಾಧಿಸಿದರು. ನಿರ್ಣಾಯಕ ಎನಿಸಿದ್ದ ಮೂರನೇ ಗೇಮ್‌ನಲ್ಲಿ ವಿಶಾಲ್ ನಿರಾಯಾಸವಾಗಿ ಎದುರಾಳಿಯನ್ನು ಸೋಲಿಸಿ ಸಂಭ್ರಮಿಸಿದರು.

17 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲೂ ಗೌತಮ್ ಹೋರಾಟ ಅಂತ್ಯವಾಯಿತು. ಅವರು 17–21, 11–21ರಿಂದ ಬೆಳಗಾವಿಯ ಮಹಿಮ್ ಎದುರು ಮಣಿದರು.

15 ವರ್ಷದೊಳಗಿನ ವಿಭಾಗದ ಮತ್ತೊಂದು ಪಂದ್ಯದಲ್ಲಿ ಆದಿತ್ಯ 17–21, 15–21ರಿಂದ ದೇವಾಂಶ್ ಲಾಲ್ ಎದುರು ಸೋಲು ಕಂಡರು.

ಬಾಲಕಿಯರ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 8ನೇ ಶ್ರೇಯಾಂಕದ ಸುಪ್ರಿತಾ ದೀಪಕ್ 21–23, 18–21ರಿಂದ ಅದಿತಿ ಸುಶಾಂತ್ ವಿರುದ್ಧ ಆಘಾತ ಕಂಡರು.

ಇತರ ಪಂದ್ಯಗಳಲ್ಲಿ ಧನ್ಯಾ ಮಂಜುನಾಥ್ 21–15, 21–9ರಿಂದ ವೈಷ್ಣವಿ ನಾರಾಯಣನ್ ವಿರುದ್ಧ, ಎಸ್. ಸ್ಮೃತಿ 17–21, 21–16, 21–13ರಿಂದ ಹನ್ಸಿಕಾ ರಾಕೇಶ್ ವಿರುದ್ಧ, ಶ್ರೀನಾಗಲಕ್ಷ್ಮಿ 21–18, 21–18ರಿಂದ ಬಿ.ಜನ್ಯಶ್ರೀ ವಿರುದ್ಧ ಗೆಲುವು ಪಡೆದರು.

ರೋಚಕ ಹಣಾಹಣಿ: 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ 16ರ ಘಟ್ಟದ ಎರಡು ಪಂದ್ಯಗಳಲ್ಲಿ ರೋಚಕ ಹಣಾಹಣಿ ಕಂಡುಬಂತು.

ಬೆಂಗಳೂರಿನ ಆಟಗಾರರಾದ ಆರವ್ ಬಾಸಕ್ ಮತ್ತು ಮೆಹುಲ್ ಮಾನವ್ ಅವರು ಸೊಗಸಾದ ಆಟ ಆಡಿ ನೆರೆದಿದ್ದವರನ್ನು ರಂಜಿಸಿದರು. ಆರವ್ 22–20, 20–22, 21–14ರಿಂದ ದೇವಾಂಶ್ ಚೌಧರಿ ಅವರನ್ನು ಮಣಿಸಿದರೆ, ಮೆಹುಲ್ 20–22, 26–24, 21–16ರಿಂದ ಸ್ವರೂಪ್ ಪಾಲಾಕ್ಷಯ್ಯ ವಿರುದ್ಧ ಗೆದ್ದರು.

ಅಭಿಷೇಕ್, ಸ್ಮೃತಿಗೆ ಐಸಿಸಿ ತಿಂಗಳ ಪ್ರಶಸ್ತಿ

ದುಬೈ (ಪಿಟಿಐ): ಭಾರತ ಟಿ20 ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಮತ್ತು ಮಹಿಳಾ ತಂಡದ ಸ್ಮೃತಿ ಮಂದಾನ ಅವರಿಗೆ ಕ್ರಮವಾಗಿ ಐಸಿಸಿ ತಿಂಗಳ ಆಟಗಾರ ಹಾಗೂ ಆಟಗಾರ್ತಿ ಗೌರವ ಒಲಿದಿದೆ.

ಸೆಪ್ಟೆಂಬರ್ ತಿಂಗಳ ಶ್ರೇಷ್ಠ ಆಟಗಾರರ ಪ್ರಶಸ್ತಿ ಆಯ್ಕೆಯಲ್ಲಿ ಇವರಿಬ್ಬರಿಗೂ ಈ ಗೌರವ ಸಂದಿದೆ. ಅಭಿಷೇಕ್ ಅವರು ಈ ಪೈಪೋಟಿಯಲ್ಲಿ ಸಹ ಆಟಗಾರ, ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಜಿಂಬಾಬ್ವೆಯ ಬ್ರಯನ್ ಬೆನೆಟ್ ಅವರನ್ನು ಹಿಂದಿಕ್ಕಿದರು. ಅಭಿಷೇಕ್ ಅವರು ಏಳು ಪಂದ್ಯಗಳಿಂದ 314 ರನ್ ಗಳಿಸಿದ್ದರು. 200ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಈ ಸಾಧನೆ ಮಾಡಿದ್ದರು. 25 ವರ್ಷದ ಅಭಿಷೇಕ್ ಅವರು ಈಚೆಗೆ ಏಷ್ಯಾ ಕಪ್ ಟೂರ್ನಿಯಲ್ಲಿ ಸರಣಿಶ್ರೇಷ್ಠ ಪ್ರಶಸ್ತಿ ಪಡೆದಿದ್ದರು.

'ಈ ಗೌರವಕ್ಕೆ ಪಾತ್ರರಾಗಿದ್ದು ಬಹಳ ಹೆಮ್ಮೆ ಎನಿಸುತ್ತಿದೆ. ಕೆಲವು ಮಹತ್ವದ ಪಂದ್ಯಗಳಲ್ಲಿ ತಂಡದ ಗೆಲುವಿನಲ್ಲಿ ಪಾತ್ರವಹಿಸಿದ್ದು ತೃಪ್ತಿಕರವಾಗಿದೆ' ಎಂದು ಅಭಿಷೇಕ್ ಹೇಳಿದರು.


ಸ್ಮೃತಿ ಮಂದಾನ

ಮಹಿಳಾ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಸ್ಮೃತಿ ಅವರು ಭಾರತದಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದಿದ್ದ ಏಕದಿನ ಸರಣಿಯ ಮೂರು ಪಂದ್ಯಗಳಲ್ಲಿ ಕ್ರಮವಾಗಿ 58, 117 ಮತ್ತು 125 ರನ್ ಗಳಿಸಿದ್ದರು. ತಂಡದ ಉಪನಾಯಕಿಯೂ ಆಗಿರುವ ಸ್ಮೃತಿ ಒಟ್ಟು 308 ರನ್ ಸೇರಿಸಿದರು. ಈ ಸರಣಿಯಲ್ಲಿ ಅವರು ವೇಗದ ಶತಕವನ್ನೂ ದಾಖಲಿಸಿದ್ದರು.

ಈ ಪ್ರಶಸ್ತಿ ಪೈಪೋಟಿಯಲ್ಲಿ ಅವರು ದಕ್ಷಿಣ ಆಫ್ರಿಕಾದ ತಾಜ್ಮಿನ್ ಬ್ರಿಟ್ಸ್ ಮತ್ತು ಪಾಕಿಸ್ತಾನದ ಸಿದ್ರಾ ಅಮಿನ್ ಅವರನ್ನು ಹಿಂದಿಕ್ಕಿದರು.

ರೊನಾಲ್ಡೊ ಕುಬೇರ

ಪ್ಯಾರಿಸ್ (ಎಎಫ್‌ಪಿ): ಫೋಬ್ಸ್ ಸಿದ್ಧಪಡಿಸಿರುವ, ಅಧಿಕ ಸಂಭಾವನೆ ಪಡೆಯುತ್ತಿರುವ ಫುಟ್‌ಬಾಲ್ ಆಟಗಾರರ ಪಟ್ಟಿಯಲ್ಲಿ ಪೋರ್ಚುಗಲ್‌ನ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಮತ್ತೆ ಅಗ್ರಸ್ಥಾನ ಪಡೆದಿದ್ದಾರೆ. ಅವರು ಕಳೆದ ಒಂದು ದಶಕದಲ್ಲಿ ಆರನೇ ಬಾರಿ ಅಗ್ರಸ್ಥಾನ ಪಡೆದಿದ್ದಾರೆ.



ಅಲ್ ನಾಸರ್ ಕ್ಲಬ್‌ಗೆ ಆಡುವ ರೊನಾಲ್ಡೊ ಕ್ರೀಡಾಂಗಣದಲ್ಲಿ ಮತ್ತು ಹೊರಗಿನ ಒಪ್ಪಂದಗಳಿಂದ ₹24.7 ಶತಕೋಟಿ (280 ದಶಲಕ್ಷ ಡಾಲರ್) ಸಂಪಾದಿಸಿದ್ದಾರೆ.

ಎರಡನೇ ಸ್ಥಾನದಲ್ಲಿ ಅರ್ಜೆಂಟೀನಾದ ದಿಗ್ಗಜ ಲಯೊನೆಲ್ ಮೆಸ್ಸಿ ಇದ್ದಾರೆ. ಅವರು ₹1,086 ಕೋಟಿ (130 ದಶಲಕ್ಷ ಡಾಲರ್) ಸಂಪಾದಿಸಿದ್ದಾರೆ.

ಸ್ಪೇನ್‌ನ ಯುವ ಫುಟ್‌ಬಾಲ್ ತಾರೆ ಲಮಿನ್ ಯಮಲ್ ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. 378 ಕೋಟಿ (43ದಶಲಕ್ಷ ಡಾಲರ್) ಸಂಪಾದಿಸಿರುವ ಅವರು 10ನೇ ಸ್ಥಾನದಲ್ಲಿದ್ದಾರೆ.

ಮೈಸೂರು ರೇಸ್

ಮ್ಯಾಗ್ನೆಟಿಕ್ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆ ಆಗಿದ್ದು, ಮ್ಯಾಗ್ನೆಟಿಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಇಮ್ಮೋರ್ಟಲ್ ಬ್ಯೂಟಿ 1, ಸ್ಟ್ರೈಕಿಂಗ್ ಐಸ್ 5, ದಿ ಗೋಲ್ಡನ್ ಕಪ್ 8
2ನೇ ರೇಸ್: ಜಾನತ್ 4, ಪರ್ಲ್ ಆಫ್ ಮೈಸೂರು 8, ಅಲ್ಯೂರಿಂಗ್ ಬ್ಯೂಟಿ 9
3ನೇ ರೇಸ್: ಸ್ಟಾರ್ ಸ್ಟಡೆಡ್ 4, ಸ್ಟಾರ್ ಹಾನರ್ 2, ಕೌಂಟ್ ಬೇಸಿ 10
4ನೇ ರೇಸ್: ಇನ್‌ಸ್ಟ್ರಕ್ಟರ್ 8, ಕ್ರಿಯೇಟಿವ್ ಗರ್ಲ್ 4, ಬ್ಯೂಟಿಫುಲ್ ಬ್ಲೂಮ್ 7
5ನೇ ರೇಸ್: ಮ್ಯಾಗ್ನೆಟಿಕ್ 1, ಸೀ ದಿ ಸನ್ 4, ಮೆಸ್ಕಾಲಿಟೊ 2
6ನೇ ರೇಸ್: ಗ್ರಿಜ್ಲಿ 9, ವಿಂಟರ್ ಅಜೆಂಡಾ 8, ಸೆರಾನೊ 7
7ನೇ ರೇಸ್: ಎಲ್ ಅಲಮೀನ್ 2, ಪಿಂಕಿ ಪಿಂಕಿ 6, ಕ್ಯಾಸ್ಟನೆಡ 4

ಉತ್ತಮ ಬೆಟ್: ಇಮ್ಮೋರ್ಟಲ್ ಬ್ಯೂಟಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಟೈಬ್ರೇಕರ್‌ನಲ್ಲಿ ಮತ್ತೆ ಬುಲ್ಸ್‌ಗೆ ನಿರಾಸೆ

ನವದೆಹಲಿ (ಪಿಟಿಐ): ರೋಮಾಂಚಕವಾಗಿದ್ದ ಟೈಬ್ರೇಕರ್‌ನಲ್ಲಿ ಬೆಂಗಳೂರು ಬುಲ್ಸ್‌ಗೆ ಮತ್ತೊಮ್ಮೆ ನಿರಾಸೆ ಕಾಡಿತು. ಈ ಬಾರಿ ಪ್ರೊ ಕಬಡ್ಡಿ ಲೀಗ್‌ನಲ್ಲಿ ಪಟ್ನಾ ಪೈರೇಟ್ಸ್ ತಂಡ ಟೈಬ್ರೇಕರ್‌ನಲ್ಲಿ ಬುಲ್ಸ್ ತಂಡವನ್ನು 6–5ರಿಂದ ಸೋಲಿಸಿತು. ಗುರುವಾರ ನಡೆದ ದಿನದ ಮೊದಲ ಪಂದ್ಯದಲ್ಲಿ ನಿಗದಿತ ಅವಧಿಯ ಆಟ 38–38ರಲ್ಲಿ ಸಮಬಲಗೊಂಡಿತ್ತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಅಯಾನ್ ಲೋಚಬ್ ಅವರ ಸೂಪರ್ ಟೆನ್ ಮತ್ತು ನವದೀಪ್ ಅವರ ನಾಲ್ಕು ಟ್ಯಾಕಲ್‌ಗಳು ಪಟ್ನಾ ಆಟದಲ್ಲಿ ಗಮನ ಸೆಳೆದವು.

ಆದರೆ ಟೈಬ್ರೇಕರ್‌ನಲ್ಲಿ ಮನದೀಪ್ ಅವರು ರೇಡಿಂಗ್‌ನಲ್ಲಿ ಒಮ್ಮೆಯೇ ಎರಡು ಪಾಯಿಂಟ್ಸ್ ಹೆಕ್ಕಿದ್ದು ನಿರ್ಣಾಯಕವಾಯಿತು.

ಬೆಂಗಳೂರು ಪರ ಅಲಿರೇಝಾ ಅವರು ಒಂಬತ್ತನೇ ಬಾರಿ ಸೂಪರ್ ಟೆನ್ ಸಾಧಿಸಿ, ಪ್ರತಿರೋಧ ತೋರಿದರು.

ಬುಲ್ಸ್‌ಗೆ ಇದು 15 ಪಂದ್ಯಗಳಲ್ಲಿ ಏಳನೇ ಸೋಲು. ಎಂಟು ಪಂದ್ಯ ಗೆದ್ದಿರುವ ಯೋಗೇಶ್ ಬಳಗ 16 ಪಾಯಿಂಟ್‌ಗಳೊಡನೆ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಈ ಗೆಲುವಿನ ಹೊರತಾಗಿಯೂ ಪಟ್ನಾ ಕೊನೆಯ ಸ್ಥಾನದಲ್ಲೇ ಇದೆ.

ದಿನದ ಇನ್ನೊಂದು ಪಂದ್ಯದಲ್ಲಿ ಯು ಮುಂಬಾ ತಂಡ 33–26 ಪಾಯಿಂಟ್‌ಗಳಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. ಮತ್ತೊಂದು ಪಂದ್ಯದಲ್ಲಿ ಸಾಂಘಿಕ ಆಟವಾಡಿದ ಹರಿಯಾಣ ಸ್ಟೀಲರ್ಸ್ ತಂಡ 53–26ರಲ್ಲಿ ಯುಪಿ ಯೋಧಾಸ್ ತಂಡವನ್ನು ಸುಲಭವಾಗಿ ಮಣಿಸಿತು.

ಎಂಟರ ಘಟ್ಟಕ್ಕೆ ಜ್ಞಾನದತ್ತು, ತನ್ವಿ ಶರ್ಮಾ

ಗುವಾಹಟಿ (ಪಿಟಿಐ): ಸ್ಫೂರ್ತಿಯುತ ಆಟ ಮುಂದುವರಿಸಿದ ಭಾರತದ ಉದಯೋನ್ಮುಖ ಆಟಗಾರ್ತಿಯರಾದ ತನ್ವಿ ಶರ್ಮಾ ಮತ್ತು ಉನ್ನತಿ ಹೂಡಾ ಅವರು ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಕ್ವಾರ್ಟರ್‌ಫೈನಲ್‌ಗೆ ದಾಪುಗಾಲಿಟ್ಟರು. ಬಾಲಕರ ಸಿಂಗಲ್ಸ್‌ನಲ್ಲಿ ಶ್ರೇಯಾಂಕರಹಿತ ಆಟಗಾರ ಜ್ಞಾನದತ್ತು ಟಿ.ಟಿ. ಸಹ ಎಂಟರ ಘಟ್ಟ ತಲುಪಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ತನ್ವಿ 15–8, 15–5 ರಿಂದ ಚೀನಾದ ಸನ್ ಲಿ ಯುವಾನ್ ಅವರನ್ನು ನೇರ ಗೇಮ್‌ಗಳಿಂದ ಮಣಿಸಿದರೆ, ಎಂಟನೆ ಶ್ರೇಯಾಂಕದ ಉನ್ನತಿ ಆರಂಭದಲ್ಲಿ ಒಂದಿಷ್ಟು ಪರದಾಡಿದರೂ ಬೇಗನೇ ಲಯಕ್ಕೆ ಮರಳಿ 15–10, 15–7 ರಿಂದ ಮಲೇಷ್ಯಾದ ಕೆರಿನ್ ಟೀ ವಿರುದ್ಧ ಗೆಲುವು ಸಾಧಿಸಿದರು.

ಎಂಟರ ಘಟ್ಟದ ಪಂದ್ಯದಲ್ಲಿ ತನ್ವಿ, ಜಪಾನ್‌ನ ಸಾಕಿ ಮಾತ್ಸುಮೊಟೊ ವಿರುದ್ಧ, ಉನ್ನತಿ, ಎರಡನೇ ಶ್ರೇಯಾಂಕದ ಅನ್ಯಪತ್ ಫಿಚಿಟ್‌ಪ್ರೀಚಸಕ್ (ಥಾಯ್ಲೆಂಡ್) ಅವರನ್ನು ಎದುರಿಸಲಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ 33 ಪದಕ ಗೆದ್ದ ಆಸ್ಟ್ರೇಲಿಯಾದ ತಾರೆ ವಿದಾಯ

ಈಜುಕೊಳದ 'ಚಿನ್ನದ ಮೀನು' ಟಿಟ್ಮಸ್

ಸಿಡ್ನಿ (ಎಎಫ್‌ಪಿ): ಒಲಿಂಪಿಕ್ಸ್‌ನಲ್ಲಿ ನಾಲ್ಕು ಬಾರಿಯ ಈಜು ಚಾಂಪಿಯನ್ ಅರಿಯಾನ್ ಟಿಟ್ಮಸ್ ಅವರು ಗುರುವಾರ ದಿಢೀರ್ ವಿದಾಯ ಘೋಷಿಸಿದ್ದಾರೆ. ಇದು 'ಕಠಿಣ ನಿರ್ಧಾರ' ಎಂದು ಆಸ್ಟ್ರೇಲಿಯಾದ ಈಜು ತಾರೆ ಹೇಳಿದ್ದಾರೆ.

25 ವರ್ಷ ವಯಸ್ಸಿನ ಟಿಟ್ಮಸ್ 2024ರ ಪ್ಯಾರಿಸ್ ಒಲಿಂಪಿಕ್ಸ್ ನಂತರ ವಿರಾಮ ಪಡೆದಿದ್ದರು. ಆದರೆ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಪುನರಾಗಮನ ಮಾಡುವ ಯೋಚನೆಯಿದೆ ಎಂದು ಈ ಹಿಂದೆ ಹೇಳಿದ್ದರು.

ಟಿಟ್ಮಸ್ ಒಟ್ಟು 33 ಅಂತರರಾಷ್ಟ್ರೀಯ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಎರಡು ಒಲಿಂಪಿಕ್ಸ್‌ಗಳಲ್ಲಿ ಅವರು ಒಟ್ಟು ಎಂಟು ಪದಕಗಳನ್ನು (4 ಚಿನ್ನ, 3 ಬೆಳ್ಳಿ, 1 ಕಂಚು) ಗೆದ್ದಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 9 ಪದಕಗಳನ್ನು (4 ಚಿನ್ನ, ಎರಡು ಬೆಳ್ಳಿ, ಮೂರು ಕಂಚು) ಮತ್ತು ಕಾಮನ್ವೆಲ್ತ್ ಕ್ರೀಡೆಗಳಲ್ಲಿ ಎಂಟು ಪದಕಗಳನ್ನು (7 ಚಿನ್ನ, 1 ಬೆಳ್ಳಿ) ಜಯಿಸಿದ್ದಾರೆ.


ಆಸ್ಟ್ರೇಲಿಯಾದ ಅರಿಯಾನ್ ಟಿಟ್ಮಸ್ ಎಎಫ್‌ಪಿ ಚಿತ್ರ

'ಇದು ತುಂಬಾ ಕಠಿಣ ನಿರ್ಧಾರ. ಆದರೆ ಈ ತೀರ್ಮಾನದಿಂದ ಸಂತಸವೂ ಆಗಿದೆ' ಎಂದು ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ. 'ನಾನು ಈಜನ್ನು ಪ್ರೀತಿಸಿದವಳು. ಈ ಕ್ರೀಡೆಯ ಬಗ್ಗೆ ನನ್ನ ಒಲವು ಪುಟ್ಟಬಾಲೆಯಾಗಿದ್ದ ದಿನಗಳಿಂದಲೇ ಇತ್ತು. ಆದರೆ ಬದುಕಿನಲ್ಲಿ ಕೆಲವು ವಿಷಯಗಳು ಮುಖ್ಯವಾಗಿರುತ್ತವೆ. ಈಜಿಗಿಂತ ಪ್ರಮುಖವೆನಿಸುವ ಕೆಲವು ವಿಷಯಗಳಿವೆ' ಎಂದಿದ್ದಾರೆ.

ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ಗಳಲ್ಲಿ ಅವರು 400 ಮೀ. ಫ್ರೀಸ್ಟೈಲ್ ಚಿನ್ನ ಗೆದ್ದಿದ್ದರು. ಆದರೆ ವಿಶ್ವ ದಾಖಲೆಯನ್ನು ಕೆನಡಾದ ಉದಯೋನ್ಮುಖ ತಾರೆ ಸಮ್ಮರ್ ಮೆಕಿಂಟೋಷ್ ಅವರಿಗೆ ಕಳೆದುಕೊಂಡಿದ್ದರು. 200 ಮೀ. ಫ್ರೀಸ್ಟೈಲ್‌ನಲ್ಲಿ ವಿಶ್ವದಾಖಲೆ (1ನಿ.52.23ಸೆ.) ಟಿಟ್ಮಸ್ ಹೆಸರಿನಲ್ಲೇ ಉಳಿದಿದೆ. ಟಿಟ್ಮಸ್ ಮತ್ತು ಕೆನಡಾದ ಹದಿಹರೆಯದ ಈಜುಗಾರ್ತಿ ಮೆಕಿಂಟೋಷ್ ನಡುವಣ ಪೈಪೋಟಿ ಪ್ರಮುಖ ಕ್ರೀಡೆಗಳಲ್ಲಿ ಸಂಚಲನ ಮೂಡಿಸುತ್ತಿತ್ತು.

'ನಾನು ಈಜಿಗೆ ಮರಳಲು ಉದ್ದೇಶಿಸಿದ್ದೆ. ಪ್ಯಾರಿಸ್ ಒಲಿಂಪಿಕ್ ಕೂಟ ನನ್ನ ಪಾಲಿಗೆ ಕೊನೆಯದಾಗಬಹುದೆಂದು ಎಂದೂ ಯೋಚಿಸಿರಲಿಲ್ಲ. ಹಾಗೆ ತಿಳಿದಿದ್ದಲ್ಲಿ ಕೊನೆಯ ಸ್ಪರ್ಧೆಯನ್ನು ಇನ್ನಷ್ಟು ಇಷ್ಟಪಟ್ಟು ಈಜುತ್ತಿದ್ದೆ' ಎಂದು ಹೇಳಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 400 ಮೀ. ಫ್ರೀಸ್ಟೈಲ್ ಚಿನ್ನ ಮತ್ತು 4x200 ಮೀ. ಫ್ರೀಸ್ಟೈಲ್ ರಿಲೆಯಲ್ಲಿ ಚಿನ್ನ ಗೆದ್ದ ಆಸ್ಟ್ರೇಲಿಯಾ ತಂಡದಲ್ಲಿದ್ದರು.

'ಅರ್ನಿ' ಎಂದೇ ಆಪ್ತವರ್ಗದಲ್ಲಿ ಜನಪ್ರಿಯರಾಗಿದ್ದ ಅವರ ನಿರ್ಧಾರ ಅಭಿಮಾನಿಗಳನ್ನು ಅಚ್ಚರಿಗೆ ದೂಡಿದೆ.



As homes light up with diyas, light up your celebrations with the happiness of driving a Kia. With GST and additional festive benefits, this is your moment to start a journey filled with comfort, tech, and style. Visit your nearest Kia dealership today.

Model	Reduction in price (up to)	Now starting at	Additional festive benefits (up to)
Sonet	₹ 1 64 470	₹ 7 30 138	₹ 1 03 000
Seltos	₹ 75 371	₹ 10 79 276	₹ 1 69 000
Syros	₹ 1 86 002	₹ 8 67 053	₹ 1 53 000
Carens	₹ 48 513	₹ 10 47 454	₹ 78 900
Carens Clavis	₹ 78 674	₹ 11 17 835	₹ 1 40 900

*Benefits available on other Kia cars as per applicability.

For more information, visit our dealership or contact: 1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Ex-showroom price mentioned is for the base variant (PAN India). Benefits shown are the combination of exchange, loyalty, corporate, scrappage and special benefits, which are applicable on select models and variants, may vary from model to model and region to region. The product shown is for representation purposes only. Actual features, colors, and specifications may not be part or standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/ discontinue any offer/ scheme/ service without prior notice. Kia urges you to follow traffic rules, these are meant to keep you safe on the roads. Visit your nearest Kia dealership for more details.

Bangalore: **JSP Kia:** Bellandur, Tel: 9071077717; Hosur Road, Tel: 9606011244; Sarjapur, Tel: 9513138856; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **PPS Kia:** Mysore Road, Tel: 6309990010; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia**: Tel: 8951903224



Finance Partners: TVS CREDIT | IDFC FIRST Bank ALWAYS YOU FIRST | SHRIRAM Finance | L&T Finance | HINDUJA LEYLAND FINANCE | muthoot CAPITAL

* Applicable only on selected models. ## Price benefit from revised GST rates on TVS Raider SX variant. # Ex-showroom price of select variants in Karnataka. Price mentioned are applicable from 22nd September, 2025. ** Finance at the sole discretion of the financier. Accessories shown may not be part of the standard fitment. Limited period offer. T&C apply.

FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com Authorized Main Dealers: BANGALORE: Jayanagar: Bharath TVS Ph: 9364001954, 9538887036, Rajajinagar: Bridgestone TVS Ph: 9036657247, Nagarbhavi: Global Autokraft Ph: 76193 75566, Mahalakshmi Layout: Global Autokraft Ph: 7619265566, Basaveshwara Nagar: Global Autokraft Ph: 9606019180, Kalyan Nagar: PRN TVS Ph: 9620000724, Chamrajpet : PRN TVS Ph: 6366936912, Domlur: PRN TVS Ph: 6366936931, Bommasandra: Bengaluru TVS Ph: 6366258111, Harlur: Bengaluru TVS Ph: 6366248111, Banshankari: Synergy TVS Mob: 8792499451, Bomanahalli: Synergy TVS 8792499454, Kanakapura Road: Dhancharan TVS Ph: 9916183232, Jalahalli Cross: Prakruthi TVS Ph: 9972365719, Ganga Nagar: Prakruthi TVS Ph: 99723665791, Bhadrappa Layout: Prakruthi TVS Ph: 9972363322, Bommanahalli: Arunagiri TVS Ph: 9740995037, HSR Layout: Kubera TVS Ph: 8904084251, Sarjapur Road: Indian TVS Ph: 9980844993, Kadubesanhalli: Indian TVS Ph: 9980844993, Bannerghatta Road: Neo TVS Ph: 9620134664, Tin Factory: Dimple TVS Ph: 8147117435/36, Marathahalli: Trijal TVS Ph: 7349278333, Whitefield: Trijal TVS Ph: 8971598119, Yelahanka: Hemanth TVS Ph: 9740180379, Vidyaranyapura: Hemanth TVS Ph: 9740180379, Dodballapur: Hemanth TVS Ph: 9740180379, Sahakarnagar: Hemanth TVS Ph: 9740180379, Rajarajeshwari Nagar: Solar TVS Ph: 9148267949, Kengeri: Solar TVS Ph: 9513777427, Channasandra: Solar TVS Ph:7337887814, J P Nagar: Solar TVS Ph: 9513310624, Hanumanth Nagar Solar TVS Ph: 9148997405, Kagallipura: Solar TVS Ph: 9035241869, Krishnarajapuram: Suryapratap TVS Ph: 9513740009, Thanisandra: Suryapratap TVS Ph: 9513740011/9986716999, Lalbag Road: Himaalayaa TVS 9513077787, Koramanagala Flagship TVS Ph: 9035154376, BTM Layout: Synergy TVS 8792499453, Maranahalli: Synergy TVS 8792499452, BHEL- Mysore Raod: Prakruthi TVS 9606948590, Attibele: Balakrishna TVS Ph: 9620851817, Jigani: Sri Balaji TVS Ph: 9845762549, Hoskote: NithinTVS Ph: 8123363849, Nelamangala: Prakruthi TVS Ph: 7353770287, Mahadevpura: Vega TVS Ph: 7618798890, Kanakapura: Anjanadri TVS Ph: 9972130096, Ramnagara: Samarth TVS Ph: 9513949993, Channapatna: Samarth TVS Ph:9513979997, Ramamurthi Nagar: Suryapratap TVS Ph: 9513740006, Ulsoor: Suryapratap TVS Ph: 9480811623, Cox Town: Suryapratap TVS Ph: 9513373012, Jeevan Bheema Nagar: PRN TVS Ph: 6366936879, Vijayanagar : RPM TVS Ph: 9606077910 , E.City: RPM TVS Ph: 9696077904, HBR layout : Arunagiri TVS Ph : 9035146677, Kolar: Saravana TVS Ph: 9900403317, K.G.F.: Saravana TVS Ph: 9900403317, Chikballapur: Maruthi TVS Ph: 6360700285, Kolar: Sri Venu TVS Ph: 9986833599, Tumkur: Sree Balaji TVS Ph: 8971657342, Srigiri TVS Ph: 8971657691, Vasista TVS Ph: 8861025451, Tiptur: Nikitha TVS Ph: 8971675903. Authorized Dealers: BANGALORE: Magadi Main Road: Solar TVS Ph: 9845366667, Mathikere: Fastbikes TVS Ph: 9986837771, Basaveshvaranagar: Speed TVS Ph: 080 – 41287182, Malleshwaram: Kubera TVS Ph:7624988146, Hanumanth Nagar: Skanda TVS Ph: 8088182788, Shivajinagar: Ambika TVS Ph: 9980510555, Madiwala: Indian TVS Ph: 9632600517, Hennur: Nakshatra TVS Ph: 9738101956, Tavarekere: Kiran TVS Ph: 9740089364, Sunkadakatte: Namana TVS Ph: 9900307123, Bydarahalli: Swastik TVS Ph: 9901934123, Begur Road: Deva TVS Ph: 9538313497, Gottigere: SB TVS Ph: 7090006622, Mylasandra: SB TVS Ph: 8971589555, Varthur: Hruthik TVS Ph: 9886100299, Chandapura: Murali TVS Ph: 9448081601, Anekal: Sri Venkateshwara TVS Ph: 7411626961, Dabaspet: Navyug TVS Ph: 9900156846, Devanahalli: Supratheek TVS Ph: 9845832523, Vijipura: Sri Durga TVS Mob: 8892762610, Bagalur: Madhava TVS Ph: 9620000329, Magadi: Sri Narasimha TVS Ph: 9742248691, Chinthamani: Balaji TVS Ph: 9066064551, Bagepalli: Sri Sai TVS Mob: 9945513446, Gauribidanur: Sai TVS Mob: 9448310962, Malur: Saravana TVS Mob: 8147997408, Srinivasapura: Vignesh TVS Mob: 9972885552, Turuvekere: Gadde Kempamma TVS Mob: 9113822260, Pavagada: Agastya TVS Mob: 9740021528, Koratagere: Royal Motors, 9743936348, Kunigal: Sri Maruthi TVS Mob: 9945938606, Chikkanayakanahalli: Vasista TVS Ph: 9108306101, Sira: Sapthagiri TVS Ph: 9844354422, Bidadi: Sri Balaji TVS Ph: 7022594225, Sathnur: Saan MG TVS Ph: 9035063306, Jnanabharathi: VVK TVS Ph:8073546091, 7829457198, Bellandur: Indian TVS Ph: 9980844993, Sarjapur: Gurukrupa TVS Ph: 9632600517, Bettadasanpura: Sree TVS Ph:7349349295, Murgeshpalya: SS bikes Ph: 9972631977, Chansandra: Nishvith TVS Ph: 9731266645, Doddadunnasandra: Deekshith TVS Ph: 9686269696, Harohalli : Prakruthi TVS Ph: 9380610968, Madhugiri: Sri Skanda TVS Mob: 9242455433, Nittur: Vasista TVS Ph: 9108044857, Huliyaru, Vedam TVS, Ph: 9742221189, Mulbagal: Garuda TVS Ph: 7899822232,Sidlaghata: SVR TVS Ph: 9900899456, Dommasandra: RKS TVS Ph: 9448228315 , Budigere Cross: Sarang TVS Ph : 7259584159, Doddakamanahalli: Aarvi TVS Ph: 99862667889986837771,Basaveshvaranagar: Speed TVS Ph: 080 – 41287182, Malleshwaram: Kubera TVS Ph:7624988146, Hanumanth Nagar: Skanda TVS Ph: 8088182788, Shivajinagar: Ambika TVS Ph: 9980510555, Madiwala: Indian TVS Ph: 9632600517, Hennur: Nakshatra TVS Ph: 9738101956, Tavarekere: Kiran TVS Ph: 9740089364, Sunkadakatte: Namana TVS Ph: 9900307123, Bydarahalli: Swastik TVS Ph: 9901934123, Begur Road: Deva TVS Ph: 9538313497, Gottigere: SB TVS Ph: 7090006622, Mylasandra: SB TVS Ph: 8971589555, Varthur: Hruthik TVS Ph: 9886100299, Chandapura: Murali TVS Ph: 9448081601, Anekal: Sri Venkateshwara TVS Ph: 7411626961, Dabaspet: Navyug TVS Ph: 9900156846, Devanahalli: Supratheek TVS Ph: 9845832523, Vijipura: Sri Durga TVS Mob: 8892762610, Bagalur: Madhava TVS Ph: 9620000329, Magadi: Sri Narasimha TVS Ph: 9742248691, Chinthamani: Balaji TVS Ph: 9066064551, Bagepalli: Sri Sai TVS Mob: 9945513446, Gauribidanur: Sai TVS Mob: 9448310962, Malur: Saravana TVS Mob: 8147997408, Srinivasapura: Vignesh TVS Mob: 9972885552, Turuvekere: Gadde Kempamma TVS Mob: 9113822260, Pavagada: Agastya TVS Mob: 9740021528, Koratagere: Royal Motors, 9743936348, Kunigal: Sri Maruthi TVS Mob: 9945938606, Chikkanayakanahalli: Vasista TVS Ph: 9108306101, Sira: Sapthagiri TVS Ph: 9844354422, Bidadi: Sri Balaji TVS Ph: 7022594225, Sathnur: Saan MG TVS Ph: 9035063306, Jnanabharathi: VVK TVS Ph:8073546091, 7829457198, Bellandur: Indian TVS Ph: 9980844993, Sarjapur: Gurukrupa TVS Ph: 9632600517, Bettadasanpura: Sree TVS Ph:7349349295, Murgeshpalya: SS bikes Ph: 9972631977, Chansandra: Nishvith TVS Ph: 9731266645, Doddadunnasandra: Deekshith TVS Ph: 9686269696, Harohalli : Prakruthi TVS Ph: 9380610968, Madhugiri: Sri Skanda TVS Mob: 9242455433, Nittur: Vasista TVS Ph: 9108044857, Huliyaru, Vedam TVS, Ph: 9742221189, Mulbagal: Garuda TVS Ph: 7899822232,Sidlaghata: SVR TVS Ph: 9900899456, Dommasandra: RKS TVS Ph: 9448228315 , Budigere Cross: Sarang TVS Ph : 7259584159, Doddakamanahalli: Aarvi TVS Ph: 9986266788.

dentsu/pv blr/10/25

ಅರುಣಿಮಾಗೆ ಗೌರವ...

ಬ್ರಿಟನ್ ರಾಜ 3ನೇ ಚಾರ್ಲ್ಸ್ ಅವರ 'ಗೌರವ ಬ್ರಿಟಿಷ್ ಎಂಪೈರ್ ಪದಕ' ಪಡೆದ ಮೊದಲ ಕೂಚಿಪುಡಿ ನರ್ತಕಿ ಎಂಬ ಹೆಗ್ಗಳಿಕೆಗೆ ಅರುಣಿಮಾ ಕುಮಾರ್ ಪಾತ್ರರಾಗಿದ್ದಾರೆ. ಭಾರತೀಯ ಶಾಸ್ತ್ರೀಯ ನೃತ್ಯಕ್ಕೆ ನೀಡಿದ ಕೊಡುಗೆಗಾಗಿ ಅವರಿಗೆ ಈ ಗೌರವ ಸಿಕ್ಕಿದೆ.



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

ಯೂಟ್ಯೂಬ್‌ನಲ್ಲಿ ಗ್ರಾಮಸಭೆ ನೇರ ಪ್ರಸಾರ

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನಲ್ಲಿ ಪ್ರಾಯೋಗಿಕ ಯೋಜನೆ ಜಾರಿಗೆ ಸಿದ್ಧತೆ

• ಬಾಲಚಂದ್ರ ಎಚ್.

ಚಾಮರಾಜನಗರ: ಜಿಲ್ಲೆಯ ಹನೂರು ತಾಲ್ಲೂಕಿನ 25 ಗ್ರಾಮ ಪಂಚಾಯಿತಿಗಳ ಗ್ರಾಮಸಭೆಯ ಕಲಾಪಗಳನ್ನು ಯೂಟ್ಯೂಬ್ ಮೂಲಕ ನೇರ ಪ್ರಸಾರ ಮಾಡಲು ಜಿಲ್ಲಾ ಪಂಚಾಯಿತಿ ಸಿದ್ಧತೆ ನಡೆಸಿದೆ. ಇದು ಪ್ರಾಯೋಗಿಕ ಯೋಜನೆಯಾಗಿದ್ದು, ಯಶಸ್ವಿಯಾದರೆ ರಾಜ್ಯದಾದ್ಯಂತ ವಿಸ್ತರಣೆಗೊಳ್ಳಲಿದೆ.

ಗ್ರಾಮ ಸಭೆಗಳ ನಡಾವಳಿಗಳು, ನಿರ್ಣಯಗಳು ಎಲ್ಲರಿಗೂ ತಿಳಿಯಬೇಕೆಂದು ನೇರ ಪ್ರಸಾರ ಮಾಡುವುದಾಗಿ ಸರ್ಕಾರ 2024–25ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿತ್ತು. ಅದರಂತೆ, ಗ್ರಾಮಸಭೆ ಲೈವ್ ವೀಕ್ಷಿಸಲು ಲಿಂಕ್‌ಗಳನ್ನು ಸ್ಥಳೀಯರಿಗೆ ಲಭ್ಯವಾಗುವಂತೆ ವಾಟ್ಸ್ ಆ್ಯಪ್ ಗ್ರೂಪ್‌ಗಳಲ್ಲಿ ಹಂಚಲಾಗುತ್ತಿದೆ.

ಮುಖ್ಯಾಂಶಗಳು

- ಆಡಳಿತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವಕ್ಕೆ ಒತ್ತು
- ಗ್ರಾಮಸ್ಥರ ವಾಟ್ಸ್ ಆ್ಯಪ್ ಗುಂಪುಗಳಲ್ಲಿ ಲಿಂಕ್ ಹಂಚಿಕೆ



ಹನೂರಿನಲ್ಲಿ ಶೇ 60ರಷ್ಟು ಅರಣ್ಯ ಪ್ರದೇಶವಿದ್ದು, ನೆಟ್‌ವರ್ಕ್ ಸಮಸ್ಯೆ ಇದೆ. ಎಲ್ಲ ತಾಂತ್ರಿಕ ಅಡೆತಡೆಗಳನ್ನು ನಿವಾರಿಸಿಕೊಳ್ಳಲಾಗಿದೆ. ಶೀಘ್ರ ನೇರ ಪ್ರಸಾರ ಮಾಡಲಾಗುವುದು
ಮೋನಾ ರೋತ್, ಜಿಲ್ಲಾ ಪಂಚಾಯಿತಿ ಸಿಇಒ

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒ, ಸ್ಥಳೀಯ ಶಾಸಕರು, ಸಚಿವರು ಸಹಿತ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಹಿರಿಯ ಅಧಿಕಾರಿಗಳು ವೀಕ್ಷಿಸಲಿದ್ದಾರೆ.

'ಪಂಚಾಯಿತಿಗಳ ಹೆಸರಿನಲ್ಲಿ ಈಗಾಗಲೇ ಯುಟ್ಯೂಬ್ ಖಾತೆ ತೆರೆಯಲಾಗಿದೆ. ನಾಗರಿಕರು ಗ್ರಾಮಸಭೆಯ ಕಲಾಪಗಳನ್ನು ಶೀಘ್ರ ನೇರವಾಗಿ ವೀಕ್ಷಣೆ ಮಾಡಬಹುದು' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಮೋನಾ ರೋತ್ 'ಪ್ರಜಾವಾಣಿ'ಗೆ ತಿಳಿಸಿದರು.

'ಗ್ರಾಮಸಭೆಗಳಲ್ಲಿ ಗ್ರಾಮಸ್ಥರೆಲ್ಲರೂ ಭಾಗವಹಿಸಲು ಸಾಧ್ಯವಾಗುವುದಿಲ್ಲ. ನೇರಪ್ರಸಾರದಿಂದ ಮನೆಯಲ್ಲಿ ಕುಳಿತು ವೀಕ್ಷಿಸಬಹುದು. ವಿದೇಶದಲ್ಲಿರುವ ಸ್ಥಳೀಯರೂ ತಮ್ಮ ಹಳ್ಳಿಗಳ ಬಗ್ಗೆ ತಿಳಿಯಲು ಇದು ಅಪರೂಪದ ಅವಕಾಶ' ಎಂದರು.

'ವಿಡಿಯೊ ಸಾರ್ವಕಾಲಿಕ ದಾಖಲೆ'

'ಗ್ರಾಮಸಭೆಯ ನಿರ್ಣಯಗಳು ಜಾರಿಯಾಗದಿದ್ದರೆ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳನ್ನು ಪ್ರಶ್ನಿಸಬಹುದು. ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವಕ್ಕೆ ಇದು ಹೆಚ್ಚು ಅವಕಾಶ ಒದಗಿಸಲಿದೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಲಹೆ, ಸೂಚನೆ ನೀಡಬಹುದು. ವಿಡಿಯೊ ಸಾರ್ವಕಾಲಿಕ ದಾಖಲೆಯಾಗಲಿದ್ದು, ಯಾವಾಗ ಬೇಕಾದರೂ ವೀಕ್ಷಿಸಬಹುದು' ಎಂದು ಮೋನಾ ರೋತ್ ಅವರು ಹೇಳಿದರು.

'ಗ್ರಾಮಗಳ ಅಭಿವೃದ್ಧಿ, ಯೋಜನೆಗಳ ಜಾರಿ, ಕಾರ್ಯಕ್ರಮ ರೂಪಿಸುವಿಕೆ ಹಾಗೂ ಮಹತ್ವದ ನಿರ್ಧಾರದ ವೇಳೆಯಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಯನ್ನೂ ನೇರ ಪ್ರಸಾರ ಹೆಚ್ಚಿಸುವ ನಿರೀಕ್ಷೆ ಇದೆ. ಆಡಳಿತದಲ್ಲಿ ಪಾರದರ್ಶಕತೆ ಬರಲಿದೆ, ಅಕ್ರಮಗಳನ್ನು ತಡೆಯಲು ಸಹಕಾರಿಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ


'ಎ' ಖಾತಾ ಹೆಸರಿನಲ್ಲಿ ₹15 ಸಾವಿರ ಕೋಟಿ ಸುಲಿಗೆ'

ಮಂಡ್ಯ: 'ದೀಪಾವಳಿ ಕೊಡುಗೆ ಹೆಸರಿನಲ್ಲಿ ರಾಜ್ಯ ಸರ್ಕಾರ ಬೆಂಗಳೂರು ಜನರ ಜೇಬಿಗೆ ಕೈ ಹಾಕಿದೆ. ಎ ಖಾತಾ ಸೋಗಿನಲ್ಲಿ ₹15 ಸಾವಿರ ಕೋಟಿ ಸುಲಿಗೆ ಮಾಡುತ್ತಿದೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತನೆ ಮಾಡುವ ಅರ್ಜಿಗೆ ₹500 ಶುಲ್ಕದ ಹೆಸರಿನಲ್ಲಿಯೇ ನೂರಾರು ಕೋಟಿ ರೂಪಾಯಿ ಸುಲಿಗೆ ಮಾಡುತ್ತಿದೆ. 30X40 ಅಡಿ ನಿವೇಶನಕ್ಕೆ ₹40ರಿಂದ 8 ಲಕ್ಷ ರೂಪಾಯಿವರೆಗೂ ಕಿತ್ತುಕೊಳ್ಳುತ್ತಿದ್ದಾರೆ. ಮೊದಲು ₹10 ಸಾವಿರದಿಂದ ₹13 ಸಾವಿರದವರೆಗೆ ಕಟ್ಟಬೇಕಿದ್ದ ಬೆಂಗಳೂರು ಜನ ಲಕ್ಷಗಳಲ್ಲಿ ಹಣ ತೆರಬೇಕು' ಎಂದರು.

'ಈ ಸರ್ಕಾರದಲ್ಲಿ ಹಣ ಇಲ್ಲ, ಅದಕ್ಕೆ ಕಂಡ ಕಡೆಯೆಲ್ಲಾ ಹಣಕ್ಕಾಗಿ ಕೈ ಹಾಕುತ್ತಿದ್ದಾರೆ. ರಾಜ್ಯದಲ್ಲಿ ಮಾತ್ರವಲ್ಲ, ಬೆಂಗಳೂರಿನಲ್ಲಿರುವ ಗುಂಡಿಗಳನ್ನೂ ಮುಚ್ಚೋಕೆ ಆಗುತ್ತಿಲ್ಲ' ಎಂದರು.

ದಾಖಲೆ ಕೊಡಲಿ: 'ಜೆಡಿಎಸ್ ಕೊಡುಗೆ ಏನು?' ಎಂದು ಹಾಸನದಲ್ಲಿ ಮುಖ್ಯಮಂತ್ರಿ ಪ್ರಶ್ನೆ ಮಾಡಿದ್ದಾರೆ. ಇತ್ತೀಚೆಗೆ ನನ್ನ ಆರೋಗ್ಯ ವಿಚಾರಿಸಲು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೊಬ್ಬರು ದೆಹಲಿಗೆ ಬಂದಿದ್ದರು. 2018ರಲ್ಲಿ ನೀವು ಕೊಟ್ಟ ₹500 ಕೋಟಿ ಅನುದಾನದಲ್ಲಿಯೇ ಇನ್ನೂ ಕೆಲಸ ನಡೆಯುತ್ತಿದೆ ಎಂದು ಅವರೇ ಹೇಳಿದರು. ಅನುದಾನದ ಬಗ್ಗೆ ಮಾತನಾಡುವ ಮುಖ್ಯಮಂತ್ರಿ, ನಾನು ಅಧಿಕಾರದಲ್ಲಿದ್ದಾಗ ಎಷ್ಟು ಕೊಟ್ಟಿದ್ದೇನೆ, ಅವರೆಷ್ಟು ಕೊಟ್ಟಿದ್ದಾರೆಂಬ ಬಗ್ಗೆ ಜನರ ಮುಂದೆ ದಾಖಲೆ ಇಡಲಿ' ಎಂದು ಸವಾಲು ಹಾಕಿದರು.



ಸಾಹಿತ್ಯ ಅಕಾಡೆಮಿಯಲ್ಲಿ ಎಸ್.ಎಲ್. ಭೈರಪ್ಪ ಸ್ಮರಣೆ

ನವದೆಹಲಿ: ಕನ್ನಡದ ಹೆಸರಾಂತ ಕಾದಂಬರಿಕಾರ ಎಸ್. ಎಲ್. ಭೈರಪ್ಪ ಅವರಿಗೆ ಸಾಹಿತ್ಯ ಅಕಾಡೆಮಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.


ಅಕಾಡೆಮಿಯ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಕಾಡೆಮಿಯ ಅಧ್ಯಕ್ಷ ಮಾಧವ ಕೌಶಿಕ್, ಕಾರ್ಯದರ್ಶಿ ಕೆ. ಶ್ರೀನಿವಾಸ ರಾವ್, ಕರ್ನಾಟಕದ ಸದಸ್ಯರಾದ ಬಸವರಾಜ ಸಾದರ, ಮನು ಬಳಿಗಾರ ಹಾಗೂ ಅಕಾಡೆಮಿಯ ಸದಸ್ಯರು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಬಸವರಾಜ ಸಾದರ ಅವರು ಭೈರಪ್ಪ ಅವರ ಬಾಲ್ಯದ ಕಷ್ಟದ ಬದುಕು, ವಾರಾನ್ನ ಉಂಡು ವಿದ್ಯಾಭ್ಯಾಸ ಮಾಡಿದ ದಿನಗಳು, ಸಿನಿಮಾ ಥಿಯೇಟರ್‌ನ ಗೇಟ್ ಕೀಪರ್ ಆಗಿದ್ದು, ನಾಟಕ ಕಂಪನಿಯ ಲೆಕ್ಕ ಬರೆಯುವ ಕೆಲಸ ಮಾಡಿದ್ದು, ರೈಲು ನಿಲ್ದಾಣದಲ್ಲಿ ಕೂಲಿ ಮಾಡಿದ್ದು ಇವೆಲ್ಲ ಸಂದರ್ಭಗಳನ್ನು ಪ್ರಸ್ತಾಪಿಸಿದರು. ಕಷ್ಟಗಳನ್ನೂ ಅನುಭವಿಸಿದ ಅವರು ಓದುವ ಹಂಬಲವೊಂದನ್ನೇ ಇಟ್ಟುಕೊಂಡ ಕಾರಣಕ್ಕಾಗಿ ಮಹತ್ವದ ಸಾಧಕರಾಗಿ ಹಾಗೂ ಕನ್ನಡದ ಶ್ರೇಷ್ಠ ಕಾದಂಬರಿಕಾರರಾಗಿ ಬೆಳೆದರು ಎಂದು ಹೇಳಿದರು.

ಮನು ಬಳಿಗಾರ ಅವರು ಭೈರಪ್ಪ ಅವರ ಜತೆಗಿನ ಒಡನಾಟವನ್ನು ಸ್ಮರಿಸಿಕೊಂಡರು. ಅಕಾಡೆಮಿ ಅಧ್ಯಕ್ಷ ಮಾಧವ ಕೌಶಿಕ್ ಮಾತನಾಡಿ, 'ಭೈರಪ್ಪ ಅವರು ಭಾರತದ ಮಹಾನ್ ಕಾದಂಬರಿಕಾರರು' ಎಂದರು.

ಚಿಟಿಕೆ ಸುದ್ದಿ

'ಶೇ 33 ಅಂಕ ನಿಗದಿ: ಮಕ್ಕಳ ಉತ್ಸಾಹ ಅಡಗಿಸುವ ಕ್ರಮ'



ಎಚ್‌.ವಿಶ್ವನಾಥ್

ಮೈಸೂರು: 'ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆ ತೇರ್ಗಡೆಯಾಗಲು ಬೇಕಾದ ಕನಿಷ್ಠ ಅಂಕವನ್ನು ಶೇ 33ಕ್ಕೆ ನಿಗದಿ ಮಾಡಿರುವ ರಾಜ್ಯ ಸರ್ಕಾರದ ಕ್ರಮವು ಮಕ್ಕಳ ಕಲಿಕಾ ಉತ್ಸಾಹವನ್ನು ಕುಗ್ಗಿಸುತ್ತದೆ' ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್‌.ವಿಶ್ವನಾಥ್ ಟೀಕಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕಲಿಕಾ ಸಾಮರ್ಥ್ಯ ಕಡಿಮೆ ಮಾಡುವ ಇಂಥ ನೀತಿಗಳನ್ನು ತರಬಾರದು' ಎಂದು ಪ್ರತಿಪಾದಿಸಿದರು.

'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗಾಗಿ ದಸರಾ ರಜೆಯನ್ನು ವಿಸ್ತರಿಸಿರುವುದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಶಾಲಾ ಶಿಕ್ಷಣ ಅಧೋಗತಿಗೆ ಹೋಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಸಮೀಕ್ಷೆಯಿಂದ ರಾಜ್ಯದ ಮಕ್ಕಳಿಗೆ ಊಟ–ಪಾಠ ಇಲ್ಲದಾಗಿದೆ. ಉತ್ತರ ಕರ್ನಾಟಕದಲ್ಲಿ ಮಕ್ಕಳು ಹಸಿವಿನಿಂದ ಮಲಗುತ್ತಿದ್ದಾರೆ. ಶಾಲೆಗಳನ್ನು ಕೂಡಲೇ ಆರಂಭಿಸಬೇಕು. ಅಕ್ಷರ ಹಾಗೂ ಆರೋಗ್ಯವನ್ನು ಕಡೆಗಣಿಸಬಾರದು' ಎಂದರು.

'ಸರ್ವೋದಯ'ಕ್ಕೆ ದರ್ಶನ್ ಪುಟ್ಟಣ್ಣಯ್ಯ ಕಾರ್ಯಾಧ್ಯಕ್ಷ

ಬೆಂಗಳೂರು: ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಸರ್ವೋದಯ ಕರ್ನಾಟಕ ಪಕ್ಷದ ಕಾರ್ಯಾಧ್ಯಕ್ಷರನ್ನಾಗಿ ಹಾಗೂ ಮೈಸೂರಿನ ಕರುಣಾಕರ ಬಿ. ಅವರನ್ನು ರಾಜ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಚಾಮರಸ ಮಾಲೀ ಪಾಟೀಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಇತ್ತೀಚೆಗೆ ನಡೆದ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ 10 ಜಿಲ್ಲೆಗಳ ಮುಖಂಡರು ಹಾಗೂ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಪಕ್ಷದ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸುವ ಉದ್ದೇಶದಿಂದ ದರ್ಶನ್ ಹಾಗೂ ಕರುಣಾಕರ ಬಿ. ಅವರನ್ನು ಸರ್ವಾನುಮತದಿಂದ ನೇಮಕ ಮಾಡಲಾಗಿದೆ' ಎಂದರು.

'ಮುಂಬರುವ ಎಲ್ಲ ಚುನಾವಣೆಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ಎಲ್ಲೆಡೆ ಸ್ಪರ್ಧೆ ಮಾಡುತ್ತೇವೆ. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುತ್ತಿದ್ದೇವೆ' ಎಂದು ತಿಳಿಸಿದರು.

ಮಾಜಿ ಸಚಿವ ನಾಗೇಂದ್ರ ಆಪ್ತ ನಾಗರಾಜ್ ಮನೆಯಲ್ಲಿ ಶೋಧ

ಎರಡು ಕಡೆಗಳಲ್ಲಿ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ/ಹೊಸಪೇಟೆ: ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಗುರುವಾರ ಏಕಕಾಲಕ್ಕೆ ಬಳ್ಳಾರಿ ಮತ್ತು ಹೊಸಪೇಟೆಯಲ್ಲಿ ಕಾರ್ಯಾಚರಣೆ ನಡೆಸಿದರು.

ಮಾಜಿ ಸಚಿವ ಬಿ. ನಾಗೇಂದ್ರ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಕೆ. ನಾಗರಾಜ್ ಅವರ ಮನೆಯಲ್ಲಿ ಪರಿಶೀಲನೆ ನಡೆಸಿದ ಅಧಿಕಾರಿಗಳು, ವಿವಿಧ ದಾಖಲೆಪತ್ರಗಳನ್ನು ಪರಿಶೀಲಿಸಿದರು. ಈ ವೇಳೆ ನಾಗರಾಜ್ ಅವರು ಮನೆಯಲ್ಲಿ ಇರಲಿಲ್ಲ.

ಬೇಲೆಕೇರಿ ಅದಿರು ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಪ್ರಸ್ತಾಪವಾಗಿದ್ದ ಈಗಲ್ ಟ್ರಾನ್ಸ್‌ಪೋರ್ಟ್‌ನಲ್ಲಿ ನಾಗರಾಜ್ ಅವರ ಹೆಸರೂ ಕೂಡ ಕೇಳಿ ಬಂದಿತ್ತು.

ಹೊಸಪೇಟೆಯಲ್ಲಿ ಪ್ರಿಯದರ್ಶಿನಿ ಹೋಟೆಲ್ ಮಾಲೀಕರೂ ಆಗಿರುವ ಗಣಿ, ರಿಯಲ್ ಎಸ್ಟೇಟ್ ಉದ್ಯಮಿ ಶ್ರೀನಿವಾಸ ರಾವ್ ಯಾನೆ ಸೀನಬಾಬು ಅವರ ಕಚೇರಿ, ಮನೆಗಳಲ್ಲಿ ಗುರುವಾರ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶೋಧ ನಡೆಸಿದರು.

ಹೋಟೆಲ್‌ನ ಲೆಕ್ಕಪತ್ರ ವ್ಯವಹಾರದಲ್ಲಿ ವ್ಯತ್ಯಾಸ ಕಂಡುಬಂದ ಕಾರಣ ಈ ದಾಳಿ ನಡೆದಿದೆ ಎನ್ನಲಾಗಿದ್ದು, ಸಂಜೆಯವರೆಗೆ ಪರಿಶೀಲನೆ ಮುಂದುವರಿದಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕಾರ್ಯಾಚರಣೆಯಲ್ಲಿ ಸ್ಥಳೀಯ ಬ್ಯಾಂಕ್‌ಗಳ ಸಿಬ್ಬಂದಿಯನ್ನೂ ಸೇರಿಸಿಕೊಳ್ಳಲಾಗಿತ್ತು ಎನ್ನಲಾಗಿದೆ.

ಜಿಲ್ಲೆಯಲ್ಲಿ ಅತಿ ಹೆಚ್ಚು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿರುವ ವ್ಯಕ್ತಿಗಳಲ್ಲಿ ಶ್ರೀನಿವಾಸ ರಾವ್ ಅವರೂ ಒಬ್ಬರಾಗಿದ್ದಾರೆ. ಕೆಲವು ಪ್ರಭಾವಿ ವ್ಯಕ್ತಿಗಳು, ಗಣಿ ಉದ್ಯಮಿಗಳ ಬೇನಾಮಿ ವ್ಯವಹಾರ ಇಲ್ಲಿ ನಡೆಯುತ್ತಿತ್ತು ಎಂದು ಹೇಳಲಾಗಿದೆ. ಕೇಂದ್ರ ಹಣಕಾಸು ಸಚಿವರ ಜಿಲ್ಲಾ ಪ್ರವಾಸದ ವೇಳೆಯಲ್ಲೇ ಈ ದಾಳಿ ನಡೆದಿದೆ.

20 ಕಡೆಗಳಲ್ಲಿ ಇ.ಡಿ ಶೋಧ

ನವದೆಹಲಿ/ಬೆಂಗಳೂರು (ಪಿಟಿಐ): ಬೇಲೆಕೇರಿ ಬಂದರಿನ ಮೂಲಕ ಕಬ್ಬಿಣದ ಅದಿರು ಅಕ್ರಮ ರಫ್ತು ಪ್ರಕರಣ ಆರೋಪದಡಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕರ್ನಾಟಕ ಹಾಗೂ ಹರಿಯಾಣದ ವಿವಿಧೆಡೆಗಳಲ್ಲಿ ಗುರುವಾರ ಶೋಧ ಕಾರ್ಯ ನಡೆಸಿದರು.

ಹರಿಯಾಣದ ಗುರುಗ್ರಾಮ ಸೇರಿದಂತೆ ಕರ್ನಾಟಕದ ಬೆಂಗಳೂರು, ವಿಜಯನಗರ ಜಿಲ್ಲೆಯ ಹೊಸಪೇಟೆಯ 20 ಕಡೆಗಳಲ್ಲಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ದಾಳಿ ನಡೆಸಲಾಗಿದೆ.

ಬೇಲೆಕೇರಿ ಬಂದರಿನ ಮೂಲಕ ಕಬ್ಬಿಣದ ಅದಿರನ್ನು ಅಕ್ರಮವಾಗಿ ರಫ್ತು ಮಾಡಿದ ಪ್ರಕರಣಗಳ ತನಿಖೆ ನಡೆಸುವಂತೆ ಸಿಬಿಐಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಈ ಪ್ರಕರಣದಲ್ಲಿ ಹಣದ ಅಕ್ರಮ ವರ್ಗಾವಣೆ ನಡೆದಿರುವುದು ಸಿಬಿಐ ಸಲ್ಲಿಸಿದ್ದ ಆರೋಪಪಟ್ಟಿಯಿಂದ ತಿಳಿದುಬಂದಿತ್ತು. ಅದರ ಆಧಾರದಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಂಎಸ್‌ಪಿಎಲ್ ಲಿಮಿಟೆಡ್ (ಬಲ್ಡೋಟಾ ಸಮೂಹ), ಗ್ರೀನ್‌ಟೆಕ್ಸ್ ಮೈನಿಂಗ್ ಇಂಡಸ್ಟ್ರೀಸ್ ಲಿಮಿಟೆಡ್, ಶ್ರೀನಿವಾಸ ಮಿನರಲ್ಸ್ ಟ್ರೇಡಿಂಗ್ ಕಂಪನಿ, ಅರ್ಷದ್ ಎಕ್ಸ್‌ಪೋರ್ಟ್ಸ್, ಎಸ್‌ವಿಎಂ ಎನ್‌ಇಟಿಟಿ ಪ್ರಾಜೆಕ್ಟ್ ಸಲ್ಯೂಷನ್ಸ್ ಪ್ರೈ.ಲಿ ಹಾಗೂ ಆಲ್‌ಫೈನ್ ಮಿನ್‌ಮೆಟಲ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಹಾಗೂ ಅವುಗಳ ಪ್ರಮುಖರ ಮನೆಗಳಲ್ಲಿ ಶೋಧ ನಡೆಸಲಾಗಿದೆ ಎಂದು ಹೇಳಿದ್ದಾರೆ.

2ನೇ ದಿನವೂ ಎಸ್‌ಐಟಿ ಶೋಧ

ಕಲಬುರಗಿ: ಆಳಂದ ಕ್ಷೇತ್ರದ ಮತದಾರರ ಹೆಸರನ್ನು ಮತಪಟ್ಟಿಯಿಂದ ಅಕ್ರಮವಾಗಿ ತೆಗೆದುಹಾಕಲು ಯತ್ನಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಎಸ್‌ಐಟಿ ಅಧಿಕಾರಿಗಳು ನಗರದಲ್ಲಿ ಗುರುವಾರವೂ ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ಪ್ರಕರಣ ಸಂಬಂಧ ಐವರನ್ನು ಎಸ್‌ಐಟಿ ಇತ್ತೀಚೆಗೆ ವಶಕ್ಕೆ ಪಡೆದಿತ್ತು. ಬಳಿಕ ಸರ್ಚ್ ವಾರೆಂಟ್ ಪಡೆದು ಇದೀಗ ಅವರ ಮನೆಗಳಲ್ಲಿ ಶೋಧ ನಡೆಸಲು ಅಧಿಕಾರಿಗಳು ಕಲಬುರಗಿಗೆ ಬಂದಿದ್ದರು. ಬುಧವಾರ ನಾಲ್ಕು ಕಡೆ ದಾಳಿ ನಡೆಸಿದ್ದರು.

ಗುರುವಾರ ನಗರದ ಹಾಗರಗಾ ಕ್ರಾಸ್ ಸಮೀಪದ ಜುಬೇರ್ ಕಾಲೊನಿ ಅಕ್ರಂ ಎಂಬುವರ ಬಾಡಿಗೆ ಮನೆ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಿದರು. ಸಿಐಡಿ ಎಸ್‌ಪಿ ಶುಭನ್ವಿತಾ ನೇತೃತ್ವದ ಅಧಿಕಾರಿಗಳ ತಂಡ ಗುರುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರ ತನಕ ಶೋಧ ನಡೆಸಿತು.

'ಅಕ್ರಂ ಅವರ ಮನೆಯಲ್ಲಿ ಮತದಾರರ ಗುರುತಿನ ಚೀಟಿ ಮುದ್ರಿಸಲು ಬಳಸುವ ಕಾಗದ, ಮಸಿ, ಮತದಾರರ ಪಟ್ಟಿ ಸಿಕ್ಕಿದೆ' ಎಂದು ಮೂಲಗಳು ಹೇಳಿವೆ.

'ಬುಧವಾರ ನಡೆಸಿದ್ದ ದಾಳಿ ಪೈಕಿ ರಾಮನಗರ ಬಡಾವಣೆಯ ಅಸ್ಲಂ ಎಂಬುವರ ಮನೆಯಲ್ಲಿ ಮತದಾರರ ಗುರುತಿನ ಚೀಟಿಗಳು, ಮೊಬೈಲ್‌ಗಳು, ಲ್ಯಾಪ್‌ಟಾಪ್‌ಗಳು ಪತ್ತೆಯಾಗಿವೆ' ಎಂದಿವೆ.

ಪಾಂಡವಪುರ ಎಸಿ ಕಚೇರಿ ಜಪ್ತಿ

ಪ್ರಜಾವಾಣಿ ವಾರ್ತೆ

ಪಾಂಡವಪುರ: ರೈತರಿಂದ ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ ಪರಿಹಾರ ನೀಡದ ಕಾರಣ ಪಟ್ಟಣದ ಉಪ ವಿಭಾಗಾಧಿಕಾರಿ ಕಚೇರಿಯ ಪೀಠೋಪಕರಣಗಳನ್ನು ನ್ಯಾಯಾಲಯದ ಸಿಬ್ಬಂದಿ ಗುರುವಾರ ಜಪ್ತಿ ಮಾಡಿದರು.

ಮೈಸೂರು–ಬೆಂಗಳೂರು ಜೋಡಿ ರೈಲು ಮಾರ್ಗ ನಿರ್ಮಾಣ ಹಾಗೂ ಮೈಸೂರು– ಬೆಂಗಳೂರು ಚತುಷ್ಪಥ ಹೆದ್ದಾರಿ ರಸ್ತೆ ನಿರ್ಮಾಣ ಸಂಬಂಧ ಭೂಮಿ ಸ್ವಾಧೀನ ಮಾಡಿಕೊಂಡ ಸರ್ಕಾರವು ಪರಿಹಾರ ನೀಡಿರಲಿಲ್ಲ.

ಶ್ರೀರಂಗಪಟ್ಟಣ ಪ್ರಧಾನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ಆದೇಶದ ಮೇರೆಗೆ ಸಿಬ್ಬಂದಿಯು ಕಚೇರಿಯಲ್ಲಿದ್ದ ಕಂಪ್ಯೂಟರ್, ಟೇಬಲ್, ಚೇರ್‌ಗಳು ಸೇರಿ ಸಾಮಗ್ರಿಗಳನ್ನು ಜಪ್ತಿ ಮಾಡಿ, ಪಾಂಡವಪುರ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಾಗಿಸಿದರು.

ರೈತರಾದ ಬಾಲಕೃಷ್ಣ ಮತ್ತು ಚಂದ್ರಶೇಖರ್ ಅವರಿಗೆ ಸೇರಿದ 12 ಗುಂಟೆ ಜಮೀನನ್ನು 2013ರಲ್ಲಿ ರೈಲ್ವೆ ಇಲಾಖೆಗೆ ಪಾಂಡವಪುರ ಉಪವಿಭಾಗಾಧಿಕಾರಿ ಸ್ವಾಧೀನಕ್ಕೆ ಪಡೆದಿದ್ದರು. ಆದರೆ ₹1.37 ಕೋಟಿ ಭೂ ಪರಿಹಾರ ನೀಡಿರಲಿಲ್ಲ. ಜಪ್ತಿ ವೇಳೆ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿರಲಿಲ್ಲ.



ನ್ಯಾಯಾಲಯದ ಸಿಬ್ಬಂದಿ ಹಾಗೂ ವಕೀಲರು ಪಾಂಡವಪುರ ಉಪವಿಭಾಗಾಧಿಕಾರಿ ಕಚೇರಿ ಪೀಠೋಪಕರಣಗಳನ್ನು ಗುರುವಾರ ಜಪ್ತಿ ಮಾಡಿದರು



ವಿಜಯಪುರ ಬಂದ್ ಹಿನ್ನೆಲೆಯಲ್ಲಿ ದಲಿತ ಸಂಘಟನೆಗಳ ಒಕ್ಕೂಟ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ಒಕ್ಕೂಟಗಳಿಂದ ಗುರುವಾರ ನಗರದ ಗಾಂಧಿ ಚೌಕಿಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಜಾತಿವಾರು ಸಮೀಕ್ಷೆಗೆ ಚಿತ್ರೋದ್ಯಮ ಬೆಂಬಲ

ಪ್ರಜಾವಾಣಿ ವಾರ್ತೆ



ಜಯಮಾಲ


ಬೆಂಗಳೂರು: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ (ಜಾತಿವಾರು ಸಮೀಕ್ಷೆ) ಎಲ್ಲರೂ ಭಾಗವಹಿಸಿ ಮಾಹಿತಿ ಹಂಚಿಕೊಳ್ಳಿ ಎಂದು ನಟಿ ಜಯಮಾಲ ಕರೆ ನೀಡಿದರು.

ಗುರುವಾರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸದುದ್ದೇಶದಿಂದ ನಡೆಯುತ್ತಿರುವ ಸಮೀಕ್ಷೆಯಿದು. ತಪ್ಪು ಮಾಹಿತಿ ನೀಡಿ ಯಾರೂ ಇದರ ಹಾದಿ ತಪ್ಪಿಸಬೇಡಿ. ಸರ್ಕಾರ ನಡೆಸುತ್ತಿರುವ ಈ ಸಮೀಕ್ಷೆಯಿಂದ ಸಮಾಜದ ದುರ್ಬಲ ವರ್ಗ, ಹೆಣ್ಣುಮಕ್ಕಳು, ಹಿಂದುಳಿದ ವರ್ಗದವರು ಸೇರಿದಂತೆ ಹಲವರಿಗೆ ಅನುಕೂಲ ಆಗಲಿದೆ. ಚಿತ್ರರಂಗದವರು ಈ ಸಮೀಕ್ಷೆ ಕುರಿತು ಜಾಗೃತಿ ಮೂಡಿಸಬೇಕೆಂದು ರಾಜ್ಯ ಸರ್ಕಾರ ನಮ್ಮಲ್ಲಿ ಕೇಳಿಕೊಂಡಿದೆ. ಯಾವುದೇ ಸರ್ಕಾರ ಇದ್ದರೂ ಚಿತ್ರರಂಗದ ಜತೆ ನಿಂತಿದೆ. ಸರ್ಕಾರ ನಮಗೆ ತವರುಮನೆಯಿದ್ದಂತೆ. ಅದರ ಕಾರ್ಯಕ್ರಮವನ್ನು ಬೆಂಬಲಿಸುವುದು ನಮ್ಮ ಕರ್ತವ್ಯ' ಎಂದು ಅವರು ತಿಳಿಸಿದರು.

'ಯಾವುದೇ ಪಕ್ಷ ಆಡಳಿತದಲ್ಲಿ ಇದ್ದರೂ ಅದರ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು ವಾಣಿಜ್ಯ ಮಂಡಳಿ ಹೊಣೆ. ಈ ಸಮೀಕ್ಷೆ ಇನ್ನು ನಾಲ್ಕು ದಿನಗಳು ಮಾತ್ರ ನಡೆಯಲಿದ್ದು ಎಲ್ಲರೂ ಭಾಗಿಯಾಗಿ ಸಂಬಂಧಿತ ಮಾಹಿತಿ ನೀಡಿ' ಎಂದು ನಟಿ ತಾರಾ ಮನವಿ ಮಾಡಿಕೊಂಡರು.

ಅನಂತನಾಗ್‌ಗೆ ಅಭಿನಂದನೆ

'ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿರುವ ಅನಂತನಾಗ್ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹಾಸನ ರಘು ಅವರನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ವತಿಯಿಂದ ಅಭಿನಂದಿಸುವ ನಿಟ್ಟಿನಲ್ಲಿ ಅ.18ರಂದು ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಾಮರಾಜಪೇಟೆಯ ಕಲಾವಿದರ ಸಂಘದಲ್ಲಿ ಸಂಜೆ ಐದು ಗಂಟೆಯಿಂದ ಕಾರ್ಯಕ್ರಮ ನಡೆಯಲಿದೆ. ಇದು ಇಡೀ ಚಿತ್ರರಂಗ ಸಂಭ್ರಮಿಸುವ ಕಾರ್ಯಕ್ರಮ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಹೇಳಿದರು.



ನರಸಿಂಹಲು

ಸಿಜೆಐ ಮೇಲೆ ಶೂ ಎಸೆತ ಯತ್ನ ಖಂಡಿಸಿ ವಿಜಯಪುರ ಬಂದ್

ಪ್ರಜಾವಾಣಿ ವಾರ್ತೆ

ವಿಜಯಪುರ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರ ಮೇಲೆ ವಕೀಲ ಶೂ ಎಸೆಯಲು ಯತ್ನಿಸಿದ ಘಟನೆ ಖಂಡಿಸಿ ದಲಿತ ಸಂಘಟನೆಗಳ ಒಕ್ಕೂಟ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ಒಕ್ಕೂಟದಿಂದ ಗುರುವಾರ ವಿಜಯಪುರ ಬಂದ್ ಆಚರಿಸಲಾಯಿತು.

ನಗರದಲ್ಲಿ ಬಸ್ ಸಂಚಾರ ಸಂಪೂರ್ಣ ಸ್ಥಗಿತವಾಗಿತ್ತು. ಬಸ್ ಮತ್ತು ಪ್ರಯಾಣಿಕರು ಇಲ್ಲದೇ ಜಿಲ್ಲಾ ಕೇಂದ್ರ ಬಸ್ ನಿಲ್ದಾಣ ಬಿಕೋ ಎನ್ನುತ್ತಿತ್ತು. ಹೋಟೆಲ್, ಅಂಗಡಿ–ಮಳಿಗೆಗಳು, ಶಾಪಿಂಗ್ ಮಾಲ್‌ಗಳು, ಮಾರುಕಟ್ಟೆ ಬಾಗಿಲು ಮುಚ್ಚಿದ್ದವು. ಜನಸಂಚಾರ ವಿರಳವಾಗಿತ್ತು. ನಗರದ ಪ್ರಮುಖ ವೃತ್ತಗಳಲ್ಲಿ ಪ್ರತಿಭಟನಾಕಾರರು ಟೈರಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಪ್ರೊ.ರಾಜು ಆಲಗೂರ, ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್, ಅಹಿಂದ ಮುಖಂಡರಾದ ಸೋಮನಾಥ ಕಳ್ಳಿಮನಿ, ಎಸ್.ಎಂ. ಪಾಟೀಲ ಗಣಿಹಾರ ಸೇರಿ ವಿವಿಧ ಮುಖಂಡರ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಜಾಥಾ ನಡೆಯಿತು.

ಗುರುವಾರ ನಡೆಯಬೇಕಿದ್ದ ಪ್ರಥಮ ಮತ್ತು ದ್ವಿತೀಯ ಪಿಯು ಪರೀಕ್ಷೆಗಳನ್ನು ಬಂದ್ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು. ಮದ್ಯ ಮಾರಾಟ ನಿರ್ಬಂಧಿಸಲಾಗಿತ್ತು. ಪೊಲೀಸರು ಕಟ್ಟೆಚ್ಚರ ವಹಿಸಿದ್ದರು.

'ಸಮವಸ್ತ್ರ ಪೂರೈಸಲು ಅನುಮತಿಗೆ ಮನವೊಲಿಕೆ'



ನಾಗೇಂದ್ರ

ಹುಬ್ಬಳ್ಳಿ: 'ವಿದ್ಯಾವಿಕಾಸ ಯೋಜನೆಯಡಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಶಾಲಾ ಮಕ್ಕಳಿಗೆ ಸಮವಸ್ತ್ರ ಪೂರೈಸಲು ಅವಕಾಶ ನೀಡುವಂತೆ ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಇಲಾಖೆ ಸಚಿವರ ಮನವೊಲಿಸಲಾಗುವುದು' ಎಂದು ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್ ಹೇಳಿದರು.

'ಸಿಬ್ಬಂದಿ ಮತ್ತು ಆರ್ಥಿಕ ಸಂಪನ್ಮೂಲ ಕೊರತೆಯಿಂದ ಸಮವಸ್ತ್ರ ಪೂರೈಸಲು ಆಗುತ್ತಿಲ್ಲ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರವು ನಿಗಮಕ್ಕೆ ಪ್ರಸಕ್ತ ವರ್ಷ ₹10 ಕೋಟಿ ಅನುದಾನ ನೀಡಿದೆ. ಅಭಿವೃದ್ಧಿ ಕುಂಠಿತವಾಗಲು ಅನುದಾನ ಕೊರತೆಯೂ ಕಾರಣ. ಹೀಗಾಗಿ ₹30 ಕೋಟಿ ಅನುದಾನ ನೀಡುವಂತೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಹೇಳಿದರು.

'ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಜವಳಿ ಸಂಪನ್ಮೂಲ ಅಭಿವೃದ್ಧಿ ನಿಗಮದ ವಿಲೀನ ಪ್ರಕ್ರಿಯೆ ನಡೆದಿದೆ. ಅಧಿಕಾರಿಗಳು ಈ ಬಗ್ಗೆ ವರದಿ ಸಿದ್ಧಪಡಿಸುತ್ತಿದ್ದಾರೆ' ಎಂದರು.

ಯಕ್ಷಗಾನ ಭಾಗವತ ದಿನೇಶ್ ಅಮ್ಮಣ್ಣಾಯ ನಿಧನ



ಉಜಿರೆ (ದಕ್ಷಿಣ ಕನ್ನಡ): ತೆಂಕುತಿಟ್ಟಿನ ಹೆಸರಾಂತ ಭಾಗವತ ದಿನೇಶ್ ಅಮ್ಮಣ್ಣಾಯ (66) ಅವರು ಬೆಳ್ತಂಗಡಿ ತಾಲ್ಲೂಕಿನ ಹತ್ಯಡ್ಕ ಗ್ರಾಮದ ಹೊಸ್ತೋಟದಲ್ಲಿರುವ ಅವರ ನಿವಾಸದಲ್ಲಿ ಅಲ್ಪಕಾಲದ ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ದಾಮೋದರ ಮಂಡೆಚ್ಚ ಮತ್ತು ಹರಿನಾರಾಯಣ ಬೈಪಾಡಿತ್ತಾಯ ಅವರಿಂದ ಅನುಕ್ರಮವಾಗಿ ಭಾಗವತಿಕೆ ಮತ್ತು ಹಿಮ್ಮೇಳವಾದನ ಅಭ್ಯಾಸ ಮಾಡಿ ಅವರ ಶಿಷ್ಯರಾಗಿದ್ದ ಅಮ್ಮಣ್ಣಾಯ, ಪುತ್ತೂರು ಮೇಳದ ಮೂಲಕ ಕಲಾ ಜೀವನ ಆರಂಭಿಸಿದ್ದರು. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಯಕ್ಷಗಾನ ರಂಗದಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ್ದರು.

ತೆಂಕುತಿಟ್ಟಿನ ಪ್ರಸಿದ್ಧ ಡೇರೆ ಮೇಳವಾಗಿದ್ದ ಕರ್ನಾಟಕ ಮೇಳದಲ್ಲಿ ಭಾಗವತರಾಗಿದ್ದ ಅವರು ತಮ್ಮ ಕಂಚಿನ ಕಂಠ ಹಾಗೂ ವಿಶಿಷ್ಟ ರಾಗ ಶೈಲಿಯಿಂದಾಗಿ ಭಾರಿ ಅಭಿಮಾನಿಗಳನ್ನು ಗಳಿಸಿದ್ದರು. ಕರುಣಾ ರಸದ ಪದ್ಯಗಳನ್ನು ರಾಗಬದ್ಧವಾಗಿ ಹಾಡುವುದಕ್ಕೆ ಹೆಸರುವಾಸಿಯಾಗಿದ್ದರು. ಅಭಿಮಾನಿಗಳು ಅವರಿಗೆ 'ರಸರಾಗ ಚಕ್ರವರ್ತಿ' ಎಂದು ಬಿರುದು ನೀಡಿದ್ದರು.

ಕದ್ರಿ, ಎಡನೀರು ಮೇಳಗಳಲ್ಲೂ ತಿರುಗಾಟ ನಡೆಸಿದ್ದರು. ಕೆಲ ವರ್ಷಗಳಿಂದ ವಿಶ್ರಾಂತ ಜೀವನ ನಡೆಸುತ್ತಿದ್ದರು. ಅತಿಥಿ ಭಾಗವತರಾಗಿ ಯಕ್ಷಗಾನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಎಡನೀರು ಮಠದ ಸ್ವಾಮೀಜಿಯವರ ಚಾತುರ್ಮಾಸ್ಯದಲ್ಲಿ ಈಚೆಗೆ ಕೊನೆಯದಾಗಿ ಭಾಗವತಿಕೆ ನಡೆಸಿದ್ದರು. ಎರಡು ತಿಂಗಳಿಂದ ಅವರ ಆರೋಗ್ಯ ಹದಗೆಟ್ಟಿತ್ತು.

ಫಲ್ಗುಣಿ ನದಿಭಾಗದಲ್ಲಿ ಜಲಮಾರ್ಗ ಅಭಿವೃದ್ಧಿ ಯೋಜನೆಗೆ ಸಾರ್ವಜನಿಕರ ಆಕ್ಷೇಪ

ಹೊಯ್ಗೆ ಬಜಾರ್– ಕುಳೂರು ನಡುವೆ ರೊರೊ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಜಲಸಾರಿಗೆ ಮಂಡಳಿಯು ಸಾಗರಮಾಲಾ ಯೋಜನೆಯಡಿ ಹೊಯ್ಗೆಬಜಾರದಿಂದ ಕೂಳೂರು ನಡುವಿನ ಜಲಮಾರ್ಗದಲ್ಲಿ ರೊರೊ ಹಡಗುಗಳ ಸಂಚಾರಕ್ಕೆ ಯೋಜನೆ ರೂಪಿಸಿದೆ.

ಕೂಳೂರು ಮತ್ತು ಹಳೆ ಬಂದರಿನಲ್ಲಿ ತಲಾ ಒಂದು ಜೆಟ್ಟಿ ನಿರ್ಮಾಣ, ಟರ್ಮಿನಲ್ ಕಟ್ಟಡ ನಿರ್ಮಾಣ ಸೇರಿದಂತೆ ಜಲಮಾರ್ಗ ಅಭಿವೃದ್ಧಿಗೆ ಒಟ್ಟು ₹29.62 ಕೋಟಿ ಅಂದಾಜು ವೆಚ್ಚದ ಯೋಜನೆ ಸಿದ್ಧಪಡಿಸಲಾಗಿದ್ದು, ಮೊದಲ ಹಂತದ ಕಾಮಗಾರಿಯನ್ನು-ಗುತ್ತಿಗೆದಾರ ಸತೀಶ್ ಶೇಟ್ ₹13.90 ಕೋಟಿ ಮೊತ್ತಕ್ಕೆ ಗುತ್ತಿಗೆ ಪಡೆದಿದ್ದಾರೆ.

ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅಧ್ಯಕ್ಷತೆಯಲ್ಲಿ ಗುರುವಾರ ಇಲ್ಲಿ ನಡೆದ ಸಾರ್ವಜನಿಕ ಅಹವಾಲು ಸಭೆಯಲ್ಲಿ ಪರಿಸರಾಸಕ್ತರು, ಸ್ಥಳೀಯ ಮೀನುಗಾರರು, ಪ್ರಸ್ತಾವಿತ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿದರು.

ಬಂದರು ಮತ್ತು ಮೀನುಗಾರಿಕಾ ಇಲಾಖೆಯ ಕಾರ್ಯ ನಿರ್ವಾಹಕ ಎಂಜಿನಿಯರ್ ಪ್ರಸನ್ನ ಕುಮಾರ್ ಮಾಹಿತಿ ನೀಡಿ, 'ಉದ್ದೇಶಿತ ಯೋಜನೆಗೆ 2022ರ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. ತಲಾ 400 ಟನ್ ಸಾಗಣೆ ಸಾಮರ್ಥ್ಯದ ಎರಡು ರೊರೊ ಹಡಗುಗಳು ಕಾರ್ಯಾಚರಿಸಲಿದ್ದು, ಪ್ರತಿದಿನ 200 ಪ್ರಯಾಣಿಕರೊಂದಿಗೆ ಆರು ರೊರೊ ಟ್ರಿಪ್‌ಗಳು ಇರುತ್ತವೆ. ಎರಡು ಹಡಗುಗಳಿಂದ ಒಟ್ಟು 12 ಟ್ರಿಪ್ ಆಗಬಹುದು. ಯೋಜನೆ ಅನುಷ್ಠಾನಕ್ಕೆ 18 ತಿಂಗಳ ಗಡುವು ನಿಗದಿಯಾಗಿದೆ' ಎಂದರು.

ರಸ್ತೆ ಮಾರ್ಗದಲ್ಲಿ 11.5 ಕಿ.ಮೀ ಪ್ರಯಾಣಕ್ಕೆ ಅರ್ಧ ತಾಸು ಬೇಕಾದರೆ, ರೊರೊ ಹಡಗಿನಲ್ಲಿ 8 ಕಿ.ಮೀ ಪ್ರಯಾಣಿಸಿ 15 ನಿಮಿಷಗಳಲ್ಲಿ ನಿಗದಿತ ಸ್ಥಳ ತಲುಪಬಹುದು ಎಂದು ಅವರು ಹೇಳಿದರು.

ಮುಖ್ಯಾಂಶಗಳು

- ಪ್ರತಿದಿನ ಎರಡು ಹಡಗುಗಳಿಂದ ಒಟ್ಟು 12 ಟ್ರಿಪ್
- ಪ್ರತಿ ಟ್ರಿಪ್‌ನ ಸಾಗಣೆ ಸಾಮರ್ಥ್ಯ 400 ಟನ್

'ಸಾಂಪ್ರದಾಯಿಕ ಮೀನುಗಾರಿಕೆಗೆ ಹೊಡೆತ'

ಕೋಸ್ಟಲ್ ಬರ್ತ್, ಸಾಗರಮಾಲಾ ಮೊದಲಾದ ಯೋಜನೆಗಳಿಂದ ಕಸಬಾ ಬೆಂಗ್ರೆಯ ಫಲ್ಗುಣಿ ಸಾಂಪ್ರದಾಯಿಕ ಮೀನುಗಾರರ ಸಂಘದವರು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ಇಂತಹ ಯೋಜನೆಗಳಿಂದ ಸಾಂಪ್ರದಾಯಿಕ ಮೀನುಗಾರಿಕೆ ಮೇಲೆ ನೇರ ಪರಿಣಾಮವಾಗುತ್ತದೆ. ಮೀನುಗಾರರನ್ನು ಕತ್ತಲೆಯಲ್ಲಿಟ್ಟು ಯಾವುದೇ ಯೋಜನೆ ಜಾರಿಗೊಳಿಸಬೇಡಿ ಎಂದು ಕಸಬಾ ಬೆಂಗ್ರೆಯ ಅಬ್ದುಲ್ ತಯ್ಯೂಬ್ ಹೇಳಿದರು.

ಕಸಬಾ ಬೆಂಗ್ರೆ ಜಮಾತ್ ಅಧ್ಯಕ್ಷ ಬಿಲಾಲ್ ಮೊಯ್ದಿನ್ ಮಾತನಾಡಿ, 'ದ್ವೀಪವಾಗಿರುವ ಕಸಬಾ ಬೆಂಗ್ರೆಯಲ್ಲಿ 2,000 ಕುಟುಂಬಗಳು ಇವೆ. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಇಲ್ಲಿನ ಜನರು ಅನುಭವಿಸುತ್ತಿರುವ ತೊಂದರೆಯನ್ನು ತಿಳಿದುಕೊಳ್ಳಬೇಕು' ಎಂದರು.

'ಸ್ಥಳೀಯರ ಸಮಸ್ಯೆ ಆಲಿಸಿ'

'ಅಭಿವೃದ್ಧಿಯನ್ನು ವಿರೋಧಿಸುವುದಿಲ್ಲ, ಆದರೆ, ಜನರಿಗೆ ತೊಂದರೆ ನೀಡಿ ಯೋಜನೆ ಜಾರಿ ಆಗಬಾರದು. ಅಕ್ಟೋಬರ್‌ನಿಂದ ಏಪ್ರಿಲ್‌ವರೆಗೆ ಇಲ್ಲಿ ಲಕ್ಷದ್ವೀಪದ ಹಡಗುಗಳು ಬರುತ್ತವೆ. ದಕ್ಕೆಯಲ್ಲಿ ಜಾಗದ ಕೊರತೆಯ ಪರಿಣಾಮವಾಗಿ ಇಲ್ಲಿನ ಉದ್ಯಮ ಸೊರಗಿದೆ. ಲಕ್ಷದ್ವೀಪದಿಂದ ಬರುವವರು ಕೊಚ್ಚಿ ಬಂದರು ಕಡೆ ಆಕರ್ಷಿತರಾಗಿದ್ದಾರೆ. ಹೀಗಾಗಿ, ಯಾವುದೇ ಯೋಜನೆ ಅನುಷ್ಠಾನದ ಪೂರ್ವದಲ್ಲಿ ಸ್ಥಳೀಯರಿಗೆ ಆಗುವ ಸಮಸ್ಯೆಯನ್ನು ಮೊದಲು ಪರಿಶೀಲಿಸಬೇಕು' ಎಂದು ಈ ವಾರ್ಡ್‌ನ ಮುಖಂಡ ಅಬ್ದುಲ್ ಲತೀಫ್ ಹೇಳಿದರು.

ಅಧಿಕಾರ ಬಿಡುವಂತೆ ಹೈಕಮಾಂಡ್ ತಂದೆಗೆ ಹೇಳಿಲ್ಲ: ಯತೀಂದ್ರ

ಪ್ರಜಾವಾಣಿ ವಾರ್ತೆ

ಮೈಸೂರು: 'ಹೈಕಮಾಂಡ್ ಅಥವಾ ಬೇರೆ ನಾಯಕರಾಗಲಿ ನವೆಂಬರ್ ಆದ ಮೇಲೆ ಅಧಿಕಾರ ಬಿಡಿ ಎಂದಿಲ್ಲ ಎಂದು ತಂದೆ ತಿಳಿಸಿದ್ದಾರೆ' ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, 'ಐದು ವರ್ಷ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ. ಹೀಗಾಗಿ, ಯಾವ ಕ್ರಾಂತಿಯೂ ಇಲ್ಲ' ಎಂದು ಪ್ರತಿಕ್ರಿಯಿಸಿದರು.

'ಡಿಸೆಂಬರ್‌ನಲ್ಲಿ ಸಂಪುಟ ಪುನರ್‌ರಚನೆ ಮಾಡುವುದಾಗಿ ತಂದೆ ಹೇಳಿದ್ದಾರೆ. ನಾನು ಮುಖ್ಯಮಂತ್ರಿಯಾಗಿರುವವರೆಗೆ ನಿನ್ನನ್ನು ಮಂತ್ರಿಯನ್ನಾಗಿ ಮಾಡುವುದಿಲ್ಲ ಎಂದೂ ಹೇಳಿದ್ದಾರೆ' ಎಂದರು. 'ಈಗಿನ ಪರಿಸ್ಥಿತಿಯಲ್ಲಿ ಅವರೇ ಅವಧಿ ಪೂರ್ಣಗೊಳಿಸುತ್ತಾರೆ' ಎಂದರು.

ಶುಕ್ರವಾರ, ಅಕ್ಟೋಬರ್ 17, 2025 | ₹ 7.00 |
prajavani.net prajavani
www.prajavani.net

ಕಲಾವಿದನ ಕೈಯಲ್ಲಿ ಕುಂಚ...
ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಕಲಾವಿದರೊಬ್ಬರು ಕಾಳಿ ಮಾತೆಯ ವಿಗ್ರಹಕ್ಕೆ ಬಣ್ಣ ಹಚ್ಚಿದರು. ಕಾಳಿ ಪೂಜೆಗೆ ಭರ್ಜರಿ ತಯಾರಿ ನಡೆದಿದೆ



ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಟಾಲಿವುಡ್‌ನತ್ತ ಸಂಪದಾ ಹೆಜ್ಜೆ 2

ನೆನಪುಗಳ ಮೆಲುಕು
ಭಾರತ ಪ್ರವಾಸದಲ್ಲಿರುವ ಶ್ರೀಲಂಕಾ ಪ್ರಧಾನಿ ಹರಿಣಿ ಅಮರಸೂರ್ಯ ಅವರು ನವದೆಹಲಿಯಲ್ಲಿ ತಾವು ವ್ಯಾಸಂಗ ಮಾಡಿದ್ದ ದಿ ಹಿಂದೂ ಕಾಲೇಜಿಗೆ ಗುರುವಾರ ಭೇಟಿನೀಡಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು



‘ರಷ್ಯಾ ತೈಲ: ಭಾರತ ಖರೀದಿಸಲ್ಲ’

ಮೋದಿ ಭರವಸೆ: ಟ್ರಂಪ್ ಪ್ರತಿಪಾದನೆ

ವಾಷಿಂಗ್ಟನ್ (ಪಿಟಿಐ): ‘ರಷ್ಯಾದಿಂದ ಇನ್ನು ಮುಂದೆ ಕಚ್ಚಾ ತೈಲ ಖರೀದಿಸುವುದಿಲ್ಲ ಎಂದು ನನ್ನ ಸ್ನೇಹಿತ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಿದ್ದಾರೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಪಾದಿಸಿದ್ದಾರೆ.

‘ಉಕ್ರೇನ್‌ನ ಮೇಲೆ ರಷ್ಯಾ ನಡೆಸುತ್ತಿರುವ ಸಂಘರ್ಷ ಕೊನೆಗೊಳಿಸುವ ದಿಸೆಯಲ್ಲಿ ಇದೊಂದು ಮಹತ್ತರ ಹೆಜ್ಜೆಯಾಗಿದೆ’ ಎಂದೂ ಅವರು ಬಣ್ಣಿಸಿದ್ದಾರೆ.

ಅಮೆರಿಕದ ನಿರಂತರ ಒತ್ತಡ, ಸುಂಕ ಹೆಚ್ಚಳದ ಬೆದರಿಕೆ ಹೊರತಾಗಿಯೂ ರಷ್ಯಾದಿಂದ ಕಚ್ಚಾತೈಲ ಖರೀದಿಸುವುದನ್ನು ಭಾರತ ನಿಲ್ಲಿಸಿಲ್ಲ. ಇದರಿಂದ, ಭಾರತ ಹಾಗೂ ಅಮೆರಿಕ ನಡುವಣ ಸಂಬಂಧ ತೀವ್ರವಾಗಿ ಹದಗೆಟ್ಟಿತ್ತು. ಓವಲ್ ಕಚೇರಿಯಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಟ್ರಂಪ್, ‘ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿರುವುದಕ್ಕೆ ಅಮೆರಿಕವು ಸಂತಸಗೊಂಡಿಲ್ಲ. ಇಂತಹ ಖರೀದಿಯಿಂದಲೇ ವ್ಲಾದಿಮಿರ್ ಪುಟಿನ್ ಅವರಿಗೆ ಯುದ್ಧ ಮಾಡಲು ನೆರವು ದೊರೆತಿದೆ’ ಎಂದಿದ್ದಾರೆ.

‘ಅವರು (ಮೋದಿ) ನನ್ನ ಸ್ನೇಹಿತ. ನಮ್ಮಿಬ್ಬರ ನಡುವೆ ಅತ್ಯುತ್ತಮವಾದ ಸ್ನೇಹ ಸಂಬಂಧವಿದೆ. ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವುದು ನಮಗೆ ಸಂತಸ ತಂದಿಲ್ಲ. ಈ ಹಣ ಬಳಸಿಕೊಂಡು ರಷ್ಯಾವು ಯುದ್ಧದಲ್ಲಿ ತೊಡಗಿಕೊಂಡಿದೆ. ಇದುವರೆಗೂ 15 ಲಕ್ಷಕ್ಕೂ ಅಧಿಕ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ್ದಾರೆ.

‘ರಷ್ಯಾದಿಂದ ತೈಲ ಖರೀದಿಸುವುದಿಲ್ಲ ಎಂದು ಮೋದಿ ಭರವಸೆ ನೀಡಿದ್ದಾರೆ. ಚೀನಾ ಕೂಡ ಅದೇ ರೀತಿ ಮಾಡಬೇಕಿದೆ’ ಎಂದು ಹೇಳಿದ್ದಾರೆ. ‘ರಷ್ಯಾದಿಂದ ಕಚ್ಚಾತೈಲ ಖರೀದಿ ಮಾಡುವ ರಾಷ್ಟ್ರಗಳಲ್ಲಿ ಚೀನಾವು ಮೊದಲ ಸ್ಥಾನದಲ್ಲಿದ್ದು, ಭಾರತವು ನಂತರದ ಸ್ಥಾನದಲ್ಲಿದೆ’ ಎಂದು ಇಂಧನ ಹಾಗೂ ಶುದ್ಧ ಗಾಳಿಯ ಸಂಶೋಧನಾ ಕೇಂದ್ರ (ಸಿಆರ್‌ಇಎ) ತಿಳಿಸಿದೆ.

‘ಕಚ್ಚಾತೈಲ ಖರೀದಿಯನ್ನು ತಕ್ಷಣವೇ ನಿಲ್ಲಿಸುವುದಿಲ್ಲ, ಈ ಪ್ರಕ್ರಿಯೆ ಆರಂಭಗೊಂಡಿದೆ. ಇದಕ್ಕೆ ಸಾಕಷ್ಟು ಪ್ರಕ್ರಿಯೆಗಳು ನಡೆಯಬೇಕಿದ್ದು, ಆದಷ್ಟು ಬೇಗ ಜಾರಿಯಾಗಲಿದೆ’ ಎಂದು ಟ್ರಂಪ್ ವಿವರಿಸಿದರು.

‘ಭಾರತದ ಹಿತಾಸಕ್ತಿಯೇ ಮುಖ್ಯ’

ನವದೆಹಲಿ (ಪಿಟಿಐ): ‘ರಷ್ಯಾದಿಂದ ಕಚ್ಚಾತೈಲ ಖರೀದಿಯು ಜಾಗತಿಕ ಮಾರುಕಟ್ಟೆಯಲ್ಲಿ ಅತ್ಯಂತ ಪರಿಣಾಮಕಾರಿ ಆಯ್ಕೆಯಾಗಿ ಉಳಿದಿದೆ. ಭಾರತವು ತನ್ನ ಹಿತಾಸಕ್ತಿ ಗಮನದಲ್ಲಿರಿಸಿಕೊಂಡು, ರಷ್ಯಾದ ಜೊತೆಗೆ ಇಂಧನ ಒಪ್ಪಂದ ಮಾಡಿಕೊಂಡಿದೆ’ ಎಂದು ಭಾರತದಲ್ಲಿನ ರಷ್ಯಾ ರಾಯಭಾರಿ ಡೆನಿಸ್ ಅಲಿಪೊವ್ ತಿಳಿಸಿದ್ದಾರೆ.

ರಷ್ಯಾದಿಂದ ಭಾರತವು ಕಚ್ಚಾತೈಲ ಖರೀದಿಯನ್ನು ನಿಲ್ಲಿಸಲಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ ಬೆನ್ನಲ್ಲೇ, ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

‘ಸರಕು ಸಾಗಾಣಿಕೆ ಹಾಗೂ ಪಾವತಿ ವ್ಯವಸ್ಥೆಗೆ ರಷ್ಯಾದಿಂದ ತೈಲ ಖರೀದಿಯು ಸಹಕಾರಿ ಆಗಿದೆ. ಭಾರತವು ತನ್ನ ಹೈಡ್ರೋಕಾರ್ಬನ್‌ಗಳ ಮೂರನೇ ಒಂದರಷ್ಟು ಪ್ರಮಾಣವನ್ನು ರಷ್ಯಾದಿಂದಲೇ ಖರೀದಿಸುತ್ತಿದೆ’ ಎಂದು ಡೆನಿಸ್ ಅವರು ತಿಳಿಸಿದ್ದಾರೆ. ಟ್ರಂಪ್ ಹೇಳಿಕೆ ಬಳಿಕವೂ ರಷ್ಯಾವು ತೈಲ ಮಾರಾಟವನ್ನು ಮುಂದುವರಿಸಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಇದು ಭಾರತ ಸರ್ಕಾರಕ್ಕೆ ಸಂಬಂಧಿಸಿದ ವಿಚಾರ’ ಎಂದು ಹೇಳಿದ್ದಾರೆ.

ಟ್ರಂಪ್ ಹೇಳಿದ್ದು...


- ರಷ್ಯಾವು ಯುದ್ಧ ಕೊನೆಗೊಳಿಸಬೇಕು ಎಂದು ಬಯಸುತ್ತಿದ್ದೇವೆ
- ಯುದ್ಧ ಮುಗಿದ ಮೇಲೆ ಇಂಧನ ಖರೀದಿ ಮುಂದುವರಿಸಲಿ
- ಇಂಧನ ಖರೀದಿಸದಿದ್ದರೆ, ಯುದ್ಧ ಕೊನೆಗೊಳಿಸಬಹುದು



ಟ್ರಂಪ್‌ಗೆ ಹೆದರಿದ ಮೋದಿ: ಕಾಂಗ್ರೆಸ್

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಹೆದರಿದ್ದಾರೆ. ಭಾರತದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಅಮೆರಿಕಕ್ಕೆ ಹೊರಗುತ್ತಿಗೆ ನೀಡಿದ್ದಾರೆ’ ಎಂದು ಕಾಂಗ್ರೆಸ್ ಆಕ್ಷೇಪಿಸಿದೆ.

ಟ್ರಂಪ್ ಹೇಳಿಕೆ ನೀಡಿದ ಬೆನ್ನಲ್ಲೇ ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿದೆ. ‘ಮೋದಿ ಸರ್ಕಾರದಲ್ಲಿ ವಿದೇಶಾಂಗ ನೀತಿ ಸಂಪೂರ್ಣವಾಗಿ ಕುಸಿದಿದೆ, ತಕ್ಷಣವೇ ವಿರೋಧ ಪಕ್ಷಗಳ ಸಭೆ ಕರೆದು, ಮುಖಾಮುಖಿ ಸಭೆ ನಡೆಸಬೇಕು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ‘ರಷ್ಯಾದಿಂದ ಕಚ್ಚಾತೈಲ ಖರೀದಿ ಮಾಡುವುದಿಲ್ಲ ಎಂದು ಟ್ರಂಪ್ ನಿರ್ಧಾರ ಮಾಡಿ, ನಂತರ ಘೋಷಣೆ ಮಾಡುತ್ತಾರೆ. ಪದೇ ಪದೇ ಕಡೆಗಣಿಸಲ್ಪಟ್ಟರೂ ಅಭಿನಂದನೆಯ ಸಂದೇಶಗಳನ್ನು ಕಳುಹಿಸುತ್ತಲೇ ಇದ್ದಾರೆ. ಹಣಕಾಸು ಸಚಿವರ ಅಮೆರಿಕ ಭೇಟಿಯನ್ನು ರದ್ದುಗೊಳಿಸಲಾಯಿತು. ಶರ್ಮ್-ಅಲ್ ಶೇಖ್ ಶೃಂಗಸಭೆಯಿಂದ ದೂರ ಉಳಿಯಲಾಯಿತು. ‘ಆಪರೇಷನ್ ಸಿಂಧೂರ’ ಕುರಿತಂತೆ ಟ್ರಂಪ್ ನೀಡಿದ ಹೇಳಿಕೆಯನ್ನು ಏಕೆ ವಿರೋಧಿಸುತ್ತಿಲ್ಲ’ ಎಂದು ಮೋದಿ ವಿರುದ್ಧ ವ್ಯಂಗ್ಯವಾಡಿದ್ದಾರೆ.





ರಷ್ಯಾ ಸೇರಿದಂತೆ ವಿಶ್ವದ ಎಲ್ಲ ದೇಶಗಳ ಜೊತೆಗೆ ಚೀನಾವು ವಾಣಿಜ್ಯ ವ್ಯವಹಾರ ಹಾಗೂ ಇಂಧನ ಸಹಕಾರ ಹೊಂದಿದೆ. ದೇಶದ ಹಿತಾಸಕ್ತಿಗೆ ಧಕ್ಕೆಯಾದರೆ ದೃಢ ಕ್ರಮಗಳನ್ನು ಕೈಗೊಳ್ಳುತ್ತೇವೆ

ಲಿನ್ ಜಿಯಾನ್, ಚೀನಾದ ವಿದೇಶಾಂಗ ಇಲಾಖೆ ವಕ್ತಾರ



ಭಾರತದ ಗ್ರಾಹಕರ ಹಿತಾಸಕ್ತಿ ಕಾಪಾಡುವುದೇ ನಮ್ಮ ಆದ್ಯತೆಯಾಗಿದೆ. ಅಮೆರಿಕ–ಭಾರತದ ನಡುವೆಯಾವುದೇ ದೂರವಾಣಿ ಸಂಭಾಷಣೆ ನಡೆದಿಲ್ಲ

ರಣಧೀರ ಜೈಸ್ವಾಲ್, ಭಾರತದ ವಿದೇಶಾಂಗ ಇಲಾಖೆ ವಕ್ತಾರ

‘7 ನಿಗಮ–ಮಂಡಳಿ ಮುಚ್ಚಿ’

ಆಡಳಿತ ಸುಧಾರಣಾ ಆಯೋಗದ 9ನೇ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ಹೊಣೆಗಾರಿಕೆ ಹೆಚ್ಚಿಸಲು 9ನೇ ವರದಿಯಲ್ಲಿ ಒಟ್ಟು 449 ಶಿಫಾರಸುಗಳನ್ನು ಮಾಡಿರುವ ಎರಡನೇ ಆಡಳಿತ ಸುಧಾರಣಾ ಆಯೋಗವು, ನಿಗಮ–ಮಂಡಳಿಗಳ ಪೈಕಿ ಒಂಬತ್ತು ವಿಲೀನ ಹಾಗೂ ಏಳನ್ನು ಸಂಪೂರ್ಣವಾಗಿ ಮುಚ್ಚಲು ಸಲಹೆ ನೀಡಿದೆ.

ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಅವರು ಗುರುವಾರ 9ನೇ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದರು. ಈ ವೇಳೆ ಆಯೋಗದ ಸಲಹೆಗಾರ ಎನ್.ಎಸ್.ಪ್ರಸನ್ನಕುಮಾರ್, ವಿಶೇಷ ಕಾರ್ಯದರ್ಶಿ ರಮೇಶ್ ದೇಸಾಯಿ ಇದ್ದರು.

ಸರ್ಕಾರಿ ಸೇವೆಗಳನ್ನು ಅರ್ಹ ಫಲಾನುಭವಿಗಳಿಗೆ ಸಮಯೋಚಿತವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶದಿಂದ ನಷ್ಟದಲ್ಲಿರುವ ಹಾಗೂ ಜನರಿಗೆ ಉಪಯೋಗವಾಗದ ನಿಗಮ, ಮಂಡಳಿಗಳನ್ನು ಮುಚ್ಚಲು, ವಿಲೀನಗೊಳಿಸಲು ಹಾಗೂ ಭೂಸ್ವಾಧೀನ ಕಾಯ್ದೆಯಲ್ಲೂ ಏಕರೂಪ ತರುವಂತೆ ಶಿಫಾರಸು ಮಾಡಿದೆ.

5

ಮುಚ್ಚಲು ಶಿಫಾರಸು

- ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ
- ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ
- ಕರ್ನಾಟಕ ಸಹಕಾರಿ ಕೋಳಿ ಸಾಕಾಣಿಕೆ ಒಕ್ಕೂಟ
- ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್
- ಕರ್ನಾಟಕ ರಾಜ್ಯ ಆಗ್ರೋ–ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್
- ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್
- ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್

ಹಳೆಯ ಯೋಜನೆಗಳು ಬಂದ್

ಕೆಲವು ಸರ್ಕಾರಿ ಯೋಜನೆಗಳಿಗೆ ಬಜೆಟ್‌ನಿಂದ ಅನುದಾನವೂ ಇಲ್ಲ, ಜನರಿಗೂ ಅನುಕೂಲವಾಗುತ್ತಿಲ್ಲ. ಈ ರೀತಿ ಅಂದಾಜು ಒಂದು ಸಾವಿರ ಯೋಜನೆಗಳನ್ನು ಗುರುತಿಸಲಾಗಿದೆ. ಐವತ್ತು ವರ್ಷಗಳ ಹಿಂದೆ ಆರಂಭಿಸಿರುವ ಯೋಜನೆಗಳನ್ನು ನಿಲ್ಲಿಸಬೇಕು. ಇದರಿಂದ ಆರ್ಥಿಕ ಹೊರೆಯಾಗುತ್ತಿದೆ. ಈ ಬಗ್ಗೆ ವರದಿ ಸಿದ್ಧಪಡಿಸಲಾಗುತ್ತಿದೆ ಎಂದು ಆರ್.ವಿ.ದೇಶಪಾಂಡೆ ತಿಳಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿ ಸ್ವೀಕರಿಸಿದ್ದಾರೆ. ಕೆಲ ನಿರ್ಣಯಗಳನ್ನು ಇಲಾಖಾ ಹಂತದಲ್ಲಿಯೇ ಕೈಗೊಳ್ಳಬಹುದು. ಮತ್ತೆ ಕೆಲವು ಸಂಪುಟ ಸಭೆಯಲ್ಲಿ ಚರ್ಚಿಸಬೇಕಾಗುತ್ತದೆ

ಆರ್.ವಿ.ದೇಶಪಾಂಡೆ, ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2ರ ಅಧ್ಯಕ್ಷ

ಅಂಕಿ ಅಂಶಗಳು

8 ಸಲ್ಲಿಕೆಯಾಗಿರುವ ವರದಿಗಳ ಸಂಖ್ಯೆ	**887** ಅನುಷ್ಠಾನ ಹಂತದಲ್ಲಿ	**1,745** ಪರಿಶೀಲನಾ ಹಂತದಲ್ಲಿ	**363** ಶಿಫಾರಸು ತಿರಸ್ಕೃತ
5,228 ಒಟ್ಟು ಶಿಫಾರಸುಗಳು	**1,852** ಕಾರ್ಯಗತಗೊಳಿಸಿದ್ದು	**192** ಭಾಗಶಃ ಕಾರ್ಯಗತಗೊಳಿಸಿದ್ದು	

ವಿಲೀನಕ್ಕೆ ಶಿಫಾರಸು

ಮಂಡಳಿ/ನಿಗಮ	ಎಲ್ಲಿಗೆ ವಿಲೀನ
1. ಕರ್ನಾಟಕ ರಾಜ್ಯ ಏಡ್ಸ್ ತಡೆಗಟ್ಟುವ ಸೊಸೈಟಿ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
2. ಕರ್ನಾಟಕ ರೇಷ್ಮೆ ಕೈಗಾರಿಕೆ ನಿಗಮ ನಿಯಮಿತ	ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ
3. ಆಹಾರ ಕರ್ನಾಟಕ ಲಿಮಿಟೆಡ್	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ, ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ
4. ಬೆಂಗಳೂರು ಸಬ್ ಅರ್ಬನ್ ರೈಲ್ವೆ ಕಂಪನಿ ಲಿಮಿಟೆಡ್ (ಬಿ–ರೈಡ್)	ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿಮಿಟೆಡ್ (ಕೆ–ರೈಡ್)
5. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ
6. ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
7. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತ
8. ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ	ಕೃಷಿ ವಿಜ್ಞಾನ ವಿಶ್ವವಿದ್ಯಾಲಯ (ಜಿಕೆವಿಕೆ)
9. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಸಿಎಡಿಎ)	ಸಂಬಂಧಿಸಿದ ನೀರಾವರಿ ನಿಗಮಗಳು

ಡಿಜಿಟಲ್ ಅರೆಸ್ಟ್: ₹58 ಕೋಟಿ ಲೂಟಿ

ಮುಂಬೈ (ಪಿಟಿಐ): ಮುಂಬೈನ 72 ವರ್ಷದ ಉದ್ಯಮಿ ಮತ್ತು ಅವರ ಪತ್ನಿಯನ್ನು 52 ದಿನಗಳವರೆಗೆ ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿ ಸುಮಾರು ₹58 ಕೋಟಿ ಮೊತ್ತವನ್ನು ಮಹಾರಾಷ್ಟ್ರ ಮತ್ತು ಇತರೆ ರಾಜ್ಯಗಳಲ್ಲಿನ ಒಟ್ಟು 18 ಬ್ಯಾಂಕ್ ಖಾತೆಗಳಿಗೆ ಮೂವರು ಆರೋಪಿಗಳು ವರ್ಗಾವಣೆ ಮಾಡಿಸಿಕೊಂಡಿದ್ದಾರೆ.

‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿ ಇಷ್ಟು ದೊಡ್ಡ ಮೊತ್ತವನ್ನು ವರ್ಗಾವಣೆ ಮಾಡಿಸಿಕೊಂಡಿದ್ದು ದೇಶದಲ್ಲಿ ಇದೇ ಮೊದಲ ಬಾರಿಯಾಗಿದೆ. ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ಅಧಿಕಾರಿಗಳು ಎಂದು ಬಿಂಬಿಸಿಕೊಂಡು ಆರೋಪಿಗಳು ಈ ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಗುರುವಾರ ಮಾಹಿತಿ ನೀಡಿದರು.



5

ಎರಡು ತಿಂಗಳು ಅರೆಸ್ಟ್

ಇ.ಡಿ. ಮತ್ತು ಸಿಬಿಐ ಅಧಿಕಾರಿಗಳು ಎಂದು ಹೇಳಿಕೊಂಡಿದ್ದ ಮೂವರು ಆರೋಪಿಗಳು, ಉದ್ಯಮಿ ದಂಪತಿಗೆ ಆಗಸ್ಟ್ 19ರಂದು ಮೊದಲ ಬಾರಿಗೆ ಕರೆ ಮಾಡಿದ್ದಾರೆ. ‘ನಿಮ್ಮ ಬ್ಯಾಂಕ್ ಖಾತೆಗಳಲ್ಲಿ ಅಕ್ರಮವಾಗಿ ಹಣ ಇಟ್ಟುಕೊಂಡಿದ್ದೀರಿ. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಿಮ್ಮ ಹೆಸರು ಸೇರಿಕೊಂಡಿದೆ. ಆದ್ದರಿಂದ ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡುತ್ತಿದ್ದೇವೆ’ ಎಂದು ಆರೋಪಿಗಳು ಬೆದರಿಸಿದ್ದರು.

5

ಸರ್ಕಾರಿ ಅಧಿಕಾರಿಗಳು ಎಂದು ಹೇಳಿಕೊಂಡು ಹಣಕ್ಕಾಗಿ ಜನರಿಗೆ ಮೋಸ ಮಾಡುವ ಇಂಥ ಕೃತ್ಯಗಳು ದೇಶದಲ್ಲಿ ಹೆಚ್ಚಾಗುತ್ತಿವೆ

ಮಹಾರಾಷ್ಟ್ರ ಪೊಲೀಸರು

ಟಾಲಿವುಡ್‌ನತ್ತ ಸಂಪದಾ ಹೆಜ್ಜೆ


ಸಂಪದಾ

• ಅಭಿಲಾಷ್ ಪಿ.ಎಸ್.

'ರೈಡರ್' ಸಿನಿಮಾ ಮೂಲಕ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ನಟಿ ಸಂಪದಾ ಸಿನಿಗ್ರಾಫ್‌ಗೆ ದೊಡ್ಡ ತಿರುವು ನೀಡಿದ ಸಿನಿಮಾ 'ಎಕ್ಕ'. 'ಮಲ್ಲಿಕಾ' ಎಂಬ ಪಾತ್ರದ ಮೂಲಕ ತಮ್ಮ ನಟನೆಯ ಸಾಮರ್ಥ್ಯ ಪ್ರದರ್ಶಿಸಿದ ಸಂಪದಾ, ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ'ಯಲ್ಲೂ ನಾಯಕಿಯಾಗಿ ನಟಿಸಿದ್ದಾರೆ. 16ನೇ ವಯಸ್ಸಿನಲ್ಲೇ 'ಮಿಥುನ ರಾಶಿ' ಎನ್ನುವ ಧಾರಾವಾಹಿಯಲ್ಲಿ ನಟಿಸಿ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟ ಇವರು 'ಬೆಂಕಿ' ಸಿನಿಮಾ ಮೂಲಕ ನಾಯಕಿಯಾಗಿ ಚಂದನವನದಲ್ಲಿ ಗುರುತಿಸಿಕೊಂಡರು. ಸದ್ಯ ಸಂಪದಾ ಕೈಯಲ್ಲಿ ಮೂರು ಸಿನಿಮಾಗಳಿವೆ. ಈ ಪೈಕಿ ಒಂದು ತೆಲುಗು ಪ್ರಾಜೆಕ್ಟ್ ಕೂಡಾ ಇದ್ದು, ಈ ಮೂಲಕ ಟಾಲಿವುಡ್‌ಗೂ ಹೆಜ್ಜೆ ಇಟ್ಟಿದ್ದಾರೆ ಸಂಪದಾ.

'ಸಿನಿಜೀವನದಲ್ಲಿ 'ಎಕ್ಕ' ತೆರೆಕಂಡ ಬಳಿಕ ಸಾಕಷ್ಟು ಬದಲಾವಣೆಗಳಾಗಿವೆ' ಎಂದು ಮಾತು ಆರಂಭಿಸಿದ ಸಂಪದಾ, 'ನಾಲ್ಕೈದು ವರ್ಷಗಳಿಂದ ಸಿನಿಮಾ ಕ್ಷೇತ್ರದಲ್ಲಿದ್ದರೂ 'ಎಕ್ಕ' ಬಿಡುಗಡೆಯಾದ ಬಳಿಕವಷ್ಟೇ ಜನ ನನ್ನನ್ನು ಗುರುತಿಸುತ್ತಿದ್ದಾರೆ. ಸಿನಿಮಾದಲ್ಲಿ ನನ್ನ ಪಾತ್ರ ಬೀರಿದ ಪ್ರಭಾವ ಈ ಮೂಲಕ ನನಗೆ ಕಾಣಿಸುತ್ತಿದೆ' ಎಂದರು.

'ನಿರ್ದೇಶಕರಾದ ರೋಹಿತ್ ಪದಕಿ ಅವರು ಈ ಸಿನಿಮಾದ ಕಥೆ ಹೇಳಿದಾಗ ನನಗೆ 'ಮಲ್ಲಿಕಾ' ಪಾತ್ರದ ಬಗ್ಗೆ ಬಹಳ ಕುತೂಹಲ ಹುಟ್ಟಿತ್ತು. ಆಗಿನ್ನೂ ಇನ್ನೊಂದು ನಾಯಕಿಯ ಪಾತ್ರಕ್ಕೆ ಆಯ್ಕೆ ಆಗಿರಲಿಲ್ಲ. ಎರಡು ಪಾತ್ರಗಳಲ್ಲಿ ನನಗೆ ಯಾವುದನ್ನು ನೀಡಬೇಕು ಎನ್ನುವ ಅಂತಿಮ ನಿರ್ಧಾರವೂ ಆಗಿರಲಿಲ್ಲ. ಕೇವಲ ನಾನು ಹಾಗೂ ಯುವ ಅವರು ತಾರಾಬಳಗಕ್ಕೆ ಆಯ್ಕೆಯಾಗಿದ್ದೆವು. 'ನಿಮಗೆ ಯಾವ ಪಾತ್ರ ಇಷ್ಟವಾಯಿತು' ಎಂದು ರೋಹಿತ್ ಅವರು ನನ್ನಲ್ಲಿ ಕೇಳಿದ್ದರು. ನಾನು 'ಮಲ್ಲಿಕಾ' ಪಾತ್ರವನ್ನು ಉಲ್ಲೇಖಿಸಿದ್ದೆ. ಏಕೆಂದರೆ ಆ ಪಾತ್ರಕ್ಕೊಂದು ತೀವ್ರತೆ ಇತ್ತು. ಜೊತೆಗೆ ನಟನೆಯ ಸಾಮರ್ಥ್ಯ ಪ್ರದರ್ಶಿಸಲು ಸಾಕಷ್ಟು ಅವಕಾಶಗಳು ಅದರಲ್ಲಿ ನನಗೆ ಕಾಣಿಸಿತು. ಕೊನೆಯಲ್ಲಿ ನನಗೇ ಆ ಪಾತ್ರ ದೊರಕಿದ್ದು ಪುಣ್ಯ. ಕಥೆಯ ರೀಡಿಂಗ್ ಸಂದರ್ಭದಲ್ಲೇ ಪಾತ್ರವನ್ನು ಹೇಗೆ ನಿಭಾಯಿಸಬೇಕು ಎನ್ನುವ ತಯಾರಿ ನಡೆಸಿದ್ದೆ. ಪಾತ್ರಕ್ಕೆ ಬೇಕಾದ ವಸ್ತ್ರಗಳನ್ನೂ ನಾನೇ ಆಯ್ಕೆ ಮಾಡಿದ್ದೂ ಇದೆ' ಎನ್ನುತ್ತಾರೆ ಸಂಪದಾ.

'ಕರಾವಳಿ' ಒಂದು ದೀರ್ಘ ಪಯಣ

'2023ರ ಡಿಸೆಂಬರ್‌ನಲ್ಲಿ ಘೋಷಣೆಯಾಗಿದ್ದ 'ಕರಾವಳಿ' ಸಿನಿಮಾ 2024ರ ಫೆಬ್ರುವರಿಯಲ್ಲಿ ಸೆಟ್ಟೇರಿತ್ತು. ಖಂಡಿತಾ ಇದೊಂದು ದೊಡ್ಡ ಪಯಣ. ಸಿನಿಮಾದ ಕಥೆಯ ವ್ಯಾಪ್ತಿಯೇ ಹಾಗಿದೆ. ಪ್ರಜ್ವಲ್ ದೇವರಾಜ್, ರಾಜ್ ಬಿ.ಶೆಟ್ಟಿ, ರಮೇಶ್ ಇಂದಿರಾ, ಮಿತ್ರ ಹೀಗೆ ಖ್ಯಾತ ನಟರು ಈ ಸಿನಿಮಾದಲ್ಲಿದ್ದಾರೆ. ಎಲ್ಲರ ಡೇಟ್ಸ್ ಹೊಂದಿಸಿಕೊಂಡು ಸಿನಿಮಾ ಮಾಡುವುದು ಸುಲಭವಲ್ಲ. ಸಿನಿಮಾದ ಸಂಪೂರ್ಣ ಚಿತ್ರೀಕರಣ ಮಂಗಳೂರು, ಮೂಡುಬಿದಿರೆಯಲ್ಲಿ ನಡೆದಿದೆ. ಹಲವು ಸವಾಲುಗಳ ನಡುವೆ ಈ ಸಿನಿಮಾದ ಚಿತ್ರೀಕರಣವಾಗಿತ್ತು. ಈ ಸಿನಿಮಾದಲ್ಲಿ ನಾನು 'ದಕ್ಷಿಣ' ಎಂಬ ಹೆಸರಿನ ಪಶುವೈದ್ಯೆಯಾಗಿ ಕಾಣಿಸಿಕೊಂಡಿದ್ದೇನೆ. ಕರಾವಳಿಯಿಂದ ಬೆಂಗಳೂರಿಗೆ ಬಂದು ಶಿಕ್ಷಣ ಪೂರ್ಣಗೊಳಿಸಿ ಮರಳಿರುವ ಪಾತ್ರ ನನ್ನದು. 'ಮಲ್ಲಿಕಾ' ಪಾತ್ರಕ್ಕೆ ಹೋಲಿಸಿದರೆ ಇದು ಕೊಂಚ ಭಿನ್ನವಾದ ಪಾತ್ರ. ಇದರಲ್ಲಿ ನನ್ನ ಪಾತ್ರ ಅಷ್ಟೊಂದು ಗಂಭೀರವಾದುದಲ್ಲ. ಕ್ಯೂಟ್ ಆಗಿರುವ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಸಿನಿಮಾದುದ್ದಕ್ಕೂ ನಾಯಕನ ಜೊತೆ ಈ ಪಾತ್ರವಿರಲಿದೆ' ಎಂದರು.

ಮೂರು ಪ್ರಾಜೆಕ್ಟ್‌ಗಳು ಕೈಯಲ್ಲಿ...


ಹೊಸ ಪ್ರಾಜೆಕ್ಟ್‌ಗಳ ಬಗ್ಗೆ ಮಾಹಿತಿ ನೀಡಿದ ಸಂಪದಾ, 'ರೋಹಿತ್ ಪದಕಿ ಅವರು ನಿರ್ದೇಶಿಸಿದ 'ಎಕ್ಕ' ಬಳಿಕ ಅವಕಾಶಗಳ ಸುರಿಮಳೆಯಿತ್ತು. ಈ ಅವಧಿಯಲ್ಲಿ ಸುಮಾರು 15 ಕಥೆಗಳನ್ನು ಕೇಳಿದೆ. ಕಥೆ, ಪಾತ್ರದ ಆಯ್ಕೆಯಲ್ಲಿ ನಾನು ಬಹಳ ಸೂಕ್ಷ್ಮ. ಇವುಗಳಲ್ಲಿ ನಾಲ್ಕೈದು ಕಥೆಗಳು ಇಷ್ಟವಾಗಿವೆ. ಕನ್ನಡದ ಎರಡು ಪ್ರಾಜೆಕ್ಟ್‌ಗಳನ್ನು ಒಪ್ಪಿಕೊಂಡಿದ್ದೇನೆ. ತೆಲುಗಿನಲ್ಲೂ ಒಂದು ಪ್ರಾಜೆಕ್ಟ್ ಮಾಡುತ್ತಿದ್ದೇನೆ. ಇದು 'ಎಕ್ಕ' ಚಿತ್ರೀಕರಣದ ಸಂದರ್ಭದಲ್ಲೇ ದೊರಕಿತ್ತು. ಇವುಗಳು ಶೀಘ್ರದಲ್ಲೇ ಘೋಷಣೆಯಾಗಲಿವೆ' ಎಂದರು.

ಸಂಸ್ಕೃತಿಯನ್ನು ಅರಿತುಕೊಂಡೆ...

'ನನ್ನ ತಂದೆ ಮಂಡ್ಯ ಮೂಲದವರು; ತಾಯಿ ದೊಡ್ಡಬಳ್ಳಾಪುರದವರು. ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿಯೇ. ಹೀಗಾಗಿ ನನಗೆ ಕರಾವಳಿ ಎಂಬುವುದು ಹೊಸ ಲೋಕವಾಗಿತ್ತು. 'ಕಾಂತಾರ' ಸಿನಿಮಾ ನೋಡುವವರೆಗೆ ನಮಗೆ ಆ ಲೋಕದ ಹೆಚ್ಚಿನ ಪರಿಚಯವಿರಲಿಲ್ಲ. ಅಲ್ಲಿನ ಸಂಸ್ಕೃತಿಯ ಅರಿವೂ ಇರಲಿಲ್ಲ. 'ಕರಾವಳಿ' ಚಿತ್ರೀಕರಣದ ಸಂದರ್ಭದಲ್ಲಿ ಅಲ್ಲಿನ ಭಿನ್ನವಾದ ಸಂಸ್ಕೃತಿ–ಆಚರಣೆಗಳು ಇಷ್ಟವಾಗಿತ್ತು. ಮಾಂಸಾಹಾರ ಸೇವನೆ ಮಾಡದೇ ಹಲವು ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೆವು. ಹಲವು ದೈವಸ್ಥಾನ, ದೇವಸ್ಥಾನಗಳ ಭೇಟಿಯೂ ಇದೇ ಸಂದರ್ಭದಲ್ಲಿ ಮಾಡಿದ್ದೆ. 'ಕೊರಗಜ್ಜ' ದೈವದ ಬಗ್ಗೆ ತಿಳಿದುಕೊಂಡೆ. ಒಂದು ಭಿನ್ನವಾದ ಅನುಭವವನ್ನೇ 'ಕರಾವಳಿ' ಸಿನಿಮಾ ನೀಡಿದೆ' ಎನ್ನುತ್ತಾರೆ ಸಂಪದಾ.

ಲೋಕಸಂಚಾರಿ ಸಂಪದಾ

ಚಿತ್ರೀಕರಣವಿಲ್ಲದ ದಿನಗಳಲ್ಲಿ ಏಕಾಂಗಿಯಾಗಿ ಪ್ರವಾಸಕ್ಕೆ ಹೊರಡುತ್ತಾರೆ ಸಂಪದಾ. ಈ ಬಗ್ಗೆ ಮಾತನಾಡುತ್ತಾ, 'ನನಗೆ ಪ್ರವಾಸ ಎಂದರೆ ಇಷ್ಟ. ಒಂದು ವರ್ಷ ಸಿಂಗಪುರದಲ್ಲಿ ಕೋರ್ಸ್‌ಗಾಗಿ ಇದ್ದೆ. 'ಎಕ್ಕ' ಬಳಿಕ ಲಂಡನ್ ಪ್ರವಾಸ ಕೈಗೊಂಡಿದ್ದೆ. ಡಿಸೆಂಬರ್‌ನಲ್ಲಿ ಜಪಾನ್ ಪ್ರವಾಸದ ಯೋಜನೆ ಹಾಕಿಕೊಂಡಿದ್ದೇನೆ. ಹೊಸ ಜಾಗಗಳ ಅನ್ವೇಷಣೆ, ಅಲ್ಲಿನ ಸಂಸ್ಕೃತಿಯನ್ನು ತಿಳಿದುಕೊಳ್ಳುವ ಕುತೂಹಲಿ ನಾನು' ಎನ್ನುತ್ತಾ ಮಾತಿಗೆ ವಿರಾಮವಿತ್ತರು. ❖


ಬೃಂದಾ ಆಚಾರ್ಯ

ಅಪ್ಸರೆಯಾದ ಬೃಂದಾ ಆಚಾರ್ಯ

'ಚಾರ್ಲಿ' ಸೇರಿದಂತೆ ಕನ್ನಡದ ಪ್ರಮುಖ ಚಿತ್ರಗಳಿಗೆ ವಿಎಫ್‌ಎಕ್ಸ್ ಮಾಡಿರುವ ಅಭಿಷೇಕ್ ಎಂ. ಚೊಚ್ಚಲ ನಿರ್ದೇಶನದ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಸಿನಿಮಾದ 'ಅಕ್ಕರೆ ಆಗಿದೆ ಅಪ್ಸರೆ ಮೇಲೆ...' ಹಾಡು ಬಿಡುಗಡೆಯಾಗಿದೆ.

'ರಂಗಿ ತರಂಗ', 'ಅವನೇ ಶ್ರೀಮನ್ನಾರಾಯಣ' ಚಿತ್ರಗಳ ನಿರ್ಮಾಪಕ ಎಚ್.ಕೆ ಪ್ರಕಾಶ್ ನಿರ್ಮಾಣದ, 'ದಿಯಾ', 'ದಸರಾ', 'ಕೆಟಿಎಂ' ಮೂಲಕ ಗುರುತಿಸಿಕೊಂಡಿರುವ ನಟ ದೀಕ್ಷಿತ್ ಶೆಟ್ಟಿ ನಾಯಕರಾಗಿ ನಟಿಸಿರುವ ಚಿತ್ರ ಇದಾಗಿದೆ. ಶೀರ್ಷಿಕೆಯಲ್ಲೇ ಕುತೂಹಲ ಮೂಡಿಸಿರುವ ಈ ಚಿತ್ರದಲ್ಲಿ ದೀಕ್ಷಿತ್ ಶೆಟ್ಟಿಗೆ ಜೋಡಿಯಾಗಿ 'ಪ್ರೇಮಂ ಪೂಜ್ಯಂ' ಹಾಗೂ 'ಕೌಸಲ್ಯಾ ಸುಪ್ರಜಾ ರಾಮ' ಖ್ಯಾತಿಯ ಬೃಂದಾ ಆಚಾರ್ಯ ನಟಿಸಿದ್ದಾರೆ. ಸಾಧುಕೋಕಿಲ, ಗೋಪಾಲಕೃಷ್ಣ ದೇಶಪಾಂಡೆ, ಉಷಾ ಭಂಡಾರಿ, ಭರತ್, ವಿಶ್ವನಾಥ್, ಹರೀಶ್ ಸಮಷ್ಟಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಸಿನಿಮಾದಲ್ಲಿ 'ಟೈಗರ್' ಎನ್ನುವ ಪಾತ್ರದಲ್ಲಿ ದೀಕ್ಷಿತ್ ನಟಿಸಿದ್ದು, ಇದೊಂದು ಬ್ಯಾಂಕ್ ಕಳ್ಳತನಕ್ಕೆ ಸಂಬಂಧಿಸಿದ ಕಥೆ ಹೊಂದಿದೆ. ಥ್ರಿಲ್ ಜೊತೆಗೆ ಹಾಸ್ಯಮಯ ನಿರೂಪಣೆಯಲ್ಲಿ ಚಿತ್ರಕಥೆಯಿದ್ದು, ಪ್ರೇಕ್ಷಕರನ್ನು ಹಿಡಿದು ಕೂರಿಸಬಲ್ಲ ಮನರಂಜನಾತ್ಮಕ ಚಿತ್ರವಿದು ಎಂದಿದೆ ಚಿತ್ರತಂಡ. ❖

ಸಿಂಗಲ್ ಟೇಕ್‌ನಲ್ಲಿ ಸೆರೆಹಿಡಿದ 'ಮೋಡ..'


ಶೀಲಂ, ಮೋಕ್ಷ ಕುಶಾಲ್

ಸಿನಿಮಾದ ದೃಶ್ಯಗಳನ್ನು ಸಿಂಗಲ್ ಟೇಕ್‌ನಲ್ಲಿ (ಯಾವುದೇ ಕಟ್ ಇಲ್ಲದೆ) ತೆಗೆಯುವುದು ಸಾಮಾನ್ಯ. ಆದರೆ ನಿರ್ದೇಶಕ ಸಿಂಪಲ್ ಸುನಿ ಹಾಡೊಂದನ್ನು ಸಿಂಗಲ್ ಟೇಕ್‌ನಲ್ಲಿ ಚಿತ್ರೀಕರಿಸಿದ್ದಾರೆ. ಸುನಿ ನಿರ್ದೇಶನದ 'ಮೋಡ ಕವಿದ ವಾತಾವರಣ' ಸಿನಿಮಾದ 'ನನ್ನೆದೆಯಾ ಹಾಡೊಂದನು..' ಹಾಡನ್ನು ಈ ರೀತಿ ಚಿತ್ರಿಸಲಾಗಿದೆ. ಸಿನಿಮಾ 2026ರ ಜನವರಿ 9ರಂದು ತೆರೆಕಾಣುವ ಸಾಧ್ಯತೆ ಇದೆ.

ನಾಲ್ಕು ನಿಮಿಷದ ಈ ಹಾಡಿನಲ್ಲಿ ಚಿತ್ರದ ಹೀರೊ ಶೀಲಂ ಎಂ.ಸ್ವಾಮಿ ಹಾಗೂ ನಾಯಕಿಯರಾದ ಮೋಕ್ಷ ಕುಶಾಲ್ ಹಾಗೂ ಸಾತ್ವಿಕ, ಜೊತೆಗೆ ಸಿಂಪಲ್ ಸುನಿ, ತಾಂತ್ರಿಕ ತಂಡ, ನಿರ್ಮಾಪಕರಾದ ಶ್ರೀರಂಗರಾಜು, ರಮೇಶ್ ಮೈಸೂರು, ಲೋಕೇಶ್ ಬೆಳವಾಡಿ ಹಾಗೂ ಗೋವಾ ರಮೇಶ್ ನಟಿಸಿರುವುದು ವಿಶೇಷ. ಹಾಡಿನ ಚಿತ್ರೀಕರಣಕ್ಕಾಗಿ ಸುಮಾರು 24 ಗಂಟೆ ನಿರಂತರವಾಗಿ ಚಿತ್ರೀಕರಣ ನಡೆಸಿದೆ ಚಿತ್ರತಂಡ. ಸುಮಾರು 14 ಟೇಕ್‌ಗಳನ್ನು ತಂಡ ತೆಗೆದುಕೊಂಡಿದೆ. ಹಾಡಿಗಾಗಿ 150 ಜನರು ಕೆಲಸ ಮಾಡಿದ್ದು, ವಿಲಿಯಂ ಡೇವಿಡ್, ಅನಿಲ್ ಕ್ಯಾಮೆರಾ ಹಿಂದಿದ್ದರು. ಮಧು ನೃತ್ಯ ನಿರ್ದೇಶನ ಮಾಡಿರುವ ಈ ಹಾಡಿಗೆ ಜೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಸಂಚಿತ್ ಹೆಗಡೆ ದನಿಯಿದೆ.

ಸಿನಿಮಾ ಬಗ್ಗೆ ಮಾಹಿತಿ ನೀಡಿದ ಸುನಿ, 'ಈ ಹಾಡು ಸಿನಿಮಾದೊಳಗೂ ಇರಲಿದೆ. ಮೂರ್ನಾಲ್ಕು ಸಿನಿಮಾಗಳನ್ನು ಬೇರೆ ಬೇರೆ ವರ್ಷದಲ್ಲಿ ಆರಂಭಿಸಿದ್ದೆ. ಆದರೆ ಬಿಡುಗಡೆ ಸಮಯದಲ್ಲಿ ಒಟ್ಟಿಗೆ ಬಂದಿವೆ. ಈ ಸಿನಿಮಾವನ್ನು ನ.14ಕ್ಕೆ ಬಿಡುಗಡೆ ಮಾಡಬೇಕು ಎಂದು ಯೋಜನೆ ಹಾಕಿಕೊಂಡಿದ್ದೆವು. 'ಗತವೈಭವ' ಸಿನಿಮಾವನ್ನು ಡಿ.25ಕ್ಕೆ ತೆರೆಗೆ ತರುವ ನಿರ್ಧಾರ ಮಾಡಿದ್ದೆವು. ಆದರೆ ಆ ಸಮಯದಲ್ಲಿ ದೊಡ್ಡ ಸಿನಿಮಾಗಳು ಇರುವ ಕಾರಣ 'ಗತವೈಭವ'ವನ್ನು ನ.14ಕ್ಕೆ ರಿಲೀಸ್ ಮಾಡುವುದಾಗಿ ಘೋಷಿಸಿದೆವು. 'ಮೋಡ ಕವಿದ ವಾತಾವರಣ' ಸಿನಿಮಾ ಸಿದ್ಧವಾಗಿ ಒಂದು ವರ್ಷ ಉರುಳಿದೆ. ಮುಂದಿನ ವರ್ಷದ ಜ.9ರಂದು ಸಿನಿಮಾ ತೆರೆಗೆ ತರುವ ಯೋಚನೆಯಿದೆ' ಎಂದರು.

'ಈ ಹಾಡಿನ ಚಿತ್ರೀಕರಣವೇ ಭಿನ್ನ ಅನುಭವ. ಶೀಲಂ ಮೊದಲ ಶಾಟ್‌ನಲ್ಲಿ ಮೀನಿನಂತೆ ನೃತ್ಯ ಮಾಡಿದ್ದರು. ಟೇಕ್ ಆಗುತ್ತಾ ಆಗುತ್ತಾ ಹಾವಿನಂತೆ ಆದರು. ಹಲವು ಟೇಕ್‌ಗಳ ಬಳಿಕ ಸುಸ್ತಾಗಿತ್ತು. ಗ್ರಾಫಿಕ್ಸ್‌ನಲ್ಲಿ ಸರಿ ಮಾಡಿ ಒಂದು ಟೇಕ್‌ನಲ್ಲೇ ಮಾಡಿದೆವು ಎಂದು ಹೇಳಿಕೊಳ್ಳೋಣ ಎಂದಿದ್ದೆ. ಆದರೆ ಕಲಾವಿದರು ಒಪ್ಪಲೇ ಇಲ್ಲ. ಸಿಂಗಲ್ ಟೇಕ್‌ನಲ್ಲೇ ಹಾಡು ಬರಬೇಕು ಎಂದು ಪಟ್ಟುಹಿಡಿದು ಮಾಡಿಸಿದರು. ನನ್ನ ಜೊತೆಯೇ ಏಳು ವರ್ಷಗಳಿಂದ ಸಹ ನಿರ್ದೇಶಕರಾಗಿದ್ದ ಶೀಲಂ ಮೊದಲ ಬಾರಿಗೆ ನಾಯಕನಾಗಿ ತೆರೆ ಮೇಲೆ ಬರುತ್ತಿದ್ದಾರೆ. ಅವರು ಕಾಲೇಜು ಹುಡುಗನಾಗಿ ಕಾಣಿಸಿಕೊಂಡಿದ್ದು, ರಿವರ್ಸ್ ಸ್ಕ್ರೀನ್‌ಪ್ಲೇನಲ್ಲಿ ಈ ಸಿನಿಮಾವಿರಲಿದೆ' ಎನ್ನುತ್ತಾರೆ ಸುನಿ. ❖

'ಜೈ' ಎಂದ ರೂಪೇಶ್ ಶೆಟ್ಟಿ


ಅದ್ವಿತಿ, ರೂಪೇಶ್

'ಬಿಗ್‌ಬಾಸ್' ಖ್ಯಾತಿಯ ನಟ ರೂಪೇಶ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಜೈ' ಸಿನಿಮಾ ಶೀಘ್ರದಲ್ಲೇ ತೆರೆಕಾಣಲಿದೆ. ತುಳು ಹಾಗೂ ಕನ್ನಡದಲ್ಲಿ ರಿಲೀಸ್ ಆಗಲಿರುವ ಈ ಸಿನಿಮಾದ 'ಲವ್' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು.


ಗಾಯಕ ಗುರುಕಿರಣ್ ದಂಪತಿ, ನಿರಂಜನ್ ದೇಶಪಾಂಡೆ ದಂಪತಿ, ವಿನಯ್ ಗೌಡ ದಂಪತಿ, ರೂಪೇಶ್ ರಾಜಣ್ಣ ದಂಪತಿ, ಆರ್ಯವರ್ಧನ್ ಗುರೂಜಿ ದಂಪತಿ ಹಾಡು ಬಿಡುಗಡೆ ಮಾಡಿ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು.

ರಜತ್ ಹೆಗ್ಡೆ ಹಾಡಿರುವ ಹಾಡಿಗೆ ತುಳುವಿನಲ್ಲಿ ರೂಪೇಶ್ ಶೆಟ್ಟಿ ಅವರೇ ಸಾಹಿತ್ಯ ಬರೆದಿದ್ದು, ಕನ್ನಡದಲ್ಲಿ ಕೀರ್ತನ್ ಭಂಡಾರಿ ಬರೆದಿದ್ದಾರೆ. ಹಾಡನ್ನು ತರ್ಜುಮೆ ಮಾಡಿಲ್ಲ, ಹಾಡಿನ ವಿಚಾರಧಾರೆಯನ್ನು ಆಧಾರವಾಗಿಟ್ಟುಕೊಂಡು, ಆ ಭಾವನೆ, ಆ ಅರ್ಥವೇ ಬರುವಂತೆ ಕನ್ನಡದಲ್ಲಿ ಕಟ್ಟಿಕೊಡಲಾಗಿದೆ ಎಂದಿದೆ ಚಿತ್ರತಂಡ.

ರೂಪೇಶ್ ಶೆಟ್ಟಿಗೆ ನಾಯಕಿಯಾಗಿ ನಟಿ ಅದ್ವಿತಿ ಶೆಟ್ಟಿ ತೆರೆ ಹಂಚಿಕೊಂಡಿದ್ದಾರೆ. ಕರಾವಳಿಯಿಂದಲೇ ಬಂದಿರುವ ಅದ್ವಿತಿಗೆ ಈ ಸಿನಿಮಾ ಮೊದಲ ತುಳು ಸಿನಿಮಾವಾಗಿದೆ. ಪತ್ರಕರ್ತೆಯಾಗಿ ಅದ್ವಿತಿ ಶೆಟ್ಟಿ ನಟಿಸಿದ್ದಾರೆ. ಆರ್.ಎಸ್ ಸಿನಿಮಾಸ್, ಶೂಲಿನ್ ಫಿಲಂಸ್, ಮುಗ್ರೋಡಿ ಪ್ರೊಡಕ್ಷನ್ ಲಾಂಛನದಲ್ಲಿ ಅನಿಲ್ ಶೆಟ್ಟಿ, ಸುಧಾಕರ ಶೆಟ್ಟಿ ಮುಗ್ರೋಡಿ, ಮಂಜುನಾಥ ಅತ್ತಾವರ ಚಿತ್ರಕ್ಕೆ ಬಂಡವಾಳ ಹೂಡಿದ್ದು, ದೀಕ್ಷಿತ್ ಸಹ ನಿರ್ಮಾಪಕರಾಗಿದ್ದಾರೆ. ಇದೇ 24ರಂದು ಮಸ್ಕತ್‌ನಲ್ಲಿ ಚಿತ್ರದ ಪ್ರೀಮಿಯರ್ ನಡೆಯಲಿದೆ. ❖

ಎರಡು ಸಿನಿಮಾಗಳು ತೆರೆಗೆ

'ಕಾಂತಾರ–ಚಾಪ್ಟರ್ 1' ಸಿನಿಮಾ ರಾಜ್ಯದ ನೂರಾರು ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣುತ್ತಿದೆ. ಇದರ ನಡುವೆ ಕೆಲವೇ ಚಿತ್ರಮಂದಿರಗಳಲ್ಲಿ ಎರಡು ಕನ್ನಡ ಸಿನಿಮಾಗಳು ಇಂದು (ಅ.17) ತೆರೆಕಾಣಲಿವೆ.


ಇಮ್ರಾನ್ ಪಾಷಾ

ಟೈಮ್ ಪಾಸ್


ಚೇತನ್ ಜೋಡಿದಾರ್ ನಿರ್ದೇಶನದ ಈ ಸಿನಿಮಾ ಮನರಂಜನೆಯನ್ನೇ ಕೇಂದ್ರವಾಗಿಸಿಕೊಂಡಿರುವ ಕಥೆ ಹೊಂದಿದೆ. ಇಂದಿನ ಸಮಾಜಕ್ಕೆ ಕನ್ನಡಿ ಹಿಡಿದಂತಿರುವ ಕಥೆಯೊಂದನ್ನು ಈ ಸಿನಿಮಾ ಹೊಂದಿದೆ ಎಂದಿದೆ ಚಿತ್ರತಂಡ. ಚೇತನ್ ಜೋಡಿದಾರ್‌ಗೆ ಇದು ಚೊಚ್ಚಲ ಸಿನಿಮಾ. ಡಾರ್ಕ್ ಹ್ಯೂಮರ್ ಜಾನರ್‌ಗೆ ಸೇರಿದ ಈ ಸಿನಿಮಾವನ್ನು ಶ್ರೀ ಚೇತನ ಸರ್ವಿಸಸ್ ಬ್ಯಾನರ್ ಮೂಲಕ ಗುಂಡೂರು ಶೇಖರ್, ಕಿರಣ್ ಕುಮಾರ್ ಶೆಟ್ಟಿ, ಎಂ.ಎಚ್ ಕೃಷ್ಣಮೂರ್ತಿ ನಿರ್ಮಾಣ ಮಾಡಿದ್ದಾರೆ. ಇಮ್ರಾನ್ ಪಾಷಾ, ವೈಸಿರಿ ಕೆ. ಗೌಡ, ಪ್ರಭಾಕರ್ ರಾವ್, ನವೀನ್ ಕುಮಾರ್, ಸಂಪತ್ ಕುಮಾರ್, ಅಶ್ವಿನಿ ಶ್ರೀನಿವಾಸ್ ತಾರಾಬಳಗದಲ್ಲಿದ್ದಾರೆ. ಗಿರೀಶ್ ಗೌಡ ಸಾಹಸ ನಿರ್ದೇಶನ, ವೈಷ್ಣವಿ ಸತ್ಯನಾರಾಯಣ್ ನೃತ್ಯ ನಿರ್ದೇಶನ, ರಾಜೀವ್ ಗಣೇಶ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.


ಪ್ರೇಮಿಗಳ ಗಮನಕ್ಕೆ


ಚಿರಶ್ರೀ ಅಂಚನ್, ಶಶಿ ಕುಮಾರ್

ಲಿವ್ ಇನ್ ರಿಲೇಷನ್‌ಶಿಪ್ ವಿಷಯವಿಟ್ಟುಕೊಂಡು ಈ ಸಿನಿಮಾ ತೆರೆಗೆ ಬರುತ್ತಿದೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಇಬ್ಬರು ಪ್ರೇಮಿಗಳ ಸುತ್ತ ನಡೆದ ನೈಜ ಘಟನೆಯ ಪ್ರೇರಣೆ ಚಿತ್ರಕ್ಕಿದೆ. ಸಿಟಾಡಿಲ್ ಫಿಲಂಸ್ ಹಾಗೂ ಜೊಯಿಟಾ ಎಂಟರ್‌ಟೇನ್ಮೆಂಟ್ ಅಡಿ ಸುಬ್ಬು ಹಾಗೂ ಯಕ್ಕಂಟಿ ರಾಜಶೇಖರ ರೆಡ್ಡಿ ಸೇರಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. 'ಬಿಗ್‌ಬಾಸ್' ಖ್ಯಾತಿಯ ಶಶಿಕುಮಾರ್ ನಾಯಕನಾಗಿ ಕಾಣಿಸಿಕೊಂಡಿದ್ದು, ಚಿರಶ್ರೀ ಅಂಚನ್ ನಾಯಕಿಯ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ನಿರ್ಮಾಪಕ ಸುಬ್ಬು ಖಳನಾಯಕನ ಪಾತ್ರ ನಿರ್ವಹಿಸಿದ್ದಾರೆ. ವಿನ್ಸೆಂಟ್ ಇನ್ಬರಾಜ್ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸಿ.ಅರುಳ್ ಸೆಲ್ವನ್ ಛಾಯಾಚಿತ್ರಗ್ರಹಣ, ಡೆನ್ನಿಸ್ ವಲ್ಲಭನ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ❖

ಜುಗಾರಿ ಕ್ರಾಸ್‌ನಲ್ಲಿ ರಾಜ್ ಬಿ.ಶೆಟ್ಟಿ ಹೀರೊ




ರಾಜ್ ಬಿ. ಶೆಟ್ಟಿ

ಗುರುದತ್ ಗಾಣಿಗ ನಿರ್ದೇಶನದ 'ಕರಾವಳಿ' ಸಿನಿಮಾದಲ್ಲಿ ನಟ ರಾಜ್ ಬಿ.ಶೆಟ್ಟಿ ನಟಿಸಿದ್ದಾರೆ. ಈ ಸಿನಿಮಾ ಬಿಡುಗಡೆಗೂ ಮೊದಲೇ ಗುರುದತ್ ಜೊತೆ ಇನ್ನೊಂದು ಸಿನಿಮಾ ಮಾಡಲು ರಾಜ್ ಮುಂದಾಗಿದ್ದಾರೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಪ್ರಸಿದ್ಧ 'ಜುಗಾರಿ ಕ್ರಾಸ್' ಕೃತಿಯನ್ನು ತೆರೆ ಮೇಲೆ ತರಲು ಗುರುದತ್ ಸಜ್ಜಾಗಿದ್ದು, ಈ ಮೂಲಕ ಕಾದಂಬರಿಯೊಂದಕ್ಕೆ ಸಿನಿಮಾ ರೂಪ ನೀಡುತ್ತಿದ್ದಾರೆ. ಈಗಾಗಲೇ ಟೀಸರ್ ಬಿಡುಗಡೆಯಾಗಿದ್ದು, ಚಿತ್ರದಲ್ಲಿ ನಾಯಕನಾಗಿ ರಾಜ್ ಬಿ.ಶೆಟ್ಟಿ ಕಾಣಿಸಿಕೊಳ್ಳುತ್ತಿದ್ದಾರೆ. ಭಿನ್ನವಾದ ಪಾತ್ರಗಳನ್ನೇ ಆಯ್ದುಕೊಂಡು ಬರುತ್ತಿರುವ ರಾಜ್, 'ಕರಾವಳಿ' ಸಿನಿಮಾದ ಪೋಸ್ಟರ್‌ನಲ್ಲಿ ಕೋಣಗಳ ಜೊತೆ ಕಾಣಿಸಿಕೊಂಡು ಕುತೂಹಲ ಮೂಡಿಸಿದ್ದರು.

ಸದ್ಯದಲ್ಲೇ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದಿದೆ ಚಿತ್ರತಂಡ. 'ಕರಾವಳಿ' ಸಿನಿಮಾದ ಶೂಟಿಂಗ್ ಸಂಪೂರ್ಣವಾಗಿ ಮುಗಿಸಿರುವ ಗುರುದತ್ ಆ ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳ ಜೊತೆಗೆ 'ಜುಗಾರಿ ಕ್ರಾಸ್'ನಲ್ಲೂ ತೊಡಗಿಸಿಕೊಳ್ಳಲಿದ್ದಾರೆ. 'ಕರಾವಳಿ' ಸಿನಿಮಾದ ಸಿನಿಮಾಟೋಗ್ರಾಫರ್ ಅಭಿಮನ್ಯು ಸದಾನಂದನ್ ಈ ಸಿನಿಮಾಗೂ ಕೆಲಸ ಮಾಡಲಿದ್ದು, ಚರಣ್ ರಾಜ್ ಸಂಗೀತ ನಿರ್ದೇಶನ ಮಾಡಲಿದ್ದಾರೆ. ತಾರಾಬಳಗದ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡಲಾಗುವುದು ಎಂದಿದೆ ಚಿತ್ರತಂಡ. ❖

ಮತ್ತೊಂದು 'ಪ್ರಕರಣ'ದಲ್ಲಿ ವಿಜಯ ರಾಘವೇಂದ್ರ



ವಿಜಯ ರಾಘವೇಂದ್ರ

ನಟ ವಿಜಯ ರಾಘವೇಂದ್ರ ಸಿನಿಬ್ಯಾಂಕ್ ವರ್ಷ ಉರುಳಿದಂತೆ ಹಿಗ್ಗುತ್ತಲೇ ಇದೆ. ಇದಕ್ಕೆ ಹೊಸ ಸೇರ್ಪಡೆ 'ಸೆಕೆಂಡ್ ಕೇಸ್ ಆಫ್ ಸೀತಾರಾಮ್'. 2021ರಲ್ಲಿ ತೆರೆಕಂಡ ವಿಜಯ ರಾಘವೇಂದ್ರ ನಟನೆಯ 'ಸೀತಾರಾಮ್ ಬಿನೋಯ್' ಸಿನಿಮಾ ಸೀಕ್ವೆಲ್ ಇದಾಗಿದೆ.

ತಮ್ಮ 50ನೇ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯಾಗಿ ಮಿಂಚಿದ್ದ ವಿಜಯ ರಾಘವೇಂದ್ರ, ಬಳಿಕ 'ಸೀತಾರಾಮ್ ಬಿನೋಯ್' ನಿರ್ದೇಶಿಸಿದ್ದ ದೇವಿಪ್ರಸಾದ್ ಶೆಟ್ಟಿ ಅವರೇ ಆ್ಯಕ್ಷನ್ ಕಟ್ ಹೇಳಿದ್ದ 'ಕೇಸ್ ಆಫ್ ಕೊಂಡಾಣ'ದಲ್ಲಿ ನಟಿಸಿದ್ದರು. ಇದೀಗ ದೇವಿ ಪ್ರಸಾದ್ ಶೆಟ್ಟಿ ಅವರೇ ನಿರ್ದೇಶಿಸುತ್ತಿರುವ ಇನ್ನೊಂದು ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯಾಗಿ ಮತ್ತೊಂದು ಪ್ರಕರಣ ಕೈಗೆತ್ತಿಕೊಂಡಿದ್ದಾರೆ. ದೇವಿಪ್ರಸಾದ್ ಅವರೇ ಈ ಸಿನಿಮಾದ ಕಥೆ ಬರೆದಿದ್ದು, ಸಾತ್ವಿಕ್ ಹೆಬ್ಬಾರ್ ಜೊತೆ ನಿರ್ಮಾಣದಲ್ಲೂ ಕೈಜೋಡಿಸಿದ್ದಾರೆ. ಅರವಿಂದ್ ಶೆಟ್ಟಿ ಸಹ ನಿರ್ಮಾಪಕರಾಗಿದ್ದಾರೆ. ಸಿನಿಮಾ ನ.28ಕ್ಕೆ ತೆರೆಕಾಣಲಿದೆ.

ಇತ್ತೀಚೆಗಷ್ಟೇ 'ರಿಪ್ಪನ್ ಸ್ವಾಮಿ'ಯಾಗಿ ತೆರೆ ಮೇಲೆ ಕಾಣಿಸಿಕೊಂಡಿದ್ದ ವಿಜಯ ರಾಘವೇಂದ್ರ ನಟೇಶ್ ಹೆಗಡೆ ಮತ್ತು ಗಣೇಶ್ ಹೆಗಡೆ ನಿರ್ದೇಶನದ ಚಿತ್ರದಲ್ಲೂ ಕಾಣಿಸಿಕೊಳ್ಳಲಿದ್ದಾರೆ. ಇದರ ಜೊತೆಗೆ ನಾಲ್ಕೈದು ಪ್ರಾಜೆಕ್ಟ್‌ಗಳು ಅವರ ಕೈಯಲ್ಲಿವೆ. ❖

ಉದಯ ವಾಹಿನಿಯಲ್ಲಿ ರಜನಿಕಾಂತ್ 'ಕೂಲಿ'


ರಜನಿಕಾಂತ್

ಕಳೆದ ಆಗಸ್ಟ್ 15ರಂದು ತೆರೆಕಂಡಿದ್ದ ರಜನಿಕಾಂತ್ ನಟನೆಯ 'ಕೂಲಿ' ಸಿನಿಮಾ ಕಿರುತೆರೆಯಲ್ಲಿ ಬರಲು ದಿನಾಂಕ ನಿಗದಿಯಾಗಿದೆ. ಈಗಾಗಲೇ ಪ್ರೈಮ್‌ನಲ್ಲಿ ಸ್ಟ್ರೀಮ್ ಆಗುತ್ತಿರುವ ಈ ಸಿನಿಮಾ ಇದೇ 19 ರಂದು ಸಂಜೆ 6ಗಂಟೆಗೆ ಉದಯ ಟಿವಿಯಲ್ಲಿ ಪ್ರಸಾರವಾಗಲಿದೆ.

ಲೋಕೇಶ್ ಕನಗರಾಜ್ ನಿರ್ದೇಶನದ, ರಜನಿಕಾಂತ್ ನಾಯಕರಾಗಿ ನಟಿಸಿರುವ ಈ ಸಿನಿಮಾದಲ್ಲಿ ಅಮೀರ್ ಖಾನ್, ಉಪೇಂದ್ರ, ಅಕ್ಕಿನೇನಿ ನಾಗಾರ್ಜುನ್, ರಚಿತಾ ರಾಮ್ ಸೇರಿದಂತೆ ಹಲವರು ನಟಿಸಿದ್ದಾರೆ. 'ದೇವ' ಪಾತ್ರದಲ್ಲಿ ರಜನಿಕಾಂತ್, 'ಸೈಮನ್' ಎಂಬ ಪಾತ್ರದಲ್ಲಿ ನಾಗಾರ್ಜುನ ಅಕ್ಕಿನೇನಿ ಹಾಗೂ ನಟ ಉಪೇಂದ್ರ 'ಕಾಳೀಶ'ನಾಗಿ ಕಾಣಿಸಿಕೊಂಡಿದ್ದಾರೆ. ಸಿನಿಮಾಗೆ ಅನಿರುದ್ಧ್ ರವಿಚಂದರ್ ಸಂಗೀತ ನೀಡಿದ್ದಾರೆ. ❖

ಪ್ರಜಾವಾಣಿ ಶುಕ್ರವಾರ • ಅಕ್ಟೋಬರ್ 17, 2025
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ

ಸಂಪಾದಕೀಯ

ಗ್ರಂಥಾಲಯ ಸಿಬ್ಬಂದಿ ಸಾವು ಅವ್ಯವಸ್ಥೆ, ಅಸೂಕ್ಷ್ಮತೆಗೆ ಕನ್ನಡಿ

ಮೂರು ತಿಂಗಳಿಂದ ವೇತನ ಪಾವತಿ ಆಗದ ಕಾರಣಕ್ಕಾಗಿ ಹತಾಶರಾದ ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಗ್ರಂಥಾಲಯದ ಮೇಲ್ವಿಚಾರಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರಿ ಸಂಸ್ಥೆಗಳಲ್ಲಿ ದುಡಿಯುವವರು ಸಕಾಲಕ್ಕೆ ಸಂಬಳ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ತಲೆದೋರುವುದು ಸರ್ಕಾರ ತಲೆತಗ್ಗಿಸಬೇಕಾದ ಸಂಗತಿ. ಇಂಥ ಘಟನೆಗಳು ಸರ್ಕಾರಕ್ಕೆ ಕಳಂಕ ತರುವುದರ ಜೊತೆಗೆ, ನೌಕರರ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತವೆ. ಸಂಬಳ ಸಕಾಲಕ್ಕೆ ದೊರೆಯದೆ ಆತ್ಮಹತ್ಯೆ ಮಾಡಿಕೊಂಡ ಮೇಲ್ವಿಚಾರಕಿಯ ಪ್ರಕರಣ ಗ್ರಂಥಾಲಯ ಇಲಾಖೆಯಲ್ಲಿನ ಅವ್ಯವಸ್ಥೆಯ ಜೊತೆಗೆ, ಅಧಿಕಾರಿಗಳ ಸಂವೇದನಾರಾಹಿತ್ಯ ಮನಃಸ್ಥಿತಿಗೆ ನಿದರ್ಶನದಂತಿದೆ. ಭಾಗ್ಯವತಿ ವಿಶ್ವೇಶ್ವರಯ್ಯ ಸಾವಿಗೆ ತುತ್ತಾಗಿರುವ ನತದೃಷ್ಟ ಮಹಿಳೆ. ಅಧಿಕಾರಿಗಳ ಸತಾಯಿಸುವಿಕೆಯಿಂದಾಗಿ ಮೂರು ತಿಂಗಳಿಂದ ಸಂಬಳ ದೊರೆಯದೆ ಹೋದುದರಿಂದ ಮಾನಸಿಕ ಒತ್ತಡಕ್ಕೊಳಗಾಗಿರುವ ಅವರು ಗ್ರಂಥಾಲಯದಲ್ಲಿನ ಫ್ಯಾನ್‌ಗೆ ನೇಣು ಹಾಕಿಕೊಂಡಿದ್ದಾರೆ. ಜೀವನಪ್ರೀತಿ ನೀಡಬೇಕಾದ ಪರಿಸರವೇ ಜೀವನ ಕೊನೆಗೊಳಿಸಿಕೊಳ್ಳುವ ಸ್ಥಳವಾಗಿ ಪರಿಣಮಿಸಿದೆ. ಹಲವಾರು ವರ್ಷಗಳಿಂದ ಗ್ರಂಥಾಲಯದ ಮೇಲ್ವಿಚಾರಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಅವರು, ಸಂಬಳ ಸರಿಯಾದ ಸಮಯಕ್ಕೆ ಬಾರದೆ ಹೋದುದರಿಂದ ತೊಂದರೆ ಅನುಭವಿಸುತ್ತಿದ್ದರು; ಮಗಳ ಶಾಲಾ ಶುಲ್ಕ ಕಟ್ಟುವುದಕ್ಕೂ ಸಮಸ್ಯೆಯಾಗಿದೆ ಎಂದು ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ಮಾಡಿಕೊಂಡ ಮನವಿ ಫಲಕಾರಿಯಾಗದ ಕಾರಣ ಮಾನಸಿಕವಾಗಿ ಕುಗ್ಗಿಹೋಗಿದ್ದ ಅವರು ಆತ್ಮಹತ್ಯೆ ಮಾಡಿಕೊಳ್ಳುವ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಮೃತ ಮಹಿಳೆಯ ಕುಟುಂಬ ಹೇಳಿದೆ.



ಮಳಖೇಡದ ಗ್ರಂಥಾಲಯ ಮೇಲ್ವಿಚಾರಕಿಯ ಆತ್ಮಹತ್ಯೆ, ಗ್ರಂಥಾಲಯ ಇಲಾಖೆಯ ಅವ್ಯವಸ್ಥೆಯ ಪ್ರತಿಬಿಂಬ ಆಗಿದೆ ಹಾಗೂ ಅಧಿಕಾರಿಗಳ ಬೇಜವಾಬ್ದಾರಿ ಮನಃಸ್ಥಿತಿ ಸೂಚಿಸುವಂತಿದೆ.

ಭಾಗ್ಯವತಿ ಅವರ ಆತ್ಮಹತ್ಯೆಯನ್ನು ವೈಯಕ್ತಿಕ ದುರಂತವಾಗಿ ನೋಡದೆ, ಗ್ರಂಥಾಲಯ ಇಲಾಖೆಯ ಒಟ್ಟಾರೆ ಅವ್ಯವಸ್ಥೆಯ ರೂಪದಲ್ಲಿ ನೋಡಬೇಕಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯಗಳು ಓದುವ ಅಭಿರುಚಿಯನ್ನು ಹೆಚ್ಚಿಸುವುದರ ಜೊತೆಗೆ, ಜ್ಞಾನ ಕೇಂದ್ರಗಳಾಗಿಯೂ ಹಾಗೂ ಮಾಹಿತಿ ಕೇಂದ್ರಗಳಾಗಿಯೂ ಬಳಕೆಯಾಗುತ್ತಿವೆ. ಆರ್ಥಿಕವಾಗಿ ದುರ್ಬಲವಾದ ಕುಟುಂಬಗಳ ವಿದ್ಯಾರ್ಥಿಗಳಿಗೆ ಜ್ಞಾನದ ಅಕ್ಷಯಪಾತ್ರೆಯಂತೆ ಒದಗಿಬರುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸುವ ಈ ಅರಿವಿನ ಕೇಂದ್ರಗಳು, ಸರ್ಕಾರದ ನಿರ್ಲಕ್ಷ್ಯದಿಂದಾಗಿ ವರ್ಷದಿಂದ ವರ್ಷಕ್ಕೆ ದುರ್ಬಲಗೊಳ್ಳುತ್ತಿವೆ. ಮೂಲ ಸೌಕರ್ಯಗಳನ್ನು ಒದಗಿಸುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಪುಸ್ತಕಗಳನ್ನು ಸರಬರಾಜು ಮಾಡುವ ಸಾರ್ವಜನಿಕ ಗ್ರಂಥಾಲಯ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಮತ್ತು ಅದಕ್ಷತೆಯಿಂದ ಗ್ರಾಮೀಣ ಗ್ರಂಥಾಲಯಗಳು ಬಡವಾಗಿವೆ. ಇದರಿಂದ ಆಗುತ್ತಿರುವ ಸಾಂಸ್ಕೃತಿಕ ನಷ್ಟವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಂತಿಲ್ಲ. ಗ್ರಂಥಾಲಯಗಳೇ ದುರ್ಬಲವಾಗಿರುವಾಗ, ಅವುಗಳ ಉಸ್ತುವಾರಿ ನೋಡಿಕೊಳ್ಳುವ ಮೇಲ್ವಿಚಾರಕರ ಸ್ಥಿತಿ ಮತ್ತಷ್ಟು ಶೋಚನೀಯ ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕನಿಷ್ಠ ಸಂಬಳದಲ್ಲಿ ಜವಾಬ್ದಾರಿಯುತ ಹೊಣೆಗಾರಿಕೆ ನಿಭಾಯಿಸಬೇಕಾದ ಸವಾಲು ಅವರದು. ಸರ್ಕಾರದಿಂದ ಹಣ ಸರಿಯಾದ ಸಮಯಕ್ಕೆ ಬಿಡುಗಡೆ ಆಗದೆ ಇರುವುದರಿಂದ ಗ್ರಂಥಾಲಯಗಳಿಗೆ ತರಿಸುವ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಸರಬರಾಜುದಾರರಿಗೆ ಮಾಡಬೇಕಾದ ಪಾವತಿಯೂ ವಿಳಂಬವಾಗುತ್ತದೆ ಹಾಗೂ ಅದರ ಒತ್ತಡವನ್ನು ಗ್ರಂಥಾಲಯದ ಮೇಲ್ವಿಚಾರಕರೇ ಅನುಭವಿಸಬೇಕಾಗುತ್ತದೆ.

ನೌಕರರಿಗೆ ಸಮಯಕ್ಕೆ ಸರಿಯಾಗಿ ಸಂಬಳ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಅದರಲ್ಲೂ ಗೌರವ ಸಂಭಾವನೆ ಪಡೆದು ಕೆಲಸ ಮಾಡುವವರು, ಗುತ್ತಿಗೆ ಕಾರ್ಮಿಕರು ಹಾಗೂ ದಿನಗೂಲಿ ಕಾರ್ಮಿಕರಿಗೆ ವಿಳಂಬವಿಲ್ಲದೆ ವೇತನ ದೊರೆಯಬೇಕು. ಸರ್ಕಾರದ ಅನುದಾನದ ಕೊರತೆಯಿಂದಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಹದಿನೈದು ತಿಂಗಳುಗಳಿಂದ ಸಂಬಳ ಆಗದಿರುವ ಸುದ್ದಿ ಇತ್ತೀಚೆಗಷ್ಟೇ ಪ್ರಕಟವಾಗಿತ್ತು. ಬಹುತೇಕ ವಿಶ್ವವಿದ್ಯಾಲಯಗಳಲ್ಲಿನ ತಾತ್ಕಾಲಿಕ ನೌಕರರು ವಿಳಂಬ ಸಂಬಳದಿಂದಾಗಿ ಒದ್ದಾಡುವಂತಾಗಿದೆ. ಬಹುತೇಕ ಇಲಾಖೆಗಳಲ್ಲಿನ ತಾತ್ಕಾಲಿಕ, ಗುತ್ತಿಗೆ ನೌಕರರ ಸ್ಥಿತಿ ಇದೇ ಆಗಿದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರದಿಂದ ಅನುದಾನ ಲಭ್ಯವಿದ್ದರೂ, ಅಧಿಕಾರಿಗಳ ಬೇಜವಾಬ್ದಾರಿಯಿಂದ ಸಕಾಲಕ್ಕೆ ವೇತನ ಪಡೆಯುವುದರಿಂದ ನೌಕರರು ವಂಚಿತರಾಗುತ್ತಿದ್ದಾರೆ. ನೌಕರರ ಸಂಬಳಕ್ಕೆ ಅನುದಾನ ಒದಗಿಸುವುದರ ಜೊತೆಗೆ, ಹಿರಿಯ ಅಧಿಕಾರಿಗಳಿಗೆ ಮಾನವೀಯತೆಯ ಪಾಠಗಳನ್ನೂ ಸರ್ಕಾರ ಹೇಳಿಕೊಡಬೇಕಾಗಿದೆ. ಆತ್ಮಹತ್ಯೆ ಮಾಡಿಕೊಂಡಿರುವ ಮಳಖೇಡದ ಗ್ರಂಥಾಲಯ ಮೇಲ್ವಿಚಾರಕಿಯ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸಿ, ಕರ್ತವ್ಯಲೋಪ ಎಸಗಿದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕಾಗಿದೆ.

ಅಪಾಯಕಾರಿ ಹೇಳಿಕೆ



‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ’ ಎಂದು ಮುಂದುವರಿದ ಜಾತಿಯವರೆಂದು ಗುರುತಿಸಿಕೊಳ್ಳುವವರ ಹೇಳಿಕೆಗಳು ಜವಾಬ್ದಾರಿ ಇಲ್ಲದ ನಡವಳಿಕೆ. ಮಾಹಿತಿ ತಂತ್ರಜ್ಞಾನದಲ್ಲೇ ಬದುಕಿರುವವರಿಗೆ ತಾವು ಮುಂದುವರಿದವರೂ ಮಾಹಿತಿ ಕೊಡಬೇಕಿರುವ ಮಹತ್ವದ ಅರಿವಿಲ್ಲವೆ? ಸಾಮಾಜಿಕವಾಗಿ ಇತರರ ಮೇಲೆ ತಮ್ಮ ನಿಲುವು, ಹೇಳಿಕೆ ಎಂತಹ ಪ್ರಭಾವ ಬೀರುತ್ತದೆ ಎಂಬುದು ತಿಳಿದಿರುವುದರಿಂದಲೇ ಉನ್ನತ ಸ್ಥಾನಮಾನದ ಕೆಲವು ವ್ಯಕ್ತಿಗಳು ಹೀಗೆ ಹೇಳುವುದು.

ಎನ್‌.ವಿ. ವಾಸುದೇವ ಶರ್ಮಾ, ಮಕ್ಕಳ ಹಕ್ಕುಗಳ ಕಾರ್ಯಕರ್ತ
‘ಫೇಸ್‌ಬುಕ್’ನಿಂದ

ಕಿಡಿನುಡಿ



ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಒತ್ತಡ ತಾಳಲಾರದೆ ಸಮೀಕ್ಷಕರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಲಬುರಗಿಯಲ್ಲಿ ವೇತನ ಸಿಗದೆ ಗ್ರಂಥಪಾಲಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ, ಕಮಿಷನ್ ದಾಹಕ್ಕೆ ಇನ್ನೆಷ್ಟು ಅಮಾಯಕ ಜೀವಗಳು ಬಲಿಯಾಗಬೇಕು?

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 17-10-2000

• ತುಮಕೂರು: ಅಪಘಾತದಲ್ಲಿ ಮೂವರು ಸಾವು

ತುಮಕೂರು, ಅ. 16– ಇಲ್ಲಿಗೆ ಸಮೀಪದ ಊರುಕೆರೆ ಎಂಬಲ್ಲಿ ಇಂದು ರಾತ್ರಿ ಸಂಭವಿಸಿದ ರಸ್ತೆ ಅಪಘಾತವೊಂದರಲ್ಲಿ ಮೂರು ಮಂದಿ ಮೃತಪಟ್ಟಿದ್ದಾರೆ ಹಾಗೂ ಇತರ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಮೃತಪಟ್ಟವರನ್ನು ಆಟೊ ಚಾಲಕ ಮಂಜುನಾಥ (21), ರವಿ (21) ಮತ್ತು ಕೃಷ್ಣಕುಮಾರ್ (22) ಎಂದು ಗುರುತಿಸಲಾಗಿದೆ. ನರಸಾಪುರದ ಎನ್. ರಂಗಸ್ವಾಮಿ (22), ಕಳಸೇಗೌಡನಪಾಳ್ಯದ ಶಿಕ್ಷಕ ಬಸವರಾಜ್ ಮತ್ತು ಊರುಕೆರೆಯ ಪ್ರಕಾಶ್ (22) ತೀವ್ರವಾಗಿ ಗಾಯಗೊಂಡಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 17-10-1950


• ಕ್ಲೀನ್‌ಬೌಲ್ಡ್–ನಾಟ್‌ಔಟ್

ಮೆಲ್‌ಬೋರ್ನ್, ಅ. 16– ಚೆಂಡು ವಿಕೆಟ್‌ಗಳಿಗೆ ತಗುಲಿ ಔಟಾದ ಆಸ್ಟ್ರೇಲಿಯಾದ ಟೆಸ್ಟ್ ಆಟಗಾರ ನೇಯಿಲ್ ಹಾರ್ವೆಗೆ ಬೇಲ್‌ಗಳು ಆಕಾಶದಲ್ಲಿ ಹಾರಿ ಮತ್ತೆ ಸ್ವಸ್ಥಾನ ಸೇರಿ ‘ಜೀವದಾನ’ ಮಾಡಿದವು.

ಜಿಲ್ಲಾ ಕ್ರಿಕೆಟ್ ಪಂದ್ಯದಲ್ಲಿ ಅವರು 17 ರನ್ನು ಮಾಡಿದಾಗ, ಡಿಲಾನ್ ಅವರು ಬೌಲ್ ಮಾಡಿದ ಚೆಂಡು ಮಧ್ಯದ ವಿಕೆಟ್‌ಗೆ ಹೊಡೆಯಿತು. ವಿಕೆಟ್ ಮೇಲೆ ಇಡಲಾಗಿದ್ದ ಎರಡು ಬೇಲ್‌ಗಳೂ ಆಕಾಶಕ್ಕೆ ಹಾರಿ ಮತ್ತೆ ವಿಕೆಟ್ ಮೇಲೆ ಇರುವ ಗುಳಿಗಳ ಮೇಲೇ ಬಿದ್ದು ನಿಂತುಬಿಟ್ಟವು!

ಔಟಾದೆನೆಂದು ಭಾವಿಸಿದ ಹಾರ್ವೆ ಪೆವಿಲಿಯನ್ ದಾರಿ ಹಿಡಿದಿದ್ದಾಗ ಅಂಪೈರ್‌ಗಳು ಆತನನ್ನು ಹಿಂದಕ್ಕೆ ಕರೆದು ‘ನೀನು ಔಟಾಗಿಲ್ಲ’ ಎಂದು ತಿಳಿಸಿದರು.

ಅಧಿಕಾರ ಚರ; ಸಾಧನೆ ಚಿರ



ಗತಿಬಿಂಬ
ವೈ.ಗ. ಜಗದೀಶ್

> ಅಧಿಕಾರದಲ್ಲಿ ಇರುವಷ್ಟು ಕಾಲ ಜನರ ಹಿತಕ್ಕಾಗಿ ದುಡಿಯುವುದು ಜನಪರ ನಾಯಕನ ಲಕ್ಷಣ. ಮುಂದೆಯೂ ಕುರ್ಚಿಯಲ್ಲಿ ಇರಬಹುದಾದ ದಿನಗಳ ಲೆಕ್ಕಾಚಾರದಲ್ಲಿ ವರ್ತಮಾನದ ತವಕ ತಲ್ಲಣಗಳನ್ನು ನಿರ್ಲಕ್ಷಿಸಬಾರದು. ಜನಹಿತ ಮರೆತ ನಾಯಕರನ್ನು ಜನರೂ ನಿರ್ಲಕ್ಷಿಸಿರುವ ಉದಾಹರಣೆಗಳನ್ನು ಕಾಂಗ್ರೆಸ್ ನಾಯಕರು ಮರೆಯಬಾರದು.

ಕವಿ ಪಂಪನ ‘ಆದಿಪುರಾಣ’ ಮಹಾಕಾವ್ಯದಲ್ಲಿ ಭರತ–ಬಾಹುಬಲಿ ಯುದ್ಧ ಪ್ರಸಂಗವಿದೆ. ಚಕ್ರವರ್ತಿ ಭರತನು ತನ್ನ ಬಳಿಯಿದ್ದ ಚಕ್ರದ ಸಹಾಯದಿಂದ ಷಟ್ಖಂಡಮಂಡಳವನ್ನು ಅನಾಯಾಸವಾಗಿ ಗೆದ್ದು, ಗರ್ವದಿಂದ ಇರುತ್ತಾನೆ. ವೃಷಭಾದ್ರಿ ನೆತ್ತಿಯಲ್ಲಿ ‘ವಿಶ್ವವಿಶ್ವಂಭರಾವಿಜಯ’ ಎಂಬ ತನ್ನ ಕೀರ್ತಿಯನ್ನು ಕೆತ್ತಿಸಲು ಮುಂದಾಗುತ್ತಾನೆ. ಆದರೆ, ಅಲ್ಲಿ ಗತಿಸಿದ ನೂರಾರು ಚಕ್ರವರ್ತಿಗಳ ಕುರಿತ ಮೆಚ್ಚುಗೆ ಮಾತುಗಳು, ಪಡೆದ ಪ್ರಶಸ್ತಿ, ಬಿರುದಾವಳಿಗಳ ಕೆತ್ತನೆಗಳನ್ನು ನೋಡಿ ಭರತೇಶ್ವರನ ಗರ್ವರಸವು ಕ್ಷಣವೇ ಕರಗಿ ಹೋಗುತ್ತದೆ. ಆದರೂ ಹಿಂದಿನ ದೊರೆಯೊಬ್ಬನ ಹೆಸರನ್ನು ತನ್ನ ದಂಡದಿಂದ ಅಳಿಸಿ, ಅಲ್ಲಿ ತನ್ನ ಹೆಸರನ್ನು ಬರೆಯಿಸಿ ಅಯೋಧ್ಯೆಯ ಕಡೆ ನಡೆಯುತ್ತಾನೆ.

ಅಯೋಧ್ಯೆ ದ್ವಾರ ಎದುರಾಗುತ್ತಿದ್ದಂತೆಯೇ ಅವನ ಬಳಿ ಇದ್ದ ಚಕ್ರ ಮುಂದೆ ಚಲಿಸದೇ ನಿಂತುಬಿಡುತ್ತದೆ. ಅಚ್ಚರಿಗೊಂಡ ಭರತ ಕಾರಣ ಕೇಳಿದಾಗ, ಹೊರಗಿನ ಸಮಸ್ತರನ್ನು ಗೆದ್ದರೂ ಒಳಗಿರುವ ಆತನ ಸಹೋದರ ಬಾಹುಬಲಿ ಶರಣಾಗದೇ ಇದ್ದುದರಿಂದ ಜೈತ್ರಯಾತ್ರೆ ಪೂರ್ಣವಾಗಲಿಲ್ಲವೆಂಬುದು ಗೊತ್ತಾಗುತ್ತದೆ. ವಿಜಯೋನ್ಮತ್ತನಾದ ಭರತನಿಗೆ ಅವರನ್ನೂ ಗೆಲ್ಲಬೇಕೆಂಬ ತವಕ. ಅಣ್ಣತಮ್ಮಂದಿರ ಮಧ್ಯೆ ಯುದ್ಧ ನಡೆದರೆ ಸಾವು ನೋವು ಸಂಭವಿಸುತ್ತದೆ ಎಂದರಿತ ಮಂತ್ರಿಗಳು, ದೃಷ್ಟಿಯುದ್ಧ, ಮಲ್ಲಯುದ್ಧ, ಬಾಹುಯುದ್ಧ ನಡೆಸಲು ಸೂಚಿಸುತ್ತಾರೆ. ಭರತ–ಬಾಹುಬಲಿಯ ಮಧ್ಯೆ ಯುದ್ಧಗಳು ನಡೆದಾಗ, ಎಲ್ಲದರಲ್ಲೂ ಬಾಹುಬಲಿ ಗೆಲ್ಲುತ್ತಾನೆ. ಬಾಹುಯುದ್ಧದಲ್ಲಿ ಬಾಹುಬಲಿಯು ಅಣ್ಣನನ್ನು ಒಂದೇ ಸಲ ಮೇಲಕ್ಕೆತ್ತಿ ನೆಲಕ್ಕೆ ಬಡಿಯುತ್ತಾನೆ. ತಕ್ಷಣವೇ ಎಚ್ಚತ್ತ ಬಾಹುಬಲಿ, ಚಕ್ರವರ್ತಿಯಾದ ತನ್ನ ಅಣ್ಣನನ್ನು ಹೀಗೆ ಮಾಡುವುದು ಸರಿಯಲ್ಲವೆನಿಸಿ ಗೆದ್ದರೂ ಸುಮ್ಮನಾಗುತ್ತಾನೆ. ಕೋಪದಿಂದ ರೊಚ್ಚಿಗೆದ್ದ ಭರತ, ತನ್ನ ಬಳಿ ಇದ್ದ ಚಕ್ರವನ್ನು ಆತನ ಮೇಲೆ ಪ್ರಯೋಗಿಸುತ್ತಾನೆ. ಅದು ಕೂಡ ಬಾಹುಬಲಿಗೆ ಮೂರು ಸುತ್ತು ಬಂದು ನಿಂತು ಬಿಡುತ್ತದೆ. ಆಗ ಬಾಹುಬಲಿ, ‘ನೆಲಸುಗೆ ನಿನ್ನ ವೃಕ್ಷದೊಳ್ ನಿಶ್ಚಲಮೀ ಈ ಭಟಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜಲಕ್ಷ್ಮಿ ಭೂವಲಯಮನಯ್ಯವಿತ್ತುದುಮನಾಂ ನಿನಗಿತ್ತು ದೇನಣ್ಣ’ ಎಂದು ಅಣ್ಣನಿಗೆ ಹೇಳಿ ತಪಸ್ಸಿಗೆ ನಡೆದುಬಿಡುತ್ತಾನೆ.

ಇಂದು ನಾಡು, ದೇಶ, ವಿದೇಶಗಳಲ್ಲಿ ಅಧಿಕಾರಕ್ಕಾಗಿ ಕಚ್ಚಾಟ, ತಾವೇ ಗೆದ್ದವೆಂದು ಬೀಗುವ, ಅಧಿಕಾರವೊಂದೇ ಶಾಶ್ವತವೆಂದು ನಂಬಿರುವ ‘ಮಹಾನಾಯಕರು, ವಿಶ್ವಗುರು’ಗಳ ಮಧ್ಯೆ ಬಾಹುಬಲಿಯ ಆದರ್ಶ ಯಾರಿಗೆ ಬೇಕಾಗಿದೆ? ಎಲ್ಲರೂ ಭರತನ ರೀತಿಯಲ್ಲಿ ತಾವೇ ‘ವಿಶ್ವವಿಶ್ವಂಭರಾ ವಿಜಯ’ ಎಂದು ತವಕಿಸುವ, ದಾಖಲೆ ಬರೆಯುವ ಮಹತ್ವಾಕಾಂಕ್ಷೆಯಲ್ಲಿದ್ದಾರೆ.

ಕರ್ನಾಟಕದಲ್ಲಿಯೂ ನಾಯಕತ್ವದ ಕಚ್ಚಾಟ ದಿನೇ ದಿನೇ ತಾರಕಕ್ಕೇರುತ್ತಿದೆ. 2023ರಲ್ಲಿ ನಡೆದಿದೆ ಎಂದು ಕಾಂಗ್ರೆಸ್ ಪಾಳಯದಲ್ಲಿ ಚರ್ಚೆಯಲ್ಲಿರುವ ‘ಅಧಿಕಾರ ಹಂಚಿಕೆಯ ಸೂತ್ರ’ದ ಸಂಗತಿ ಆಗಾಗ ಮುನ್ನೆಲೆಗೆ ಬಂದು, ಮತ್ತೆ ಮರೆಯಾಗುತ್ತಲೇ ಇದೆ. ನವೆಂಬರ್‌ಗೆ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿದ್ದು, ಸೂತ್ರ ಹರಿದಂತಿರುವ ‘ಅಧಿಕಾರದ ಗಾಳಿಪಟ’ ತೊಯ್ದಾಡಲಾರಂಭಿಸಿದೆ.

ಮೈಸೂರು ದಸರಾ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಂದಿನ ದಸರಾಕ್ಕೂ ತಾವೇ ಚಾಲನೆ ನೀಡುವುದಾಗಿ ಹೇಳಿದ್ದರು. ಇದಕ್ಕೆ ಪ್ರತಿಯಾಗಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲಿಗರು ಪ್ರತಿತಂತ್ರ ಹೆಣೆಯಲು ಆರಂಭಿಸಿದರು. ಹಾಸನಾಂಬೆ ದರ್ಶನ ಪಡೆದ ಸಿದ್ದರಾಮಯ್ಯ, ‘ನಾಯಕತ್ವ ಬದಲಾವಣೆಯೂ ಇಲ್ಲ; ನವೆಂಬರ್ ಕ್ರಾಂತಿಯೂ ಇಲ್ಲ’ ಎಂದು ಹೇಳಿ, ಅಧಿಕಾರ ಬಿಟ್ಟುಕೊಡದಿರುವ ಸಂದೇಶ ರವಾನಿಸಿದ್ದಾರೆ. ತಮ್ಮ ಕುರಿತ ಪುಸ್ತಕ ಬಿಡುಗಡೆ ವೇಳೆ ಮಾತನಾಡಿದ ಶಿವಕುಮಾರ್, ‘ಸಮ್ಮಿಶ್ರ ಸರ್ಕಾರ ಬಿದ್ದುಹೋಗುವ ವೇಳೆ ಉಪಮುಖ್ಯಮಂತ್ರಿ ಹುದ್ದೆಯೋ ಜೈಲೋ ಎಂಬ ಆಯ್ಕೆ ಇಡಲಾಗಿತ್ತು. ಪಕ್ಷನಿಷ್ಠನಾಗಿ ಜೈಲುವಾಸ ಆಯ್ಕೆ ಮಾಡಿಕೊಂಡೆ’ ಎಂದಿದ್ದಾರೆ. 2019ರಲ್ಲೇ ಅವಕಾಶದ ಬಾಗಿಲನ್ನು ಬಿಜೆಪಿ ತೆರೆದಿತ್ತು ಎಂಬುದನ್ನು ಪರೋಕ್ಷವಾಗಿ ಪ್ರಸ್ತಾಪಿಸಿ, ತಮಗೂ ಆಯ್ಕೆಯ ದಾರಿಗಳಿವೆ ಎಂಬುದನ್ನು ಸೂಚ್ಯವಾಗಿ ಹೇಳಿದ್ದಾರೆ.

ಇವೆಲ್ಲದರ ನಡುವೆಯೇ, ಬಿಹಾರ ಚುನಾವಣೆ ಬಳಿಕ ಸಚಿವ ಸಂಪುಟ ಪುನರ್‌ರಚನೆ ವಿಷಯವನ್ನು ಚರ್ಚಿಸಲಾಗುವುದು ಎಂದು ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಸಚಿವರು ತಮ್ಮ ಸ್ಥಾನ ಉಳಿಸಿಕೊಳ್ಳಲು, ಆಕಾಂಕ್ಷಿಗಳು ತಮ್ಮ ಸುತ್ತಲೇ ನೆರೆದಿರುವಂತೆ ನೋಡಿಕೊಳ್ಳುವ ತಂತ್ರಗಾರಿಕೆಯ ಭಾಗವಾಗಿಯೂ ಈ ವಿಷಯವನ್ನು ಮುನ್ನೆಲೆಗೆ ತರಲಾಗಿದೆ ಎಂಬುದು ರಹಸ್ಯವೇನಲ್ಲ. ಯಾವುದೇ ಕಾರಣಕ್ಕೂ ನಾಯಕತ್ವ ಬಿಟ್ಟುಕೊಡದಿರುವ ಛಲಕ್ಕೆ ಬಿದ್ದಿರುವ ಸಿದ್ದರಾಮಯ್ಯ, ಬಹುಸಂಖ್ಯೆಯಲ್ಲಿರುವ ತಮ್ಮ ಗುಂಪು ಚದುರದಂತೆ ಹಿಡಿದಿಟ್ಟುಕೊಳ್ಳುವ ಚಾಣಾಕ್ಷತೆಯನ್ನು ತೋರಿಸಿದ್ದಾರೆ. ಅದೇ ಕಾರಣಕ್ಕಾಗಿಯೇ, ಮುಖ್ಯಮಂತ್ರಿ ಆಯ್ಕೆಗೆ ಹೈಕಮಾಂಡ್ ಆಶೀರ್ವಾದದ ಜತೆಗೆ ಶಾಸಕರ ಬೆಂಬಲವೂ ಮುಖ್ಯವಾಗುತ್ತದೆ ಎಂಬ ಹೊಸ ದಾಳವನ್ನೂ ಅವರು ಉರುಳಿಸಿದ್ದಾರೆ. ಶಾಸಕರ ಬಲಕ್ಕಿಂತ ಹೈಕಮಾಂಡ್ ಬಲವನ್ನೇ ನೆಚ್ಚಿಕೊಂಡಿರುವ ಶಿವಕುಮಾರ್, ಇದಕ್ಕೆ ಪರ್ಯಾಯವಾಗಿ ‘ವರಿಷ್ಠರ ತೀರ್ಮಾನವೇ ಮುಖ್ಯ’ ಎಂಬ ಪ್ರತಿದಾಳವನ್ನೂ ಒಗೆದಿದ್ದಾರೆ. ಈ ಎಲ್ಲ ಮಾತು–ನಡವಳಿಕೆಗಳನ್ನು ಗಮನಿಸಿದರೆ, ಬಿಹಾರ ವಿಧಾನಸಭೆ ಫಲಿತಾಂಶವು ರಾಜ್ಯ ರಾಜಕೀಯದ ಮೇಲೂ ನಿರ್ಣಾಯಕ ಪರಿಣಾಮ ಬೀರುವ ಲಕ್ಷಣಗಳು ಕಾಣಿಸುತ್ತಿವೆ. ರಾಜ್ಯವಾಳುವವರು ಅಲ್ಲಿಯವರೆಗಾದರೂ ಅಭಿವೃದ್ಧಿ ಕಾರ್ಯಗಳತ್ತ ಲಕ್ಷ್ಯ ಕೊಡಬೇಕಾದುದು ಅವರ ಕರ್ತವ್ಯ.

2019–2023ರ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಇದೇ ಮಾದರಿಯ ಅಸ್ಥಿರತೆ ರಾಜ್ಯವನ್ನು ಬಾಧಿಸಿತ್ತು. ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ಅಕಾಲದಲ್ಲೇ ಕೆಳಗಿಳಿಸಲಾಯಿತು. ನಂತರ, ಬಸವರಾಜ ಬೊಮ್ಮಾಯಿ ಅವರನ್ನು ಬಿಜೆಪಿ ವರಿಷ್ಠರು ಅಧಿಕಾರದ ಕುರ್ಚಿಯಲ್ಲಿ ಕೂರಿಸಿದರೂ ಈಗ ಇಳಿಯುತ್ತಾರೆ, ಆಗ ಇಳಿಯುತ್ತಾರೆ ಎಂಬ ಅನಿಶ್ಚಿತ ಸ್ಥಿತಿಯನ್ನು ಕಾಯ್ದುಕೊಂಡೇ ಬರಲಾಗಿತ್ತು. ಅಸ್ಥಿರ ಸರ್ಕಾರ ಎಂಬುದು ಸುಗಮ ಆಡಳಿತಕ್ಕೆ ಧಕ್ಕೆ ತರುವ ಜತೆಗೆ, ಇದ್ದಷ್ಟು ದಿನ ತಮ್ಮ ತಿಜೋರಿ ತುಂಬಿಸಿಕೊಳ್ಳುವ ಮನಃಸ್ಥಿತಿಗೆ ಆಡಳಿತಾರೂಢರನ್ನು ದೂಡುತ್ತದೆ. ಅಧಿಕಾರ ಇರುವಾಗಲೇ ಮೂರು ತಲೆಮಾರಿಗೆ ಆಗುವಷ್ಟು ಹಣ ಮಾಡಿಕೊಳ್ಳಬೇಕೆಂಬ ಹಪಹಪಿಗೆ ಅಧಿಕಾರಸ್ಥರು ಬಿದ್ದರೆ, ಅದಕ್ಕಾಗಿಯೇ ಕಾಯುತ್ತಿರುವ ಅಧಿಕಾರಿ ವರ್ಗ ಕೂಡ ಹೊನ್ನಿನ ಚೀಲವನ್ನು ತುಂಬಿಸಿಕೊಳ್ಳುವತ್ತಲೇ ಸಕಲ ಶ್ರಮವನ್ನು ವಿನಿಯೋಗಿಸಿಕೊಂಡಿರುತ್ತದೆ.

ಬಿಜೆಪಿ ಅವಧಿಯ ರಾಜಕೀಯವನ್ನು ನೋಡಿಯೇ ನಾಡಿನ ಜನ ಭಾರಿ ಬಹುಮತವನ್ನು ಕಾಂಗ್ರೆಸ್‌ಗೆ ಕೊಟ್ಟರು. ಜನ ಕೊಟ್ಟ ಅಧಿಕಾರವನ್ನು ಜನಕಲ್ಯಾಣಕ್ಕೆ ಬಳಸಬೇಕೇ ವಿನಾ ಅಧಿಕಾರಕ್ಕಾಗಿ ನಿತ್ಯವೂ ಗುದ್ದಾಡುವುದಲ್ಲ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ತಮ್ಮ ಹೈಕಮಾಂಡ್ ಮುಂದೆ ಮಾಡಿಕೊಂಡಿದ್ದಾರೆ ಎನ್ನಲಾದ ‘ಒಪ್ಪಂದ’ದಂತೆ ಅವರಿಬ್ಬರು ಅಧಿಕಾರವನ್ನಾದರೂ ಹಂಚಿಕೊಳ್ಳಲಿ; ಸೂತ್ರವನ್ನಾದರೂ ಹರಿದುಕೊಳ್ಳಲಿ. ಆದರೆ ಅದನ್ನು ಪಕ್ಷದ ಆಂತರಿಕ ಬಿಕ್ಕಟ್ಟಾಗಿ ಪರಿಗಣಿಸಿ ಬಗೆಹರಿಸಿಕೊಳ್ಳಬೇಕೇ ಹೊರತು, ಜನಸಾಮಾನ್ಯರ ಸಮಸ್ಯೆ ಎಂಬಂತೆ ಬಿಂಬಿಸುವುದು ಮುತ್ಸದ್ದಿಗಳಿಗೆ ತಕ್ಕ ನಡೆಯಲ್ಲ. ‘ನಾಯಕತ್ವ ಬದಲಿಲ್ಲ, ಸಂಪುಟ ಪುನರ್ ರಚನೆ ಇಲ್ಲ’ ಎಂದು ನಿತ್ಯವೂ ಜಾಗಟೆ ಬಾರಿಸುವುದರಿಂದ ಜನರಿಗೆ ಕಿರಿಕಿರಿ ಹೆಚ್ಚಾಗುತ್ತದೆಯೇ ವಿನಾ ನಾಡಿನ ಹಿತಕ್ಕೆ ಏನೂ ಪ್ರಯೋಜನವಿಲ್ಲ.

ಅಧಿಕಾರ ಯಾವತ್ತೂ ಶಾಶ್ವತವಲ್ಲ. ಅಧಿಕಾರವನ್ನು ಬಳಸಿ ಜನರಿಗೆ, ರಾಜ್ಯಕ್ಕೆ ಏನು ಮಾಡಿದ್ದಾರೆ ಎಂಬುದಷ್ಟೇ ಚರಿತ್ರೆಯಲ್ಲಿ ಉಳಿದಿದೆ. ಅಧಿಕಾರದಲ್ಲಿದ್ದಾಗ ಎಷ್ಟು ಶಿಲಾನ್ಯಾಸ, ಉದ್ಘಾಟನೆಗಳ ಕಲ್ಲುಗಳನ್ನು ನೆಟ್ಟಿದ್ದೀರಿ, ಎಷ್ಟು ದಿನ ಅಧಿಕಾರದಲ್ಲಿದ್ದೀರಿ, ದಿನಗಳ ಎಣಿಕೆಯಲ್ಲಿ ಯಾರ ದಾಖಲೆ ಮುರಿದಿದ್ದೀರಿ ಎಂಬುದು ಜನರಿಗೆ ಬೇಕಿಲ್ಲ. ಅದೇನಿದ್ದರೂ ನಿಮ್ಮ ತೃಪ್ತಿಗೆ, ನಿಮ್ಮನ್ನು ಮೆಚ್ಚಿಸಲು ಬಯಸುವ ವಂದಿಮಾಗಧರಿಗಷ್ಟೇ ಪ್ರಮುಖ. ಜನಮಾನಸದಲ್ಲಿ ಉಳಿಯುವ ಎಷ್ಟು ಕೆಲಸವನ್ನು ತಾವು ಮಾಡಿದ್ದೇವೆ ಎಂಬುದನ್ನು ಅಧಿಕಾರರೂಢರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಎಸ್. ಬಂಗಾರಪ್ಪ, ವೀರಪ್ಪ ಮೊಯಿಲಿ, ಎಚ್.ಡಿ. ದೇವೇಗೌಡ, ಎಸ್.ಎಂ. ಕೃಷ್ಣ, ಬಿ.ಎಸ್. ಯಡಿಯೂರಪ್ಪ, ಹಿಂದಿನ ಅವಧಿಯ ಸಿದ್ದರಾಮಯ್ಯನವರನ್ನು ಅವರು ಅಧಿಕಾರದಲ್ಲಿದ್ದಾಗ ಮಾಡಿದ ಕೆಲಸಗಳಿಗಾಗಿ ಜನ ನೆನಪಿಸಿಕೊಳ್ಳುತ್ತಾರೆಯೇ ಹೊರತು, ಎಷ್ಟು ವರ್ಷ ಅಧಿಕಾರದಲ್ಲಿದ್ದರು ಎಂಬ ಸಂಕಲನ–ವ್ಯವಕಲನದಲ್ಲಿ ಅಲ್ಲ. ಅಧಿಕಾರದ ಕಿತ್ತಾಟ ಹೀಗೆ ಮುಂದುವರಿದರೆ, ಜನರಿಗೆ ಹಿತಾನುಕೂಲ ಕಲ್ಪಿಸಿರುವ ‘ಪಂಚ ಗ್ಯಾರಂಟಿ’ಗಳ ಹೊಳಪು ಕೂಡ ಮರೆಯಾದೀತು.

ಈಗಿನ ಪರಿಸ್ಥಿತಿ ಹೇಗಿದೆ ಎಂದರೆ, ಜನರು ಪ್ರವಾಹ ತುಂಬಿದ ನದಿಯಲ್ಲಿ ನಿಂತಿದ್ದಾರೆ. ಅಧಿಕಾರವೆಂಬ ದೋಣಿಯಲ್ಲಿರುವವರಿಗೆ ದಡ ಸೇರುವ ಛಲ. ಅಧಿಕಾರದ ಆಸೆಯಲ್ಲಿ ಹುಟ್ಟು ಹಿಡಿದು ಕಾಯುತ್ತಿರುವವರಿಗೆ ಹೇಗಾದರೂ ದೋಣಿ ಏರುವ ತವಕ. ಇದು ಸದ್ಯದ ಕಾಂಗ್ರೆಸ್‌ನ ಜಾತಕ. ನದಿಯಲ್ಲಿರುವವರನ್ನು ಕೈ ಹಿಡಿದು ಮೇಲೆತ್ತಬೇಕಿರುವುದು ಆಗಲೇಬೇಕಾದ ಕಾಯಕ.

ಮಳೆಯಿಂದಾಗಿ ಜನ ಸಂಕಷ್ಟದಲ್ಲಿದ್ದಾರೆ. ಮಳೆ ಇಲ್ಲದ ಕಡೆಯ ರೈತರು ಬರದ ಆತಂಕದಲ್ಲಿದ್ದಾರೆ. ನಿರೀಕ್ಷಿತ ಉದ್ಯೋಗ ಸೃಷ್ಟಿಯಾಗದೇ ಯುವಕರು ಬೀದಿಗಿಳಿದಿದ್ದಾರೆ. ಹೃದ್ರೋಗ ಪ್ರಕರಣಗಳು ಹೆಚ್ಚುತ್ತಿದ್ದು, ವಯಸ್ಸಿನ ಭೇದವಿಲ್ಲದೇ ಕಿರಿಯರು–ಹಿರಿಯರು ಪತಂಗಗಳಂತೆ ಕುಸಿದು ಬಿದ್ದು ಸಾಯುತ್ತಿದ್ದಾರೆ. ಮಹಿಳೆಯರು, ಮುಗ್ಧ ಕಂದಮ್ಮಗಳ ಮೇಲಿನ ಅತ್ಯಾಚಾರ, ಕಿರುಕುಳ ಪ್ರಕರಣಗಳು ಹೆಚ್ಚುತ್ತಲೇ ಇವೆ. ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಕೊನೆಯೆಂಬುದೇ ಇಲ್ಲ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದನ್ನು ಬಿಟ್ಟು ಅಧಿಕಾರದ ಆಟದಲ್ಲಿ ಮಗ್ನರಾದರೆ ಜನ ಕ್ಷಮಿಸಲಾರರು.





ಸುಭಾಷಿತ

ಮಾನವತೆಯನ್ನು ಮರೆತ ಮತೋದ್ಧಾರ ಹೆಣದ ಸಿಂಗಾರ.

–ಕೆ.ಎಸ್. ನಿಸಾರ್ ಅಹಮದ್

ವಾಚಕರ ವಾಣಿ

ಸಚಿವರಿಗೆ ಕೊಲೆ ಬೆದರಿಕೆ ಅಕ್ಷಮ್ಯ

ಸರ್ಕಾರಿ ಕಚೇರಿಗಳಲ್ಲಿ ಮತ್ತು ಶಾಲಾ–ಕಾಲೇಜು ಆವರಣಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿಷೇಧ ಹೇರಬೇಕು ಎಂಬುದು ಸಚಿವ ಪ್ರಿಯಾಂಕ್ ಖರ್ಗೆ ಅವರು, ಮುಖ್ಯಮಂತ್ರಿಗೆ ಬರೆದಿರುವ ಪತ್ರದ ಸಾರ. ಆದರೆ, ಸಂಘ ಪರಿವಾರದ ಮನಸ್ಸುಗಳು ಈ ಅಂಶಕ್ಕೆ ಸುಳ್ಳಿನ ಲೇಪನ ಹಚ್ಚಿವೆ. ಸಂಘಟನೆಯನ್ನು ನಿಷೇಧಿಸುವಂತೆ ಹೇಳಿದ್ದಾರೆಂದು ಬಿಂಬಿಸಲಾಗುತ್ತಿದೆ. ಅಲ್ಲದೆ, ಪ್ರಿಯಾಂಕ್ ಖರ್ಗೆ ವಿರುದ್ಧ ವ್ಯಕ್ತಿಗತ ನೆಲೆಯಲ್ಲಿ ಇಲ್ಲಸಲ್ಲದ ಆರೋಪ ಮಾಡುತ್ತಿರುವುದು, ಹತ್ಯೆಯ ಬೆದರಿಕೆ ಹಾಕಿರುವುದು ಅಕ್ಷಮ್ಯ. ಸಚಿವರ ಹೇಳಿಕೆ ಸರಿ ಇಲ್ಲದಿದ್ದರೆ ಕಾನೂನಾತ್ಮಕ ಹೋರಾಟಕ್ಕೆ ಅವಕಾಶವಿದೆ. ಕಾನೂನು ಕೈಗೆತ್ತಿಕೊಳ್ಳುವ ಹಕ್ಕು ಯಾರಿಗೂ ಇಲ್ಲ.

ಪವನ್ ಜಯರಾಂ, ಚಾಮರಾಜನಗರ

ಬಡವರಿಗೆ ‘ಸರ್ಕಾರಿ ಮಾರ್ಕೆಟ್’ ಬೇಡವೆ?

ರಾಜ್ಯ ಸರ್ಕಾರಿ ನೌಕರರಿಗೆ ಎಂಎಸ್‌ಐಎಲ್‌ನಿಂದ ಸರ್ಕಾರಿ ಮಾರ್ಕೆಟ್ ಪ್ರಾರಂಭಿಸುವುದಾಗಿ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ಇದು ಒಳ್ಳೆಯ ಕ್ರಮವೇ. ಹಾಗೆಯೇ ದಿನಗೂಲಿ ನೌಕರರು, ಗಾರ್ಮೆಂಟ್ ನೌಕರರು, ಕಟ್ಟಡ ಕಾರ್ಮಿಕರು, ಮನೆಗೆಲಸದವರು, ಪೌರಕಾರ್ಮಿಕರು, ರೈತ ಕಾರ್ಮಿಕರು ಹೀಗೆ ದುಡಿಯುವ ಎಲ್ಲಾ ವರ್ಗದವರಿಗೂ ಇಂತಹ ಮಾರ್ಕೆಟ್ ಸ್ಥಾಪಿಸಬೇಕಿದೆ.

ಸರ್ಕಾರಿ ನೌಕರರಿಗೆ ಕಾಲಕಾಲಕ್ಕೆ ಸಂಬಳ, ಸಾರಿಗೆ ಸೇರಿ ಎಲ್ಲ ಅನುಕೂಲ ಸಿಗುತ್ತದೆ. ಬೆಲೆ ಸೂಚ್ಯಂಕದ ಆಧಾರದ ಮೇಲೆ ತುಟ್ಟಿಭತ್ಯೆ, ನಿವೃತ್ತಿ ವೇತನ, ಜೀವ ವಿಮಾ ಸೌಲಭ್ಯ ಉಂಟು. ಹಾಗಾಗಿ, ದಿನದ ದುಡಿಮೆಯನ್ನೇ ನಂಬಿ ಬದುಕುವ ಅಸಂಘಟಿತ ವಲಯದವರಿಗೆ ಇಂತಹ ಮಾರ್ಕೆಟ್‌ನ ಅಗತ್ಯತೆ ಹೆಚ್ಚಿದೆ.

ಅತ್ತಿಹಳ್ಳಿ ದೇವರಾಜ್, ಬೆಂಗಳೂರು

‘ಸ್ಪೀಡ್ ಪೋಸ್ಟ್’ನ ಆಮೆ ವೇಗ!

ಅಕ್ಟೋಬರ್ 11ರಂದು ಕಾಫೀ ಬೋರ್ಡ್ ಲೇಔಟ್‌ನ ಅಂಚೆ ಕಚೇರಿ ಮೂಲಕ ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ಸ್ಪೀಡ್ ಪೋಸ್ಟ್ ಮೂಲಕ ಒಂದು ಪತ್ರ ಕಳುಹಿಸಿದೆ. ಪ್ರತಿ ಬಾರಿ ಪತ್ರ ತಲುಪಿದ ತಕ್ಷಣ ಮೊಬೈಲ್‌ಗೆ ಸಂದೇಶ ಬರುತ್ತಿತ್ತು. ಈ ಬಾರಿ ಅಕ್ಟೋಬರ್ 14ರಂದು ಪತ್ರ ತಲುಪಿದೆ ಎಂಬ ಸಂದೇಶ ಬಂತು. ಬೆಂಗಳೂರಿನ ಒಂದು ಬಡಾವಣೆಯಿಂದ ಸುಮಾರು ಏಳು ಕಿ.ಮೀ. ದೂರವಿರುವ ಮತ್ತೊಂದು ಬಡಾವಣೆಗೆ ಪತ್ರ ತಲುಪಲು ನಾಲ್ಕು ದಿವಸ ಆಗಿದೆ. ಇದನ್ನು ಸ್ಪೀಡ್ ಪೋಸ್ಟ್ ಎಂದು ಕರೆದರೆ ಅಷ್ಟೇ ಸಾಕೇ?

ಟಿ.ವಿ. ನಾಗರಾಜ, ಬೆಂಗಳೂರು

ಕ್ರೌರ್ಯದ ಸುಳಿಗೆ ಸಿಲುಕಿದ ಮನಸ್ಸು

ಅರಿವಳಿಕೆ ಚುಚ್ಚುಮದ್ದು ನೀಡಿ ತನ್ನ ವೈದ್ಯೆ ಪತ್ನಿಯನ್ನು ಕೊಂದ ವೈದ್ಯನ ಸುದ್ದಿ ಓದಿ ಮನಸ್ಸು ವಿಹ್ವಲಗೊಂಡಿತು. ಜನರ ಜೀವದ ಹೊಣೆ ಹೊತ್ತಿರುವ ವೈದ್ಯನೇ ಎಸಗಿರುವ ಈ ದುಷ್ಕೃತ್ಯವು, ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂಬ ಗಾದೆ ಮಾತಿಗೆ ಅನ್ವರ್ಥವಾಗಿದೆ. ಇದೊಂದು ವೈಯಕ್ತಿಕ ಘಟನೆಯಾದರೂ ಸಮಾಜದಲ್ಲಿ ಅಭದ್ರತೆಯ ಎಳೆಯೊಂದು ಹಾಸು ಹೊಕ್ಕಂತೆ. ಅಸಹನೀಯವಾದ ಸಿಟ್ಟು, ರೋಷ ಇವೆಲ್ಲವೂ ಮನುಷ್ಯನಿಗೆ ಸಹಜವಾದ ಭಾವನೆಗಳು. ಅವುಗಳಿಗೆ ಒಂದು ಮಿತಿ ಹಾಕಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು.

ಆಶಾ ಅಪ್ರಮೇಯ, ದಾವಣಗೆರೆ

ಕನ್ನಡ ಕಲಿಕೆಗೆ ‘ಪ್ರಜಾವಾಣಿ’ ಪ್ರೇರಣೆ

ಸುಮಾರು ಐವತ್ತೈದು ವರ್ಷಗಳಿಂದ ನಾನು ‘ಪ್ರಜಾವಾಣಿ’ಯ ಓದುಗ ಮತ್ತು ಅಭಿಮಾನಿ. ನನ್ನ ಮಾತೃಭಾಷೆ ಹಿಂದಿ. ಆದಾಗ್ಯೂ, ಉತ್ತಮ ಲೇಖನಗಳನ್ನು ಬರೆಯುವ ಎತ್ತರಕ್ಕೆ ಕನ್ನಡ ಕಲಿಯಲು ನನಗೆ ‘ಪ್ರಜಾವಾಣಿ’ ಪ್ರೇರಣೆ ನೀಡಿದೆ. ಪ್ರತಿ ದಿನ ಮಾಡೆಸ್ಟಿ ಬ್ಲೇಸ್, ಫ್ಯಾಂಟಮ್ ಮತ್ತು ಮೊದ್ದುಮಣಿ ನೋಡುವುದರಿಂದ ಪತ್ರಿಕೆ ಓದುವ ಹವ್ಯಾಸ ಪ್ರಾರಂಭವಾಯಿತು. ಪತ್ರಿಕೆಯು ಮುಂಜಾನೆ ಕೈಗೆ ಬರುವವರೆಗೂ ಒಂದು ರೀತಿಯ ಚಡಪಡಿಕೆ ಇದ್ದೇ ಇರುತ್ತದೆ. 77 ವರ್ಷಗಳಿಂದ ಕರ್ನಾಟಕದ ಜನಮಾನಸದಲ್ಲಿ ಹಾಸುಹೊಕ್ಕಾಗಿರುವ ನನ್ನ ಏಕಾಂತದ ಅಂತರಂಗದ ಮಿತ್ರ ‘ಪ್ರಜಾವಾಣಿ’ಗೆ ಅನಂತಾನಂತ ಶುಭಾಶಯಗಳು.

ಜಯಚಂದ್ ಜೈನ್, ದಾವಣಗೆರೆ

ರಾಜೀವ ತಾರಾನಾಥರ ಹೆಸರು ಹಸಿರಾಗಿಸಿ

ಸರೋದ್ ವಾದಕ ಪಂ. ರಾಜೀವ ತಾರಾನಾಥರ ಜನ್ಮದಿನವಿಂದು (ಅ. 17). ಅವರು ಎಂ.ಎ ಇಂಗ್ಲಿಷ್ ಪದವಿ ಪಡೆದದ್ದು ಮೈಸೂರು ವಿಶ್ವವಿದ್ಯಾಲಯದಿಂದ. ಪ್ರಶಾಂತ ಮತ್ತು ಸಂಗೀತಕ್ಕೆ ಆದ್ಯತೆಯ ಜಾಗವೆಂದು ಮೈಸೂರಿನಲ್ಲಿ ನೆಲೆಗೊಂಡರು. ಇದಕ್ಕಾಗಿ ಬೆಂಗಳೂರಿನ ತಮ್ಮ ಮನೆ ಮಾರಿ ಬಂದರು. ಆದರೆ, ಮನೆ ಕೊಳ್ಳದೆ ಕೊನೆಯವರೆಗೂ ಮೈಸೂರಿನ ಸರಸ್ವತಿಪುರಂ, ನಂತರ ಕುವೆಂಪುನಗರದಲ್ಲಿ ಬಾಡಿಗೆ ಮನೆಯಲ್ಲಿದ್ದರು. ಅವರ ನೆನಪಿಗೆ ಸರಸ್ವತಿಪುರಂನ 14ನೇ ಮುಖ್ಯರಸ್ತೆಗೆ ಇಲ್ಲವೆ ಕುವೆಂಪುನಗರದ ಯಾವುದಾದರೊಂದು ರಸ್ತೆಗೆ ಅವರ ಹೆಸರಿಡಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಬೇಕು. ಹಾಗೆಯೇ, ರಾಜ್ಯದ ಯಾವುದಾದರೂ ವಿ.ವಿ.ಯ ಸಂಗೀತ ವಿಭಾಗಕ್ಕೆ ಅವರ ಹೆಸರಿಡಬೇಕಿದೆ.


ಗಣೇಶ ಅಮೀನಗಡ, ಮೈಸೂರು

ಚರಂಡಿ ಸ್ವಚ್ಛತೆ ಜಿಲ್ಲಾಧಿಕಾರಿ ಕೆಲಸವಲ್ಲ

ಕೆಲವು ವರ್ಷಗಳ ಹಿಂದೆ ಪ್ರಧಾನಿ ಅವರು, ತಮಿಳುನಾಡಿನ ಸಮುದ್ರದ ಕಿನಾರೆಯಲ್ಲಿ ಬಿದ್ದಿರುವ ಖಾಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಹೆಕ್ಕಿ ಚೀಲಕ್ಕೆ ಹಾಕಿಕೊಂಡು, ಸಮುದ್ರದ ದಂಡೆಯನ್ನು ಸ್ವಚ್ಛ ಮಾಡಿದ್ದ ದೃಶ್ಯ ಇನ್ನೂ ಜನರ ಸ್ಮೃತಿಪಟಲದಲ್ಲಿದೆ. ಪ್ರಸ್ತುತ ಕೊಡಗು ಜಿಲ್ಲಾಧಿಕಾರಿಯು ಮಡಿಕೇರಿಯಲ್ಲಿ ಚರಂಡಿ ಸ್ವಚ್ಛ ಮಾಡುತ್ತಿರುವ ಫೋಟೊ ಪ್ರಕಟವಾಗಿದೆ (ಪ್ರ.ವಾ., ಅ. 16). ಇದನ್ನು ನೋಡಿದ ಓದುಗರಿಗೆ ಅವರ ಬಗ್ಗೆ ಅಭಿಮಾನ ಮೂಡುವುದರಲ್ಲಿ ಅನುಮಾನವಿಲ್ಲ. ಆದರೆ, ಯಾವುದೋ ಒಂದು ದಿನ ಸ್ವಚ್ಛತಾ ಕಾರ್ಯ ಕೈಗೊಂಡರೆ ಮಡಿಕೇರಿಯ ಚರಂಡಿಗಳು ಸ್ವಚ್ಛವಾಗುವುದಿಲ್ಲ. ಇದಕ್ಕಾಗಿಯೇ ಇರುವ ಸಿಬ್ಬಂದಿಯಿಂದ ಕೆಲಸ ಮಾಡಿಸಬೇಕು. ಅದೇ ಸರಿಯಾದ ಕ್ರಮ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಬಂಡೆ ಭವಿಷ್ಯ!



• ಬಿ.ಎನ್. ಮಲ್ಲೇಶ್

ಬಂಡೆ ಸಾಹೇಬ್ರ ಮನೆ ಮುಂದೆ ಬುಡುಬುಡಿಕೆಯವ ಪ್ರತ್ಯಕ್ಷನಾದ. ‘ಟರ್ರ್ ಟಕಟಕ... ಲಕ್ಷ್ಮೀ ಇಚಾರ, ಧನಲಕ್ಷ್ಮೀ ಇಚಾರ... ಕುರ್ಚಿ ಇಚಾರ, ಸಿ.ಎಂ ಕುರ್ಚಿ ಇಚಾರ, ಟರ್ರ್ ಟಕಟಕ...’

ಯಾರೊಂದಿಗೋ ಮಾತಾಡುತ್ತಿದ್ದ ಬಂಡೆ ಸಾಹೇಬರು, ‘ಲೇಯ್ ಯಾರೋ ಅದು ಸಿ.ಎಂ ಕುರ್ಚಿ ವಿಷ್ಯ ಮಾತಾಡೋನು? ನೋಟಿಸ್ ಕೊಡ್ತೀನಿ ಅಷ್ಟೆ’ ಎಂದರು.

‘ಸ್ವಾಮಿ ನಾನು ಬುಡುಬುಡಿಕೆಯೋನು, ದೇವಿ ನನ್ನ ನಾಲಿಗೆ ಮೇಲೆ ನುಡೀತಾ ಐತೆ, ಸಿಟ್ಟಾಗಬ್ಯಾಡ, ಯಾವುದೋ ನೋವು ನಿನ್ನ ಕಾಡ್ತಾ ಐತೆ, ಗಂಟಲ ಮಾತು ಗಂಟಲಲ್ಲೇ ಒದ್ದಾಡ್ತಾ ಐತೆ. ನಿಜಾಂದ್ರೆ ನಿಜಾನ್ನು, ಸುಳ್ಳಂದ್ರೆ ಸುಳ್ಳನ್ನು...’

‘ನಿಜ, ಏನೀಗ?’

‘ಸ್ವಾಮಿ ನೀನು ಒಂದು ರಾಜ್ಯ ಕಟ್ಟಬೇಕು, ಒಂದು ದೇಶ ಕಟ್ಟಬೇಕು ಅಂತ ಆಸೆ ಇಟ್ಕಂಡಿದ್ದೆ... ಸ್ವಾಮಿ ನಿಮ್ಮವರೇ ನಿನ್ನ ದಾರಿಗೆ ಮುಳ್ಳಾಗವರೆ, ಹೌದೋ ಇಲ್ಲವೋ...’

‘ಗೊತ್ತಿಲ್ಲ...’

‘ಸ್ವಾಮಿ ಹಿಂದೆ ನಿನ್ನ ಹಣೆಬರ, ಹಣೆಬರ ಅಂದ್ರೆ ಟೇಮು ಚೆನ್ನಾಗಿತ್ತು. ಗೆದ್ದು ಗದ್ದುಗೆ ಹಿಡಿಯೋ ಕಾಲ ಬಂದಿತ್ತು. ಈಗ ಒದ್ದು ಕಿತ್ಕಳೋ ಹಾಗೆ ಆಗೋಯ್ತು... ನಿಜವೋ?’

‘ಸರಿ, ಮುಂದಕ್ಕೇಳು...’

‘ಸ್ವಾಮಿ, ನೀನುಂಟು ನಿನ್ನ ದೇವರುಂಟು... ಪೂಜೆ, ಹೋಮ ಏನೆಲ್ಲ ಒಂಟಿ ಕಾಲಲ್ಲಿ ನಿಂತು ಪ್ರಾರ್ಥನೆ ಮಾಡಿದ್ದೇ ಆಯ್ತು. ದೇವಿ ಹೂ ಕೊಟ್ರೂ ಪೂಜಾರಿ ಕೊಡ್ತಾನೋ ಇಲ್ವೋ ಅನ್ನೋ ಅನುಮಾನ... ನಿಜವೋ?’

‘ಹೂ ಕಣಯ್ಯ, ಮುಂದೆ?’

‘ಸ್ವಾಮಿ ಮಂಗಳವಾರ ಮುಖ ಚೌರ ಮಾಡಬೇಡ, ಬುಧವಾರ ಹೊಸ ಬಟ್ಟೆ ಹಾಕಬೇಡ, ಮಾಸ ಹನ್ನೊಂದು ಕಳೆದು ಹನ್ನೆರಡರ ಒಳಗೆ ನೀನು ಸಿಂಹಾಸನ ಏರೋ ಅಂಥ ಒಂದು ಗಟ್ಟಿ ತಾಯತ ಮಾಡಿಕೊಡ್ತೀನಿ, ನಂಗೆ ನಿಂದೊಂದು ಹಳೇ ಶರ್ಟ್ ಕೊಡ್ತೀಯ?’

‘ಹಳೆ ಶರ್ಟ್ ಯಾಕೆ, ಬುಡುಬುಡಿಕೆ ನಿಗಮ ಅಂತ ಮಾಡಿ ನಿನ್ನೇ ಅಧ್ಯಕ್ಷ ಮಾಡ್ತೀನಿ, ಅದೇನು ಮಾಡಿಕೊಡು...’

ಬುಡುಬುಡಿಕೆಯವನಿಗೆ ಮಾತೇ ಹೊರಡಲಿಲ್ಲ!

ಸಂಗತ

ಮುಟ್ಟು: ಆರೋಗ್ಯಕರ ವಾತಾವರಣ ಅಗತ್ಯ

ಉದ್ಯೋಗಸ್ಥ ಮಹಿಳೆಯರಿಗೆ ಮುಟ್ಟಿನ ರಜೆ ನೀಡಲು ಮುಂದಾಗಿರುವ ರಾಜ್ಯ ಸರ್ಕಾರ, ಸಾರ್ವಜನಿಕ ಸ್ಥಳಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಬೇಕಾಗಿದೆ.

• ಸುಷ್ಮಾ ಸವಸುದ್ದಿ

ಗೆಳತಿಯೊಬ್ಬಳು ತಾನು ತುಂಬ ಇಷ್ಟಪಟ್ಟಿದ್ದ ಕೆಲಸಕ್ಕೆ ರಾಜೀನಾಮೆ ಕೊಟ್ಟು, ವರ್ಕ್ ಫ್ರಂ ಹೋಂ ಕೆಲಸಕ್ಕೆ ಅವಕಾಶವಿರುವ ನೌಕರಿಗಾಗಿ ಹುಡುಕಾಟ ನಡೆಸಿದ್ದಳು. ಸದಾ ಓಡಾಟದ ಆ ಕೆಲಸ ಅವಳಿಗೆ ಪ್ರಿಯವಾದುದಾಗಿತ್ತು. ಹಾಗಾಗಿ, ಅದರಿಂದ ಹೊರಬರಲು ಕಾರಣ ಏನಿರಬಹುದು ಎನ್ನುವ ಪ್ರಶ್ನೆಗೆ ಸಿಕ್ಕ ಉತ್ತರ ಬೇಸರ ತರುವಂತಿತ್ತು.

‘ಸುತ್ತುವುದು ಇಷ್ಟದ ಕೆಲಸವೇ. ಆದರೆ, ಹೆಣ್ಣುಮಕ್ಕಳಿಗೆ ಸುತ್ತಲು ಸೂಕ್ತವಾದ ವಾತಾವರಣ ನಮ್ಮಲ್ಲಿಲ್ಲ. ಪಿರಿಯಡ್ಸ್ ಸಮಯದಲ್ಲಂತೂ ನರಕಯಾತನೆ. ಕೆಲಸದ ನೆಪದಲ್ಲಿ ರಾಜ್ಯದ ಮೂಲೆ ಮೂಲೆ ಸುತ್ತಿದ್ದೇನೆ. ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛ ಶೌಚಾಲಯ ವ್ಯವಸ್ಥೆ ಕಂಡಿದ್ದು ತೀರಾ ಕಡಿಮೆ. ಕೆಲವು ಕಡೆ ನ್ಯಾಪ್‌ಕಿನ್ ಬದಲಿಸಲೂ ಸೂಕ್ತ ಜಾಗ ಇಲ್ಲದೇ ಒದ್ದಾಡಿದ್ದಿದೆ’ ಎಂದು ಸಂಕಟ ತೋಡಿಕೊಂಡಳು. ಅವಳ ನೋವು ಹಾಗೂ ಬೇಸರ ವೈಯಕ್ತಿಕ ಮಾತ್ರವಾಗಿರದೆ, ಎಲ್ಲ ಹೆಣ್ಣುಮಕ್ಕಳೂ ಎದುರಿಸುತ್ತಿರುವ ಸಂಕಟದ ಧ್ವನಿಯಂತಿತ್ತು.

ಪ್ರಸ್ತುತ ರಾಜ್ಯ ಸಚಿವ ಸಂಪುಟ ಉದ್ಯೋಗಸ್ಥ ಮಹಿಳೆಯರಿಗೆ ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ಮುಟ್ಟಿನ ರಜೆ ನೀಡುವ ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ಇದು ಸ್ವಾಗತಾರ್ಹ. ಆದರೆ, ಅದಕ್ಕೂ ಮೊದಲು ಮೂಲ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಬೇಕಿದೆ. ಜೊತೆಗೆ, ಹೆಣ್ಣುಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು ಸಂಸ್ಥೆಗೆ ಹೊರೆ’ ಎಂದು ಮೂಗು ಮುರಿಯುವ ಉದ್ಯೋಗದಾತರಿಗೆ ತಿಳಿವಳಿಕೆ ಹೇಳುವ ಕೆಲಸವನ್ನು ಮಾಡಬೇಕಿದೆ.



ಗೆಳತಿಯೊಂದಿಗಿನ ಮಾತುಕತೆ ಮುಟ್ಟಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಮನಸ್ಸಿನಲ್ಲಿ ಮೂಡಿಸಿತು. ಉದ್ಯೋಗಸ್ಥ ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಎದುರಿಸುವ ಸಮಸ್ಯೆಗಳನ್ನು ನೆನಪಿಸಿತು. ಮುಟ್ಟಿನ ದಿನಗಳಲ್ಲಿ ಆತಂಕ, ಕಿರಿಕಿರಿ, ಮುಜುಗರಕ್ಕೆ ಒಳಗಾಗದೇ ಕೆಲಸ ಮಾಡುವ ಸೂಕ್ತ ವಾತಾವರಣವಾದರೂ ನಮ್ಮಲ್ಲಿದೆಯೇ? ಆ ನಿಟ್ಟಿನಲ್ಲಿ ಸರ್ಕಾರ ಏನಾದರೂ ಯೋಚಿಸಿದೆಯೇ? ಅಧ್ಯಯನಗಳನ್ನು ಕೈಗೊಂಡಿದೆಯೇ? ಹತ್ತಾರು ಪ್ರಶ್ನೆಗಳು ಕಾಡತೊಡಗಿದವು.

ಈಗಲೂ ನಮ್ಮ ದೇಶದ ಹಳ್ಳಿಗಳಲ್ಲಿ ಶೌಚಾಲಯವನ್ನು ಮೂಲ ಸೌಕರ್ಯ ಎಂದು ಪರಿಗಣಿಸಿಯೇ ಇಲ್ಲ. ಸಾರ್ವಜನಿಕ ಶೌಚಾಲಯಗಳಂತೂ ಇಲ್ಲವೇ ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಶೌಚಕ್ಕೆ ಬಯಲನ್ನೇ ಅವಲಂಬಿಸಿದ್ದಾರೆ. ಜಾಗದ ಕೊರತೆ, ನೀರಿನ ಕೊರತೆಯ ಜೊತೆಗೆ ಅರಿವಿನ ಕೊರತೆಯೂ ಶೌಚಾಲಯ ಇಲ್ಲದಿರುವುದಕ್ಕೆ, ಇದ್ದರೂ ಬಳಸದೆ ಇರುವುದಕ್ಕೆ ಕಾರಣವಾಗಿದೆ. ಶೌಚಕ್ಕೆ ಬಯಲನ್ನೇ ಅವಲಂಬಿಸಿದ ಮಹಿಳೆಯರು ಬೆಳಗಾಗುವ ಮೊದಲು ಮಸುಕಿನಲ್ಲಿ ಅಥವಾ ರಾತ್ರಿಯಲ್ಲೇ ಬಹಿರ್ದೆಸೆಗೆ ಹೋಗಬೇಕಾದ ಅನಿವಾರ್ಯವಿದೆ.

ಎಷ್ಟೋ ಸರ್ಕಾರಿ ಶಾಲೆ–ಕಾಲೇಜುಗಳಲ್ಲೂ ಸಮರ್ಪಕ ಶೌಚಾಲಯದ ವ್ಯವಸ್ಥೆ ಇಲ್ಲ. ಸೂಕ್ತ ನಿರ್ವಹಣೆ ಇಲ್ಲ. ಈ ಮೊದಲು ಪ್ರಾಥಮಿಕ, ಪ್ರೌಢ, ಪದವಿಪೂರ್ವ ವಿದ್ಯಾರ್ಥಿನಿಯರಿಗೆ ಸರ್ಕಾರ ಸ್ಯಾನಿಟರಿ ನ್ಯಾಪ್‌ಕಿನ್ ವಿತರಿಸುತ್ತಿತ್ತು. ಆದರೆ, ಕೋವಿಡ್ ನಂತರ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆ ನಿಲ್ಲಿಸಲಾಗಿತ್ತು. ಈಗ ಕೆಲವು ಶಾಲೆಗಳಲ್ಲಿ ಮತ್ತೆ ನ್ಯಾಪ್‌ಕಿನ್ ವಿತರಣೆ ಆರಂಭಿಸಿದ್ದರೂ, ಅವುಗಳ ಗುಣಮಟ್ಟದ ಕುರಿತು ಕಾಳಜಿ ವಹಿಸಿಲ್ಲ. ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್ ಕೊಡುವ ಯೋಜನೆಯನ್ನೂ ರಾಜ್ಯ ಸರ್ಕಾರ ಹಾಕಿಕೊಂಡಿತ್ತು. ಅದು ರಾಜ್ಯದ ಎಲ್ಲ ವಿದ್ಯಾರ್ಥಿನಿಯರನ್ನು ತಲಪುವಲ್ಲಿ ಸಫಲವಾಗಿಲ್ಲ.

ಈಗಲೂ ಕೆಲವೆಡೆ ಮಹಿಳೆಯರ ಸಾಮರ್ಥ್ಯವನ್ನು ಪ್ರಶ್ನಾರ್ಥಕವಾಗಿ ನೋಡುವವರು ಇದ್ದಾರೆ. ಎರಡು ವರ್ಷಗಳ ಕೆಳಗೆ ಪ್ರತಿಷ್ಠಿತ ಸಂಸ್ಥೆಯೊಂದು ಕೆಲಸಕ್ಕೆ ಅರ್ಜಿ ಆಹ್ವಾನಿಸಿತ್ತು. ಹೆಣ್ಣುಮಕ್ಕಳು ಅರ್ಜಿ ಸಲ್ಲಿಸಲು ಹೋದಾಗ, ನಾವು ಮಹಿಳೆಯರನ್ನು ನೇಮಕ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿತು. ಕಾರಣ ಕೇಳಿದರೆ– ಕೆಲಸ ಮುಗಿಯಲು ರಾತ್ರಿ ತಡವಾಗುತ್ತದೆ, ಮಹಿಳೆಯರನ್ನು ಮನೆಗೆ ಬಿಡಲು ಪ್ರತ್ಯೇಕ ವಾಹನ ವ್ಯವಸ್ಥೆ ಮಾಡಬೇಕಾಗುತ್ತದೆ. ನಾಳೆ ಅವರು ಮದುವೆ ಆದರೆ ನೌಕರಿ ಬಿಟ್ಟು ಹೋಗುವ ಸಾಧ್ಯತೆ ಇರುತ್ತದೆ, ಹೆರಿಗೆ ರಜೆ ಬೇರೆ ಕೊಡಬೇಕು... ಇವೆಲ್ಲ ಸಮಸ್ಯೆ ಬೇಡವೆಂದು ಮಹಿಳೆಯರನ್ನು ನೇಮಕ ಮಾಡಿಕೊಳ್ಳುವ ಗೋಜಿಗೆ ಹೋಗುತ್ತಿಲ್ಲ ಎಂದು ಮುಲಾಜಿಲ್ಲದೇ ಹೇಳಿದ್ದರು. ಮಹಿಳೆಯರ ಸಬಲೀಕರಣದ ಬಗ್ಗೆ ಯೋಚಿಸಬೇಕಾದವರೇ ಹೀಗೆ ಲಘುವಾಗಿ ಯೋಚಿಸಿದರೆ ಲಿಂಗಸಮಾನತೆ ಸಾಧ್ಯವಾಗುವುದಾದರೂ ಹೇಗೆ? ಇಂಥ ಮನಃಸ್ಥಿತಿ ಹೊಂದಿರುವವರು ಸಂಬಳ ಸಹಿತ ಮುಟ್ಟಿನ ರಜೆ ನೀಡುವುದನ್ನು ಹೇಗೆ ಒಪ್ಪಿಕೊಳ್ಳುತ್ತಾರೆ?

ಉದ್ಯೋಗಸ್ಥ ಮಹಿಳೆಯರಿಗೆ ತಿಂಗಳಿಗೊಂದು ಮುಟ್ಟಿನ ರಜೆ ನೀಡುವ ಮೂಲಕ ಸರ್ಕಾರ ದೊಡ್ಡದೊಂದು ಸವಾಲಿಗೆ ತನ್ನನ್ನು ಒಡ್ಡಿಕೊಂಡಿದೆ. ಖಾಸಗಿ ಸಂಸ್ಥೆಗಳಲ್ಲಿರಲಿ, ಸರ್ಕಾರಿ ಕಚೇರಿಗಳಲ್ಲೇ ಮಹಿಳೆಯರು ಮುಟ್ಟಿನ ರಜೆಯನ್ನು ಅಳುಕಿಲ್ಲದೆ ತೆಗೆದುಕೊಳ್ಳುವುದು ಸುಲಭವೇನಲ್ಲ. ಇನ್ನು ಖಾಸಗಿ ಸಂಸ್ಥೆಗಳಲ್ಲಿ, ಮುಟ್ಟಿನ ರಜೆ ಎನ್ನುವುದು ಮಹಿಳೆಯರ ಉದ್ಯೋಗದ ಅವಕಾಶಗಳಿಗೆ ಕಂಟಕ ಆದರೂ ಆಶ್ಚರ್ಯವಿಲ್ಲ. ಈ ಸವಾಲನ್ನು ಸರ್ಕಾರ ಹೇಗೆ ನಿಭಾಯಿಸುತ್ತದೆ ಎನ್ನುವುದರ ಮೇಲೆ ಮುಟ್ಟಿನ ರಜೆಯ ಯಶಸ್ಸು ನಿರ್ಧಾರವಾಗುತ್ತದೆ.

ಕರುನಾಡು ಗಜನಾಡು

• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ದೇಶದಲ್ಲಿ ಕಾಡಾನೆಗಳ ಸಂಖ್ಯೆ ಕುಸಿತವಾಗಿರುವುದನ್ನು ಕೆಲವು ದಿನಗಳ ಹಿಂದೆಯಷ್ಟೇ ಬಿಡುಗಡೆಯಾಗಿರುವ 'ಭಾರತದಲ್ಲಿ ಆನೆಗಳ ಸ್ಥಿತಿಗತಿ ವರದಿ'ಯ ಅಂಕಿ ಅಂಶಗಳು ತೋರಿಸಿವೆ. 2017ರ ವರದಿಗೆ ಹೋಲಿಸಿದರೆ ಆನೆಗಳ ಸಂಖ್ಯೆ ಶೇ 25ರಷ್ಟು ಕಡಿಮೆಯಾಗಿದೆ. ಆದರೆ ಇದೇ ಮೊದಲ ಬಾರಿಗೆ ದೇಶದಲ್ಲಿ ಡಿಎನ್‌ಎ ಆಧಾರಿತವಾಗಿ ಆನೆಗಳ ಗಣತಿ ನಡೆದಿದೆ. ಹಿಂದಿನ ಗಣತಿಗಳಿಗೆ ಹೋಲಿಸಿದರೆ ಇದು ಹೆಚ್ಚು ನಿಖರ ಎಂದು ಹೇಳಲಾಗಿದೆ. ಆನೆಗಳ ಸಂಖ್ಯೆಯಲ್ಲಿ ಈ ಬಾರಿಯೂ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಈ ಸಲದ ಗಣತಿಯು ಸಂಪೂರ್ಣವಾಗಿ ಭಿನ್ನ ರೀತಿಯಲ್ಲಿ ನಡೆದಿರುವುದರಿಂದ ಹಳೆಯ ಸಂಖ್ಯೆಗಳೊಂದಿಗೆ ಹೋಲಿಸುವುದು ಸರಿಯಲ್ಲ ಎಂದು ವರದಿ ಹೇಳಿದೆ. ದೇಶದಲ್ಲಿ ಆನೆಗಳ ಸಂರಕ್ಷಣೆಗೆ ಇರುವ ಸವಾಲುಗಳನ್ನೂ ವಿವರಿಸಿರುವ ವರದಿ, ಅಭಿವೃದ್ಧಿ ಯೋಜನೆಗಳು, ಅರಣ್ಯ ನಾಶ, ಮಾನವನ ಹಸ್ತಕ್ಷೇಪ ಕಾಡಾನೆಗಳಿಗೆ ಕಂಟಕವಾಗಿವೆ ಎಂದು ಎಚ್ಚರಿಸಿದೆ

ಭಾರತದಲ್ಲಿ 22,446 ಕಾಡಾನೆಗಳಿವೆ ಎಂದು ಸಿಂಕ್ರೋನಸ್ ಆಲ್ ಇಂಡಿಯಾ ಎಲಿಫೆಂಟ್ ಎಸ್ಟಿಮೇಷನ್ ಪ್ರೋಗ್ರಾಂ (ಎಸ್‌ಎಐಇಇ 2021-25) ಹೆಸರಿನಲ್ಲಿ ನಡೆದ ಗಣತಿಯ ಆಧಾರದಲ್ಲಿ ಸಿದ್ಧಪಡಿಸಲಾಗಿರುವ 'ಭಾರತದಲ್ಲಿ ಆನೆಗಳ ಸ್ಥಿತಿಗತಿ ವರದಿ' ಹೇಳಿದೆ. ಪರಿಸರ ಸಚಿವಾಲಯ, ಪ್ರಾಜೆಕ್ಟ್ ಎಲಿಫೆಂಟ್ ಮತ್ತು ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಜಂಟಿಯಾಗಿ ಈ ಗಣತಿ ನಡೆಸಿವೆ.

ರಾಜ್ಯಗಳ ಪೈಕಿ ಆನೆಗಳ ಸಂಖ್ಯೆಯಲ್ಲಿ ಕರ್ನಾಟಕವು (6,013) ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಅಸ್ಸಾಂ (4,159), ತಮಿಳುನಾಡು (3,136), ಕೇರಳ (2,785) ಮತ್ತು ಉತ್ತರಾಖಂಡ (1,792) ಇವೆ. ದೇಶದ ಆನೆಗಳ ಪೈಕಿ ಶೇ 59.29ರಷ್ಟು ಕರ್ನಾಟಕ, ಅಸ್ಸಾಂ, ತಮಿಳುನಾಡಿನಲ್ಲಿಯೇ ಇವೆ ಎಂದು ವರದಿ ಹೇಳಿದೆ. ಪ್ರದೇಶವಾರು ಆನೆಗಳ ಸಂಖ್ಯೆಯಲ್ಲಿ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯದಲ್ಲಿ ಹರಡಿರುವ ಪಶ್ಚಿಮ ಘಟ್ಟಗಳು ಮುಂಚೂಣಿ ಸ್ಥಾನ ಪಡೆದಿವೆ. ಜತೆಗೆ, ಈಶಾನ್ಯ ರಾಜ್ಯಗಳ ವ್ಯಾಪ್ತಿಯ ಅಸ್ಸಾಂ ಮತ್ತು ಬ್ರಹ್ಮಪುತ್ರ ಜಲಾನಯನ ಪ್ರದೇಶ ಎರಡನೇ ಸ್ಥಾನದಲ್ಲಿದೆ.

ಆನೆಗಳ ಸಮೀಕ್ಷೆ ಆರಂಭವಾಗಿದ್ದು 2021ರಲ್ಲಿ. ನಾಲ್ಕು ವರ್ಷಗಳ ನಂತರ 2025ರ ಅಕ್ಟೋಬರ್ 14ರಂದು ವರದಿ ಬಿಡುಗಡೆಯಾಗಿದೆ. ವಂಶವಾಹಿ ವಿಶ್ಲೇಷಣೆ ಮತ್ತು ದತ್ತಾಂಶ ದೃಢೀಕರಣವು ಸಂಕೀರ್ಣ ಪ್ರಕ್ರಿಯೆಯಾಗಿದ್ದರಿಂದ ಸಮೀಕ್ಷೆಗೆ ಹೆಚ್ಚು ಸಮಯ ವ್ಯಯವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತವು ಆನೆಗಳಿಗೆ ಪ್ರಸಿದ್ಧವಾಗಿದ್ದು, ದೇಶದಲ್ಲಿ ಆನೆಗಳ ಸಂತತಿಗೆ ಹಲವು ರೀತಿಯಲ್ಲಿ ಕಂಟಕ ಎದುರಾಗಿದೆ. ಚಾರಿತ್ರಿಕವಾಗಿ ದೇಶದಲ್ಲಿ ಆನೆಗಳ ಸಂಖ್ಯೆ ವಿಪುಲವಾಗಿತ್ತು. ಹಿಂದೆ ಆನೆಗಳು ಇದ್ದ ಒಟ್ಟು ಪ್ರದೇಶದ ಪೈಕಿ ಶೇ 3.5ರಷ್ಟು ಪ್ರದೇಶದಲ್ಲಿ ಮಾತ್ರವೇ ಪ್ರಸ್ತುತ ಅವು ಉಳಿದಿವೆ. ಪ್ರಪಂಚದ ಆನೆಗಳ ಸಂಖ್ಯೆಯಲ್ಲಿ ಭಾರತವು ಶೇ 60ರಷ್ಟು ಆನೆಗಳಿಗೆ ನೆಲೆಯಾಗಿದೆ. ಆದರೂ ಹಲವು ಕಾರಣಗಳಿಂದ ಅವುಗಳ ವಾಸಸ್ಥಳಗಳ ವಿಸ್ತೀರ್ಣ ಕಡಿಮೆಯಾಗುತ್ತಲೇ ಸಾಗುತ್ತಿದೆ ಎಂದು ವರದಿ ಹೇಳಿದೆ.



ಚಿತ್ರ: ಗುರಿಂದರ್ಜಿತ್ ಸಿಂಗ್, ಭಾರತದಲ್ಲಿ ಆನೆಗಳ ಸ್ಥಿತಿಗತಿ ವರದಿ

ಡಿಎನ್‌ಎ ಆಧಾರಿತ ಸಮೀಕ್ಷೆ

2017ರವರೆಗೆ ನೇರ ಎಣಿಕೆ, ಮಾದರಿ ಬ್ಲಾಕ್ ಎಣಿಕೆ, ಲದ್ದಿ ಎಣಿಕೆ (Total Count Dung Count & Sample Block Count) ವಿಧಾನಗಳ ಮೂಲಕ ಆನೆ ಗಣತಿ ನಡೆಸಲಾಗುತ್ತಿತ್ತು. ಈ ಬಾರಿ ಆ ಮಾರ್ಗವನ್ನು ಕೈಬಿಡಲಾಗಿದೆ. ಮನುಷ್ಯರನ್ನು ಅವರ ವಂಶವಾಹಿ ಮೂಲಕ ಪತ್ತೆ ಹಚ್ಚುವ ವಿಧಾನವನ್ನೇ ಇಲ್ಲೂ ಅನುಸರಿಸಲಾಗಿದೆ. ಭೂಸಮೀಕ್ಷೆ, ಉಪಗ್ರಹ ಆಧಾರಿತ ಮ್ಯಾಪಿಂಗ್, ವಂಶವಾಹಿ ವಿಶ್ಲೇಷಣೆ– ಹೀಗೆ ಮೂರು ಹಂತದಲ್ಲಿ ಗಣತಿ ನಡೆಸಲಾಗಿದೆ. ಆನೆ ಲದ್ದಿ ಮಾದರಿಗಳನ್ನು ಸಂಗ್ರಹಿಸಿ ಡಿಎನ್‌ಎ ಪರೀಕ್ಷೆಗೆ ಒಳಪಡಿಸಲಾಗಿದೆ. ಇದು ಭಿನ್ನ ಪ್ರಯತ್ನವಾಗಿದ್ದು, ಮುಂದಿನ ದಿನಗಳಲ್ಲಿ ಈ ಮಾದರಿಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲಾಗುವುದು. ಆನೆಗಳ ಮೇಲೆ ನಿಗಾ ಮತ್ತು ಸಂರಕ್ಷಣೆಯಲ್ಲೂ ಈ ಮಾರ್ಗವು ನೆರವಾಗಲಿದೆ ಎಂದು ವರದಿ ಉಲ್ಲೇಖಿಸಿದೆ.

ಕರ್ನಾಟಕದಲ್ಲಿ ಅಲ್ಪ ಇಳಿಕೆ

6,049 — 2017

6,013 — 2021-25

ಆನೆ ಗಣತಿ ಒಂದು ನೋಟ

4 ಲಕ್ಷ ಚದರ ಕಿ.ಮೀ	ಗಣತಿ ನಡೆದ ಅರಣ್ಯ ಪ್ರದೇಶದ ವ್ಯಾಪ್ತಿ
20	ಗಣತಿ ನಡೆದ ರಾಜ್ಯಗಳು
21,056	ಸಂಗ್ರಹಿಸಿದ ಆನೆ ಲದ್ದಿ ಮಾದರಿಗಳು
3,19,460	ಗುರುತಿಸಲಾದ ಆನೆ ಲದ್ದಿ ಸ್ಥಳಗಳು
6.7 ಲಕ್ಷ ಕಿ.ಮೀ	ಗಣತಿಗಾಗಿ ಸಿಬ್ಬಂದಿ ನಡಿಗೆಯಲ್ಲಿ ಸಂಚರಿಸಿದ ಒಟ್ಟು ದೂರ

ದೇಶದಲ್ಲಿ ಆನೆಗಳ ಸಂಖ್ಯೆ ಇಳಿಕೆ

ವರ್ಷ	ಸಂಖ್ಯೆ
2002	26,373
2007	27,694
2012	30,051
2017	29,964
2021-25	22,446

ಪಶ್ಚಿಮ ಘಟ್ಟದಲ್ಲೂ ಕುಸಿತ

ವರ್ಷ	ಸಂಖ್ಯೆ
2002	12,814
2007	14,005
2012	16,310
2017	14,587
2021-25	11,934

ಯಾವ ರಾಜ್ಯದಲ್ಲಿ ಎಷ್ಟು ಆನೆಗಳು?

ರಾಜ್ಯ	ಆನೆಗಳು
ಕರ್ನಾಟಕ	6,013
ಅಸ್ಸಾಂ	4,159
ತಮಿಳುನಾಡು	3,136
ಕೇರಳ	2,785
ಉತ್ತರಾಖಂಡ	1,792
ಒಡಿಶಾ	912
ಪಶ್ಚಿಮ ಬಂಗಾಳ	707
ಮೇಘಾಲಯ	677
ಅರುಣಾಚಲ ಪ್ರದೇಶ	617
ಛತ್ತೀಸಗಢ	451
ಉತ್ತರ ಪ್ರದೇಶ	257
ನಾಗಾಲ್ಯಾಂಡ್	252
ಜಾರ್ಖಂಡ್	217
ತ್ರಿಪುರಾ	153
ಆಂಧ್ರಪ್ರದೇಶ	120
ಮಧ್ಯಪ್ರದೇಶ	97
ಮಹಾರಾಷ್ಟ್ರ	63
ಮಿಜೋರಾಂ	16
ಬಿಹಾರ	13
ಮಣಿಪುರ	9

ಭಾರತದಲ್ಲಿ 22,446 (ಕನಿಷ್ಠ– 18,255, ಗರಿಷ್ಠ–26,645)

ಪ್ರದೇಶವಾರು ಆನೆಗಳ ಸಂಖ್ಯೆ

ಪ್ರದೇಶ	ಸಂಖ್ಯೆ
ಶಿವಾಲಿಕ್ ಶ್ರೇಣಿಗಳು ಮತ್ತು ಗಂಗಾ ಜಲಾನಯನ ಪ್ರದೇಶ	2,062
ಮಧ್ಯ ಭಾರತ ಮತ್ತು ಪೂರ್ವ ಘಟ್ಟಗಳು	1,891
ಈಶಾನ್ಯ ಶ್ರೇಣಿಗಳು ಮತ್ತು ಬ್ರಹ್ಮಪುತ್ರ ಜಲಾನಯನ ಪ್ರದೇಶ	6,559
ಪಶ್ಚಿಮ ಘಟ್ಟಗಳು	11,934



ಆಧಾರ: ಭಾರತದಲ್ಲಿ ಆನೆಗಳ ಸ್ಥಿತಿಗತಿ ವರದಿ, ಪಿಟಿಐ, ಎಎಫ್‌ಪಿ,


ಮೈಸೂರು ಭಾಗದಲ್ಲಿ ಹೆಚ್ಚು

ಕರ್ನಾಟಕದಲ್ಲಿ ಬಂಡೀಪುರ, ನಾಗರಹೊಳೆ, ಭದ್ರಾ, ಕಾಳಿ, ಬಿಳಿಗಿರಿರಂಗನಾಥಸ್ವಾಮಿ ದೇವಾಲಯ ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯಲ್ಲಿ ಗಣತಿ ನಡೆಸಲಾಗಿದೆ. ಒಟ್ಟು ಸಿಬ್ಬಂದಿ 45,323 ಕಿ.ಮೀ ದೂರ ಸಾಗಿ ವಿವರಗಳನ್ನು ದಾಖಲಿಸಿದ್ದಾರೆ.

ರಾಜ್ಯದಲ್ಲಿ ಕನಿಷ್ಠ 4,792, ಗರಿಷ್ಠ 7,235 ಆನೆಗಳಿವೆ ಎಂದು ವರದಿ ಹೇಳಿದ್ದು, ಸರಾಸರಿ ಲೆಕ್ಕಾಚಾರದಲ್ಲಿ ರಾಜ್ಯದಲ್ಲಿರುವ ಆನೆಗಳು 6,013. 2017ರ ಗಣತಿಯು 6,049 ಆನೆಗಳು ಇರುವುದಾಗಿ ಹೇಳಿತ್ತು. ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿರುವ ರಕ್ಷಿತಾರಣ್ಯಗಳ ಪೈಕಿ ಮೈಸೂರು ಭಾಗದಲ್ಲೇ ಹೆಚ್ಚು ಆನೆಗಳಿವೆ ಎಂದು ವರದಿ ಹೇಳಿದೆ.

ಕಾಳಿ, ದಾಂಡೇಲಿ, ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಗೆ ಬರುವ ಚಿಕ್ಕಮಗಳೂರು, ಕೊಪ್ಪ, ಭದ್ರಾವತಿ, ಶಿವಮೊಗ್ಗ ವಿಭಾಗಗಳಲ್ಲಿ ಆನೆಗಳ ಸಾಂದ್ರತೆ ಕಡಿಮೆ ಇದೆ. ಮೈಸೂರು ಭಾಗದ ಬಂಡೀಪುರ, ನಾಗರಹೊಳೆ, ಬಿಆರ್‌ಟಿ ಹಾಗೂ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳಲ್ಲಿ ಹೆಚ್ಚು ಆನೆಗಳಿವೆ. ಹಲವು ವರ್ಷಗಳಿಂದ ಇಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಸಂರಕ್ಷಣಾ ಕ್ರಮಗಳು, ಹಸಿರು ಹೆಚ್ಚಾಗಲು ಕಾರಣವಾಗಿವೆ. ಬೇರೆ ಬೇರೆ ಅರಣ್ಯಗಳ ನಡುವೆ ಸಂಪರ್ಕ ಇರುವುದರಿಂದ ಈ ಭಾಗದಲ್ಲಿ ಆನೆಗಳ ಸಂಖ್ಯೆ ಉತ್ತಮವಾಗಿದೆ ಎಂದು ವರದಿ ವಿವರಿಸಿದೆ.

ರಾಜ್ಯವು ಆನೆಗಳ ಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿದೆ ಮತ್ತು ಮಾನವ–ಆನೆ ಸಂಘರ್ಷವೂ ಇಲ್ಲಿ ಜಾಸ್ತಿ ಇದೆ. ಅರಣ್ಯದ ಅಂಚಿನಲ್ಲಿ ಕೃಷಿ ಚಟುವಟಿಕೆಗಳು ಹೆಚ್ಚಾಗಿರುವುದು ಇದಕ್ಕೆ ಕಾರಣ. ಅರಣ್ಯದ ಒಳಗೆ ಮತ್ತು ಹೊರಗೆ ಜನವಸತಿ ಪ್ರದೇಶಗಳು ಇರುವುದು ಮತ್ತೊಂದು ಕಾರಣ. ವನ್ಯಜೀವಿಗಳ ಆವಾಸಗಳ ಒತ್ತುವರಿಯೂ ಜಾಸ್ತಿಯಾಗುತ್ತಿದ್ದು, ಜನಸಂಖ್ಯೆಯೂ ಹೆಚ್ಚಾಗುತ್ತಿದೆ. ಮಾನವ ಹಸ್ತಕ್ಷೇಪದಿಂದ ಕಾಳಿ, ಭದ್ರಾ ಹಾಗೂ ಮೈಸೂರು ವ್ಯಾಪ್ತಿಯ ಸಂರಕ್ಷಿತ ಪ್ರದೇಶಗಳ ಅರಣ್ಯ ನಾಶವಾಗುತ್ತಿರುವುದು ಆನೆಗಳ ಸಂರಕ್ಷಣೆಗೆ ಸವಾಲಾಗಿದೆ.



ಪ್ರಜಾವಾಣಿ ಚಿತ್ರ ಎಸ್‌.ಕೆ.ದಿನೇಶ್

ಆನೆಗಳ ಸಂಖ್ಯೆ ಇಳಿಕೆಗೆ ಕಾರಣಗಳೇನು?

- ಆವಾಸದ ವ್ಯಾಪ್ತಿ ಕಿರಿದಾಗುತ್ತಿರುವುದು, ಕಾಡುಗಳು ಕಡಿಮೆಯಾಗಿರುವುದು
- ಪಶ್ಚಿಮ ಘಟ್ಟ, ಈಶಾನ್ಯ ಘಟ್ಟ ಸೇರಿದಂತೆ ಆನೆಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಅರಣ್ಯ ಭಾಗದಲ್ಲಿ ಒತ್ತುವರಿ, ಅಭಿವೃದ್ಧಿ ಕಾಮಗಾರಿಗಳು ಮತ್ತು ಭೂ ಬಳಕೆ ಬದಲಾವಣೆಯಿಂದ ಸಾಂಪ್ರದಾಯಿಕ ಕಾರಿಡಾರ್‌ಗಳು ನಾಶವಾಗಿರುವುದು
- ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಟೀ, ಕಾಫಿ ತೋಟಗಳ ವ್ಯಾಪ್ತಿ ವಿಸ್ತರಿಸುತ್ತಿರುವುದು, ಅಭಿವೃದ್ಧಿ ಯೋಜನೆಗಳ ಹೆಚ್ಚಳ
- ದೇಶದ ಮಧ್ಯಭಾಗದಲ್ಲಿ ಗಣಿಗಾರಿಕೆ ಹೆಚ್ಚಾಗಿದೆ. ಇದರಿಂದಾಗಿ ಆನೆಗಳ ಓಡಾಟಕ್ಕೆ ಅಡ್ಡಿ
- ಈಶಾನ್ಯ ಭಾಗದಲ್ಲಿ ಆನೆಗಳ ಕಾರಿಡಾರ್‌ಗಳು ನಾಶವಾಗಿವೆ. ಅರಣ್ಯ ಛಿದ್ರವಾಗಿವೆ, ಅಭಿವೃದ್ಧಿ ಕಾಮಗಾರಿಗಳು ಹೆಚ್ಚಾಗಿವೆ
- ಅರಣ್ಯದಲ್ಲಿ ಕಳೆ ಗಿಡಗಳು ಹೆಚ್ಚುತ್ತಿರುವುದು, ಮಾನವನ ಹಸ್ತಕ್ಷೇಪ, ಕೃಷಿ ಭೂಮಿಗೆ ಬೇಲಿ ಹಾಕುವುದು
- ಅಕೇಷಿಯಾದಂತಹ ಗಿಡಗಳನ್ನೊಳಗೊಂಡ ನೆಡುತೋಪುಗಳ ನಿರ್ಮಾಣ

ಸಂರಕ್ಷಣೆ ಹೇಗೆ?

- ಕಾಡಂಚಿನ ಸಮುದಾಯಗಳ ಸಹಕಾರ ಪಡೆಯುವುದು
- ನದಿ ತೀರದ ಅರಣ್ಯಗಳು ಮತ್ತು ಕಾರಿಡಾರ್‌ಗಳ ರಕ್ಷಣೆ
- ಬೆಳೆ, ಜೀವಹಾನಿ ಸಂದರ್ಭದಲ್ಲಿ ಕ್ಷಿಪ್ರವಾಗಿ ಪರಿಹಾರ ವಿತರಣೆ
- ಆವಾಸಗಳ ಪುನರುಜ್ಜೀವನ
- ಕಠಿಣ ಸಂರಕ್ಷಣಾ ನಿಯಮಗಳ ಜಾರಿ
- ಜಾಗೃತಿ ಕಾರ್ಯಕ್ರಮಗಳ ಆಯೋಜನೆ

'7 ನಿಗಮ–ಮಂಡಳಿ ಮುಚ್ಚಿ'

ಒಂದನೇ ಪುಟದಿಂದ...

ಆರ್‌.ವಿ.ದೇಶಪಾಂಡೆ ಮಾತನಾಡಿ, 'ಸಾರ್ವಜನಿಕ ವಲಯದ ಸಂಸ್ಥೆಗಳ ಪುನರ್ ರಚನೆಗಾಗಿ 379 ಶಿಫಾರಸುಗಳನ್ನು ಮಾಡಲಾಗಿದೆ. 80 ನಿಗಮ–ಮಂಡಳಿಗಳ ಐದು ವರ್ಷದ ಆರ್ಥಿಕ ಸ್ಥಿತಿ, ಸಿಬ್ಬಂದಿ, ಕಾರ್ಯನಿರ್ವಹಣೆ ಕುರಿತು ಪರಿಶೀಲಿಸಲಾಯಿತು. ಅಧ್ಯಕ್ಷರು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿ ವರದಿ ನೀಡಲಾಗಿದೆ. 60 ನಿಗಮ–ಮಂಡಳಿಗಳನ್ನು ಬಲಪಡಿಸಲು ಕೆಲವು ಸಲಹೆಗಳನ್ನು ನೀಡಲಾಗಿದೆ. ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ, ನಷ್ಟದಲ್ಲಿರುವ ಮತ್ತು ನಿಷ್ಕ್ರಿಯವಾಗಿರುವ ನಿಗಮ–ಮಂಡಳಿ ಬೀಗ ಹಾಕಲು ಮತ್ತು ವಿಲೀನಗೊಳಿಸಲು ಆರು ತಿಂಗಳೊಳಗೆ ಏಕೀಕೃತ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು' ಎಂದು ಹೇಳಿದರು.

ಭೂಸ್ವಾಧೀನ ಕಾಯ್ದೆಗೆ ಏಕರೂಪ: ಭೂಸ್ವಾಧೀನ ಕಾಯ್ದೆಯಲ್ಲೂ ಏಕರೂಪ ತರಲು 15 ಶಿಫಾರಸುಗಳನ್ನು ಮಾಡಲಾಗಿದೆ. ಕೆಐಎಡಿಬಿ ಕಾಯ್ದೆ 1976, ಕೆಎಚ್‌ಬಿ ಕಾಯ್ದೆ–1962, ಕೊಳೆಗೇರಿ ಪ್ರದೇಶಗಳ ಕಾಯ್ದೆ–1973, ನೀರಾವರಿ ಕಾಯ್ದೆ–1965, ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು–2013. ಈ ಕಾಯ್ದೆಗಳನ್ನು ಒಳಗೊಂಡು ಏಕರೂಪತೆ, ಪಾರದರ್ಶಕತೆ ತರುವಂತೆ ಆಯೋಗ ಸಲಹೆ ನೀಡಿದೆ.

ಭೂಸ್ವಾಧೀನ, ಪರಿಹಾರ, ಪುನರ್ವಸತಿ, ಪುನರ್‌ವ್ಯವಸ್ಥೆ ಕಾಯ್ದೆ 2013ರ ಅನುಗುಣವಾಗಿ ತಿದ್ದುಪಡಿ ಮಾಡಬೇಕು ಅಥವಾ ಅಳವಡಿಸಿಕೊಳ್ಳಬೇಕು. ಭೂಸ್ವಾಧೀನ ಕಾನೂನುಗಳನ್ನು ಸಮನ್ವಯಗೊಳಿಸಲು ಉನ್ನತ ಮಟ್ಟದ ಸಮಿತಿ ರಚಿಸಬೇಕು. ಇದರಿಂದ ಭೂ ಮಾಲೀಕರ ಹಕ್ಕುಗಳನ್ನು ರಕ್ಷಿಸುವ ಜತೆಗೆ ಕೋರ್ಟ್‌ನಲ್ಲಿ ದಾಖಲಿಸುವ ಕೇಸ್‌ಗಳು ಕಡಿಮೆ ಆಗಲಿವೆ. ಒಂದು ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಭೂಸ್ವಾಧೀನಾಧಿಕಾರಿಗಳನ್ನು ಹುದ್ದೆಯಿಂದ ವರ್ಗಾಯಿಸಬಾರದು. ಯೋಜನೆಯ ಗಾತ್ರ ಮತ್ತು ಅವಧಿಗೆ ಅನುಗುಣವಾಗಿ ಅವಶ್ಯವಿರುವ ಸಹಾಯಕ ಸಿಬ್ಬಂದಿ ಮಂಜೂರು ಮಾಡಬೇಕು ಎಂದಿದೆ.

ಕೋರ್ಟ್ ನೋಟಿಸ್‌ಗಳು, ಆದೇಶಗಳು ಸ್ವಯಂಆಗಿ ಸಂಬಂಧಿಸಿದ ಇಲಾಖೆಗಳಿಗೆ ತಲುಪುವಂತೆ ಮಾಡಲು ಇ-ಆಫೀಸ್ ಹಾಗೂ ಸಿಸಿಎಂಎಸ್ ತಂತ್ರಾಂಶಗಳನ್ನು ಸಂಯೋಜಿಸಬೇಕು. ಕಾಲಮಿತಿಯೊಳಗೆ ಪರಿಹಾರ ಪಾವತಿಸಲು, ಮೇಲ್ಮನವಿ, ಮೇಲ್ವಿಚಾರಣೆಯೊಂದಿಗೆ ಒಂದೇ ಭೂಸ್ವಾಧೀನ ಪೋರ್ಟಲ್ ರೂಪಿಸಬೇಕು ಹಾಗೂ ಒಪ್ಪಿಗೆ ಆಧಾರಿತ ಭೂ ಸ್ವಾಧೀನಕ್ಕಾಗಿ ಎಲ್ಲಾ ಸಂಸ್ಥೆಗಳಿಗೆ ಏಕರೂಪದ ನಿಯಮ ರೂಪಿಸುವಂತೆ ಹೇಳಿದೆ.

ಸಾಮಾನ್ಯ ಆಡಳಿತಾತ್ಮಕ ಮತ್ತು ಇ-ಸುಧಾರಣೆಗಳಿಗೆ ಸಂಬಂಧಿಸಿದಂತೆ 55 ಶಿಫಾರಸುಗಳನ್ನು ಮಾಡಿರುವ ಆಯೋಗ, ಲೋಕೋಪಯೋಗಿ ಇಲಾಖೆಯಲ್ಲಿ ಗುಣಮಟ್ಟ ಭರವಸೆ ವಿಭಾಗವನ್ನು ಬಲಪಡಿಸಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು ಎಂದು ಹೇಳಿದೆ.

ವರ್ಗಾವಣೆ /ನಿಯೋಜನೆಗಳನ್ನು ನಿಷೇಧಿಸುವುದು ಮತ್ತು ತಾಂತ್ರಿಕ, ಸಿಬ್ಬಂದಿ ಕೊರತೆಯಾಗದಂತೆ ಕ್ರಮ ವಹಿಸಬೇಕು. ಅಲ್ಲದೇ ಪುನಶ್ಚೇತನ ಮತ್ತು ಸುಧಾರಿತ ತಾಂತ್ರಿಕ ತರಬೇತಿಯನ್ನು ನೀಡಲು ವಿಷಯ ಪರಿಣತರು ಮತ್ತು ಉಪನ್ಯಾಸಕರಿಂದ ತರಬೇತಿ ನಡೆಸಲು ಪಿಡಬ್ಲ್ಯುಡಿ ತರಬೇತಿ ಸಂಸ್ಥೆ ಸ್ಥಾಪಿಸಲು ಶಿಫಾರಸು ಮಾಡಲಾಗಿದೆ.

ಡಿಜಿಟಲ್ ಅರೆಸ್ಟ್: ₹58 ಕೋಟಿ ಲೂಟಿ

ಒಂದನೇ ಪುಟದಿಂದ...

'ಪ್ರಕರಣ ಸಂಬಂಧ ಮಲಾಡ್‌ನ ಅಬ್ದುಲ್ ಕುಲ್ಲಿ (47), ಮಲಾಡ್ ಉಪನಗರದ ಅರ್ಜುನ್ ಕಡ್ವಾಸರ (55) ಮತ್ತು ಈತನ ಸಹೋದರ, ಮುಂಬೈ ಸೆಂಟ್ರಲ್‌ನ ಜೀತರಾಮ್ (35) ಅವರನ್ನು ಬಂಧಿಸಲಾಗಿದೆ. ಮಹಾರಾಷ್ಟ್ರ ಸೈಬರ್ ಇಲಾಖೆಯು ಈ ಪ್ರಕರಣದ ಕುರಿತು ತನಿಖೆ ನಡೆಸುತ್ತಿದೆ' ಎಂದರು.

ಸಂತ್ರಸ್ತ ದಂಪತಿಯ ಖಾತೆಗಳಿಂದ ಹಣ ವರ್ಗಾಯಿಸಿಕೊಂಡ ಖಾತೆಗಳನ್ನು ಸ್ಥಗಿತ ಮಾಡುವಂತೆ ಪೊಲೀಸರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಎರಡು ತಿಂಗಳು ಅರೆಸ್ಟ್

ಒಂದನೇ ಪುಟದಿಂದ...

ತಾವು ನಿಜವಾಗಿಯೂ ಇ.ಡಿ. ಮತ್ತು ಸಿಬಿಐ ಅಧಿಕಾರಿಗಳೇ ಹೌದು ಎಂದು ದಂಪತಿಯನ್ನು ನಂಬಿಸುವುದಕ್ಕೆ ಕೆಲವು ನಕಲಿ ದಾಖಲೆಗಳನ್ನೂ ನೀಡಿದ್ದಾರೆ. ವಿಡಿಯೊ ಕರೆ ಮಾಡುವುದರ ಮೂಲಕ ಆರೋಪಿಗಳು ದಂಪತಿಯನ್ನು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ವಂಚಿಸಿದ್ದರು.

'ನಿಮ್ಮ ಬಳಿ ಇರುವುದು ಅಕ್ರಮ ಹಣವೇ ಇಲ್ಲವೇ ಎಂಬುದನ್ನು ನಾವು ಪರಿಶೀಲಿಸಬೇಕು. ಆದ್ದರಿಂದ ಸ್ವಲ್ಪ ಮೊತ್ತವನ್ನು ನಾವು ಹೇಳಿದ ಖಾತೆಗೆ ವರ್ಗಾಯಿಸಿ. ಪರಿಶೀಲನೆ ಬಳಿಕ ನಿಮ್ಮ ಹಣವನ್ನು ವಾಪಸು ನೀಡುತ್ತೇವೆ' ಎಂದು ಆರೋಪಿಗಳು ಹೇಳಿದ್ದಾರೆ. ಇದರಿಂದ ಬೆದರಿದ ದಂಪತಿ ಹಣ ವರ್ಗಾಯಿಸಿದ್ದಾರೆ.

ಈ ಸುಮಾರು ಎರಡು ತಿಂಗಳಲ್ಲಿ ದಂಪತಿಯು ಕಂತು ಕಂತಾಗಿ ₹58 ಕೋಟಿ ವರ್ಗಾಯಿಸಿದ್ದಾರೆ. ಈ ಎಲ್ಲದರ ಬಳಿಕ, ದಂಪತಿಗೆ ತಾವು ಮೋಸ ಹೋಗಿರುವುದಾಗಿ ಅನುಮಾನ ಬಂದು ಮಹಾರಾಷ್ಟ್ರ ಸೈಬರ್ ವಿಭಾಗದ ಪೊಲೀಸರಿಗೆ ಕಳೆದ ವಾರ ದೂರು ನೀಡಿದ್ದಾರೆ.

ಪದಬಂಧ 6196


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಾಪವಿರುವಾಗಲೇ ಅತೀ ದುಃಖ (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
5.ಇದು ಅಂತರಂಗ ಸ್ಪರ್ಶಿಯಾದುದು (3)
6.ಅವನಲ್ಲಿರುವ ಕೆಟ್ಟಗುಣ (4)
8.ಬರವಿದ್ದಾಗ ನೀಡಿದ ಪಾನಕ (4)
10.ಹೀಗೆ ಮಾಯವಾಗುವಿಕೆ (4)
12.ಗರತಿ ಸೇರಿರುವ ವರ್ಗ (4)
13.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
16.ಅಪಹಾಸ್ಯವನ್ನು ಹೀಗೆನ್ನಿ (4)
17.ನೂತನ ದಂಪತಿಗಳ ವಿಹಾರಯಾತ್ರೆ (4)

ಮೇಲಿಂದ ಕೆಳಕ್ಕೆ

1.ಅತ್ತೆ ಹೇಳಿದ ವಿಳಾಸ! (2)
2.ಪಣ ಕಟ್ಟಿ ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
4.ಹೊಳೆದಾಟಲು ಬಳಸುವ ಸಾಧನ (2)
7.ವರನ ತಗಾದೆಯೇ ಇದು? (3)
9.ಬಹಳವೇ ಆತ್ಮೀಯ ನೆಂಟರ ಸಮೂಹ (3)
11.ಒಂಬತ್ತು ತಿಂಗಳಿದು (4)
12.ಈ ತರ ತೋರಿದ ಬೇಧಭಾವ (4)
14.ನೀರಿನಿಂದ ಸುತ್ತುವರೆದ ಭಾಗ (2)
15.ಕಂದೀಲು ಇಲ್ಲಿದೆ (2)



6195ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸನ್ಮಾನ 2.ಉಪಮಾನ
4.ಜಟ್ಟಿ 5.ವಾತಾಯನ
7.ಧಾಳಿ 8.ಯಮಸ
9.ಜನ 10.ಣಕ್ಷಿದಪ್ರ
11.ವುನೋ 12.ಪರವಶ
13.ಹಮ್ಮೀರ

ಮೇಲಿಂದ ಕೆಳಕ್ಕೆ:
1.ಸಮಾಜಸುಧಾರಣೆ
2.ಉಪವಾಸಸತ್ಯಾಗ್ರಹ
3.ಜಲಾನಯನಪ್ರದೇಶ
6.ನಯನಮನೋಹರ

ಸುಡೊಕು 6580

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		2		9	6		1
9						2	7	4
	7	2	1		4			8
		4		3		1		2
2	8		6	9			4	
		7					6	5
	5							7
		6	8		2		3	
4	2			5		8		6

6579 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಬದುಕಿಗೆ ಶ್ವಾಸವಿದ್ದಂತೆ ಬಾಳಿಗೆ ವಿಶ್ವಾಸ

ನುಡಿ ಬೆಳಗು



ರೇಣುಕಾ ನಿಡಗುಂದಿ

ನಾಡಿನ ಹಿರಿಯ ವಿಚಾರವಾದಿ ಬರಹಗಾರರಾಗಿದ್ದ ಗೌರೀಶ ಕಾಯ್ಕಿಣಿ ತಮ್ಮ ಪ್ರಸಿದ್ಧ 'ವಾಲ್ಮೀಕಿ ತೂಕಡಿಸಿದಾಗ' ವಿಮರ್ಶಾ ಲೇಖನದಲ್ಲಿ ಆಶಾವಾದದ ಬಗ್ಗೆ ಹೇಳುತ್ತಾರೆ: ಅಶೋಕ ವನದಲ್ಲಿ ನಿಟ್ಟುಸಿರಿನ ಮೇಲೆ ಕಂಬನಿಗಳನ್ನು ಪೋಣಿಸುತ್ತ, ವಿಯೋಗದ ದಿನಗಳನ್ನು ಎಣಿಸುತ್ತ ಕುಳಿತ ಸೀತೆಗೂ ಇದೇ ಆಶೆಯೇ ಒಂದು ಆಧಾರ. ಆಶಾವಾದಿಯಾದವನಿಗೆ ನೂರು ವರ್ಷ ಕಾದರೂ ಆನಂದ ಲಭಿಸುತ್ತದಂತೆ. ಸುಮಿತ್ರೆ, ಭರತ, ಸೀತೆ, ಶಬರಿ, ಅಹಲ್ಯೆ ಮುಂತಾದವರು ಇದೇ ಒಂದು ಆಶಾವಾದದಿಂದ ಉತ್ಸಾಹ ತಾಳಿ ಬದುಕಿದರು. ಹೀಗೆ ಬದುಕಿಗೆ ಶ್ವಾಸವಿದ್ದಂತೆ ಬಾಳಿಗೆ ವಿಶ್ವಾಸ. ಅದುವೇ ಶ್ರದ್ಧೆಯಾಗಿ ನಿಷ್ಠೆಯಾಗಿ ಭಕ್ತಿಯಾಗಿ ಮೊಗ ಪಡೆಯುತ್ತದೆ–ಶ್ರದ್ಧಾಮಯಃ ಅಯಂ ಪುರುಷಃ. ಇದುವೇ ರಾಮನ ಕರ್ತವ್ಯನಿಷ್ಠೆ. ಸೀತೆಯ ಪತಿಭಕ್ತಿ, ಹನುಮಂತನ ಸ್ವಾಮಿನಿಷ್ಠೆ. ಈ ಶ್ರದ್ಧೆಯ ಹೊರಮೈ (ಸಹನೆ) ತಿತೀಕ್ಷೆ- ತಾಳುವ ತ್ರಾಣ. ಇದನ್ನು ತೋರಿದವರು ರಾಮಾಯಣದಲ್ಲಿ ಯಶಸ್ವಿಯಾದರು, ಕೃತಾರ್ಥರಾದರು. ಅಹಲ್ಯೆ ಕಾದು ನಿಂತಳು. ಭರತ ಕಾದು ನಿಂತನು. ಸೀತೆ ಕಾದು ನಿಂತಳು. ಶಬರಿ ಕಾದು ನಿಂತಳು. ಸಂಪಾತಿ ಕಾದು ನಿಂತನು. ಈ ಕಾಯುವ ಕೆಚ್ಚಿನಿಂದ ತಿತೀಕ್ಷೆಯ ಒರೆಗಲ್ಲ ಮೇಲೆ ಅವರ ತತ್ವಪರೀಕ್ಷೆ ಆಯಿತು. ಆದರೆ, ಇದಕ್ಕೆ ಎರುದ್ಧವಾಗಿ ತಾಳ್ಮೆಗೆಟ್ಟವರು ಗೋಳಿಗೆ ಕೇಡಿಗೆ ಗುರಿಯಾದರು...'

ವರ್ತಮಾನದ 'ಅಚ್ಛೇ ದಿನ'ಗಳನ್ನು ಗಮನಿಸುವಾಗ, ಪ್ರಪಂಚದ ಇತರ ಭಾಗಗಳಲ್ಲಿ ನಡೆಯುತ್ತಿರುವ ಯುದ್ಧದ ಸರ್ವನಾಶವನ್ನು ನೋಡಿದಾಗ ಈ ಕಾಲ ಯಾವ ಮನ್ವಂತರಕ್ಕಾಗಿ ಕಾಯುತ್ತಿದೆ, ಈ ಲೋಕದ ಮನುಷ್ಯರು ಎದುರುನೋಡುತ್ತಿರುವ ಒಳ್ಳೆಯ ಕಾಲ, ಒಳ್ಳೆಯ ದಿನಗಳು ಯಾವುವು ಹಾಗಾದರೆ ಎಂಬ ಜಿಜ್ಞಾಸೆ ಹುಟ್ಟುತ್ತದೆ. ಯುದ್ಧ ರಾಜ್ಯಕ್ಕೆ, ರಾಜಕೀಯಕ್ಕೆ ಬೇಕೇ ಹೊರತು ಅಲ್ಲಿ ವಾಸಿಸುವವರಿಗೆ ಬೇಕಿಲ್ಲ. ಜನರು ಬಯಸುವುದು ನೆಮ್ಮದಿಯ ಬದುಕು ಮಾತ್ರ. ಸಂಪತ್ತು ಸಮೃದ್ಧಿಯಿಲ್ಲದಿದ್ದರೂ ಅಡ್ಡಿಯಿಲ್ಲ. ಆದರೆ, ಶಾಂತಿಯುತ ಬದುಕು ಬೇಕು. ಅದಕ್ಕಾಗಿ ಎಷ್ಟು ಜನ್ಮವಾದರೂ ಕಾಯಬಲ್ಲ, ಎಷ್ಟೇ ಕಷ್ಟಗಳನ್ನು ಸಹಿಸಬಲ್ಲ ತಾಳ್ಮೆ ಮನುಷ್ಯರಿಗಿದೆ. ರಷ್ಯಾ– ಉಕ್ರೇನ್ ಯುದ್ಧ, ಗಾಜಾ ಪಟ್ಟಿಯ ಸರ್ವನಾಶಗಳನ್ನು ನೋಡಿದರೆ ಇಡೀ ಊರಿಗೆ ಊರೇ, ಪಟ್ಟಣಗಳೇ ನೆಲಸಮವಾಗಿವೆ. ಯುದ್ಧದಲ್ಲಿ ಮಹಿಳೆಯರು ಮತ್ತು ಮಕ್ಕಳನ್ನೇ ಗುರಿಯಾಗಿಸಿಕೊಂಡು ದಾಳಿ ಮಾಡಿದ ನರಮೇಧಗಳನ್ನು ಇತಿಹಾಸವೆಂದಾದರೂ ಮರೆಯಬಹುದೇ? ಒಂದು ದೇಶ ಇನ್ನೊಂದು ದೇಶವನ್ನು ಧ್ವಂಸಮಾಡಿ ದಿಗ್ವಿಜಯವನ್ನು ಸಾಧಿಸಿದರೇನಂತೆ, ಎಲ್ಲಾ ಆಧಿಪತ್ಯಗಳಿಗೂ ಕೊನೆಯೆಂಬುದಿದೆ. ಪರಾಕ್ರಮಿ, ಸಕಲಕಲಾ ಪಾಂಡಿತ್ಯವಿದ್ದ ಪರಮಶಿವಭಕ್ತ ರಾವಣನ ಅಂತ್ಯವಾಗಲಿಲ್ಲವೇ? ಹಿಟ್ಲರ್ ಕೂಡ ಹೊರತಾಗಲಿಲ್ಲವಲ್ಲ.

ಈ ಜಗತ್ತೂ ಕಾಯುತ್ತಿದೆ, ಶಾಂತಿಸ್ಥಾಪನೆಗಾಗಿ. ಆದರೆ ಕಾಯುವವರನ್ನು ಕಾಣದಂತೆ ಅಧಿಕಾರ ಸೂತ್ರ ಹಿಡಿದ ರಾಜಕಾರಣಿಗಳು ದುರಹಂಕಾರ, ದರ್ಪದಲ್ಲಿ ತಾವೂ ಮನುಷ್ಯರು ಎಂಬುದನ್ನೇ ಮರೆತಂತಿದೆ. ಯಾವ ಸಹನೆಯ ಒರೆಗಲ್ಲ ಮೇಲೆ ಮನುಷ್ಯರ ಸತ್ವಪರಿಕ್ಷೆ ಆಗುತ್ತಿದೆ ಇಲ್ಲಿ? ಉತ್ತರ ಭಾರತದಲ್ಲಿ ದಸರೆಯ ರಾವಣನ ಪ್ರತಿಮೆಯೇನೋ ಸುಟ್ಟು ಭಸ್ಮವಾಗುತ್ತದೆ. ಮನುಷ್ಯನೊಳಗಿನ ರಾವಣ ಮಾತ್ರ ಕಾಯುತ್ತಿದ್ದಾನೆ, ರಾಮನಿಗಾಗಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಅಕ್ಟೋಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಏಕಾದಶಿ ಗಂ. 11-13 **ನಕ್ಷತ್ರ:** ಮಘ ಗಂ. 13-58, **ಯೋಗ:** ಶುಕ್ಲ (ಶುಕ್ರ) ಗಂ. 25-49 ಕರಣ: ಬಾಲವ ಗಂ. 11-13 ಕನ್ಯಾ ಮಾಸದ 30 ನೇ ದಿನ. ಮಳೆ ನಕ್ಷತ್ರ : ಚಿತ್ತಾ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 12-00 , **ಸೂರ್ಯೋದಯ :** 06-25 ಸೂರ್ಯಾಸ್ತ : 06-07, ಮುಸ್ಲಿಂ ದಿನಾಂಕ : 24 ರಬಿಯುಸ್ಸಾನಿ , **ದಿನ ವಿಶೇಷ :** ತುಲಾ ಸಂಕ್ರಮಣ, ಕಾವೇರಿ ಸಂಕ್ರಮಣ ಸ್ನಾನ, **ಅದೃಷ್ಟ ಸಂಖ್ಯೆ :** 3, 8

ಮೇಷ: ಪ್ರಯಾಣದ ಅವಕಾಶ ಒದಗಿ ಬರಬಹುದು. ಮನೆಯ ವಿಷಯಗಳತ್ತ ಹೆಚ್ಚಿನ ಗಮನಹರಿಸ ಬೇಕಾಗುತ್ತದೆ. ವ್ಯವಹಾರದ ಅಭಿವೃದ್ಧಿಗೆ ಒಳ್ಳೆಯ ಪಾಲುದಾರರೊಬ್ಬರು ದೊರೆಯಲಿದ್ದಾರೆ.

ವೃಷಭ: ಎದುರಾಗಿರುವ ಸಂದಿಗ್ಧ ಪರಿಸ್ಥಿತಿ ಮಾರ್ಗದರ್ಶಕರ ಸಲಹೆ ಪಡೆದು ನಿಭಾಯಿಸುವುದು ಒಳ್ಳೆಯದು. ಹಣಕಾಸಿನ ವಿಷಯದಲ್ಲಿ ಅಸ್ಥಿರತೆ ಎದುರಾಗುವುದು. ಗುರಿಯನ್ನು ಸಾಧಿಸುವ ಬಗ್ಗೆ ಮಾತ್ರ ಗಮನವಿರಲಿ.

ಮಿಥುನ: ವಿವಾಹ ವಿಷಯಗಳು ನಿಶ್ಚಿತಗೊಂಡಿದ್ದರೂ ದೃಢಪಡಿಸಿಕೊಳ್ಳುವುದು ಉತ್ತಮ ಅನಿಸುತ್ತದೆ. ಮುಕ್ತ ಮಾತುಕತೆಗಳಿಂದ ವ್ಯವಹಾರ ಸಿಗುತ್ತದೆ. ಮಾಧ್ಯಮ ಸಂಸ್ಥೆಗಳವರಿಗೆ ಉತ್ತಮ ದಿನ.

ಕರ್ಕಾಟಕ: ಹೆಚ್ಚಿನ ಉತ್ಸಾಹ ಕಾಣಿಸುತ್ತಿದ್ದು ಹೊಸದೊಂದು ಹಾದಿಯಲ್ಲಿ ನಡೆಯಲಿದ್ದೀರಿ. ಹವಾಮಾನ ಬದಲಾವಣೆ ಆರೋಗ್ಯದ ಮತ್ತು ಮನಸ್ಥಿತಿಯ ಮೇಲೆ ಪ್ರಭಾವ ಬೀರಲಿದೆ. ಸುಬ್ರಹ್ಮಣ್ಯನ ಸೇವೆಯಿಂದ ಶುಭಪ್ರಾಪ್ತಿ.

ಸಿಂಹ: ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವಿರಿ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ ವೃತ್ತಿ ಮತ್ತು ಸಹ-ಕೆಲಸಗಾರರತ್ತ ಗಮನಹರಿಸಿ.

ಕನ್ಯಾ: ಕಾರ್ಯರಂಗದಲ್ಲಿ ಶ್ರದ್ಧೆಗೆ ಮತ್ತು ಶ್ರಮಕ್ಕೆ ತಕ್ಕ ಫಲ ನಿರೀಕ್ಷಿಸಬಹುದು. ನಿಜ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ವ್ಯವಹಾರದಲ್ಲಿ ಉತ್ತಮ ಲಾಭವಿರುವುದು.

ತುಲಾ: ವಿನಾಶಕಾರಿ ಪ್ರವೃತ್ತಿಗಳನ್ನು ದ್ವೇಷಿಗಳೇ ಆಗಿದ್ದರೂ ಪ್ರಯೋಗಿಸುವ ಯೋಚನೆ ಮಾಡದಿರಿ. ಸಂಸಾರ ನಿರ್ವಹಣೆಯ ವಿಷಯದಲ್ಲಿ ಖಚಿತ ನಿರ್ಧಾರ ತೆಗೆದುಕೊಳ್ಳಬೇಕಾಗುವುದು. ವ್ಯವಹಾರದಲ್ಲಿ ಚಾಣಾಕ್ಷತನ ಇರಲಿ.

ವೃಶ್ಚಿಕ: ಕರಗತವಾಗಿರುವ ಕೆಲಸವನ್ನೇ ಮಾಡಲು ಹೇಳಿದಾಗ ಗಡಿಬಿಡಿಯ ಕಾರಣವಾಗಿ ವ್ಯತ್ಯಾಸಗಳಾಗಬಹುದು. ಮನೆ ಸ್ವಚ್ಛತಾ ಪ್ರಕ್ರಿಯೆಯಲ್ಲಿ ಹಳೆ ನೆನಪನ್ನು ಮರುಕಳಿಸುವಂಥ ವಸ್ತುಗಳು ಲಭ್ಯವಾಗುತ್ತವೆ.

ಧನು: ಉನ್ನತ ವ್ಯಾಸಂಗದ ವಿಚಾರದಲ್ಲಿ ನಿಮ್ಮ ನಿಲುವನ್ನು ತಿಳಿಸಿ. ಸಾಮರಸ್ಯದ ಬದುಕನ್ನು ಮಕ್ಕಳಿಗೆ ಮನವರಿಕೆ ಮಾಡದ ಹೊರತು ಕೌಟುಂಬಿಕ ಕಲಹಗಳು ಇತ್ಯರ್ಥವಾಗದು.

ಮಕರ: ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರವಾಗುವುದು. ಕಠಿಣ ದಿನವಾಗಿರುತ್ತದೆ. ಮನೋನಿಯಂತ್ರಣದಿಂದ ಆರೋಗ್ಯವನ್ನು ಮತ್ತು ಮನಸ್ಸಿನ ಅಸಮಾಧಾನಗಳನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ.

ಕುಂಭ: ಎಲ್ಲಾ ವಿಷಯಗಳಲ್ಲೂ ಮುಂದಾಲೋಚನೆ ಹಾಗೂ ವಿವೇಚನೆಯಿಂದ ನಡೆದುಕೊಂಡಲ್ಲಿ ಹೆಚ್ಚಿನ ಏಳಿಗೆ, ಯಶಸ್ಸು ಸಿಗಲಿದೆ. ದಿನದ ಆರಂಭದಲ್ಲಿ ವಿಪರೀತ ಶ್ರಮ ಪಡಬೇಕಾಗಿ ಬರುವುದು. ವ್ಯಾಪಾರದಲ್ಲಿ ಲಾಭವಿದೆ.

ಮೀನ: ಪ್ರಕೃತಿಯ ಸಣ್ಣ ಸಣ್ಣ ಬದಲಾವಣೆಗಳನ್ನು ಗಮನಿಸಿ ಬರೆದಂಥ ಕಾವ್ಯವು ಜನಮಾನಸವನ್ನು ಗೆಲ್ಲಲಿದೆ. ವೃತ್ತಿ ವಿಷಯಗಳಲ್ಲಿ ಬಯಸದೇ ಸದವಕಾಶ ಎದುರಾಗುತ್ತದೆ. ಬಂದಂತಹ ಅವಕಾಶಗಳಿಂದ ತಪ್ಪಿಸಿಕೊಳ್ಳಬೇಡಿ.

ಗುಂಡಣ್ಣ

